ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೬೩
ವಿಚಾರ ಸಾಹಿತ್ಯಮಾಲೆ – ೬೬
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ನನ್ನ ಬಾಳಿನೊಳಗೆ ಭಗವಂತ ಹೇಗೆ ಪ್ರವೇಶಿಸಿದ

(ಶ್ರೇಣಿ ೨)

## ಭವನದ ಗ್ರಂಥ ವಿಶ್ವವಿದ್ಯಾನಿಲಯ


ಮಾಲೆಯ
ಮೂಲ ಸಂಪಾದಕರು
**ಆರ್. ಆರ್. ದಿವಾಕರ್**
**ಎಸ್. ರಾಮಕೃಷ್ಣನ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ. ಕೆ. ಬಿರ್ಲಾ** – ಸದಸ್ಯರು
**ಎಸ್. ಜಿ. ನೇವಾತಿಯ** – ಸದಸ್ಯರು
**ಜಿ. ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಕರ್ನಾಟಕ)

**ಎಚ್. ಎನ್. ಸುರೇಶ್**
(ನಿರ್ದೇಶಕರು, ಭಾರತೀಯ ವಿದ್ಯಾ ಭವನ, ಬೆಂಗಳೂರು)

**ಡಾ. ಎ. ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಮೈಸೂರು)




# ನನ್ನ ಬಾಳಿನೊಳಗೆ ಭಗವಂತ ಹೇಗೆ ಪ್ರವೇಶಿಸಿದ

(ಶ್ರೇಣಿ ೨)

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I ೮೯–೧

**ಸಂಪಾದಿತ**


ಅನುವಾದ
**ಪ್ರೊ. ಟಿ. ಎಸ್. ವೆಂಕಣ್ಣಯ್ಯ**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Nanna Balinolage Bhagavanta Hege Praveshisida:** Kannada translation of *How God Came into My Life* ; Kannada translation by **Prof. T. S. Venkannaiah;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxii + 58. Price : Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೩
ಪುಟಗಳು : xxii + ೫೮
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

**‘ಕನಕದಾಸರ ಕೃತಿ’**ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು ‘ಸಂಶೋಧನ ಕೇಂದ್ರ’ ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)



ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ ‘ಕಾವೇರಿ ನ್ಯಾಯಾಧಿಕರಣದ ತೀರ್ಪಿ’ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ ‘ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ’ ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಬಸವರಾಜು)



ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಆರ್. ರಾಮಕೃಷ್ಣ)



## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು



ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆರ್ಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

# ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಇದು *How God Came into My Life* ಪುಸ್ತಕದ ಕನ್ನಡ ಅನುವಾದ. 'ನನ್ನ ಬಾಳಿನೊಳಗೆ ಭಗವಂತ ಹೇಗೆ ಪ್ರವೇಶಿಸಿದ' ಎಂಬ ಹೆಸರಿನಲ್ಲಿ ಇದನ್ನು ದಿವಂಗತ ಪ್ರೊ. ಟಿ. ಎಸ್. ವೆಂಕಣ್ಣಯ್ಯ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



# ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೯೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ  ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

**ಕೆ. ಎಂ. ಮುನ್ಷಿ**



## ಪ್ರಕಾಶಕರ ಟಿಪ್ಪಣಿ

ಸಂತರು ಮತ್ತು ದ್ರಷ್ಟಾರರು ಚೈತನ್ಯ ಸಾಮ್ರಾಜ್ಯದಲ್ಲಿನ ವಿಜ್ಞಾನಿಗಳು. ಅವರು ದೇವರೊಂದಿಗೆ 'ಪ್ರಯೋಗಗಳನ್ನು ನಡೆಸಿದ್ದಾರೆ ಮತ್ತು ಅವರು 'ಆತ'ನನ್ನು ಮನಗಂಡಿದ್ದಾರೆ. ವಿಜ್ಞಾನಿ ತಾನು ಪ್ರಯೋಗದಲ್ಲಿ ತೊಡಗಿರುವ ವಸ್ತುಗಳನ್ನು ಕಂಡಿರುವಷ್ಟೇ ಸ್ಪಷ್ಟವಾಗಿ ದೇವರನ್ನು ಅವರು ಮುಖಾಮುಖಿಯಾಗಿ ಕಂಡಿದ್ದಾರೆ.

ಅಂತಹ ಸಂತರು ಸ್ವರ್ಗದ ವಿಡಗಗಳು ಮತ್ತು ಚೈತನ್ಯದ ಹಾಡು ಕವಿಗಳು ಅವರು ಭೂಮಿಗೆ ಅಲ್ಪಕಾಲದ ವಸತಿಗಾಗಿ ಆಗಮಿಸುತ್ತಾರೆ. ಅವರ ಕಾಲ ಮುಗಿದೊಡನೆ ಅವರು ದೇವತೆಗಳ ಲೋಕಗಳಿಗೆ ಹಾರಿಹೋಗುತ್ತಾರೆ. ಅವರು ಮೇಲೆ ಹಾರುವುದಕ್ಕಿರುವ ಎರಡು ರೆಕ್ಕೆಗಳು ನಿರ್ಲಿಪ್ತತೆ ಮತ್ತು ಭಕ್ತಿ. ಹಾರುತ್ತಲಿರುವಂತೆಯೇ ಅವರು ಭಗವಂತನ ನಾಮವನ್ನು ಹಾಡುತ್ತಾರೆ; ಮತ್ತು ಹಾಡುತ್ತಲೇ ಎತ್ತರಕ್ಕೆ, ಮತ್ತೂ ಎತ್ತರಕ್ಕೆ, ಮರ್ತ್ಯ ಜೀವನದ ನಿರರ್ಥಕತೆಗಳನ್ನು ಮೀರಿ ಎತ್ತರಕ್ಕೆ ಹಾರುತ್ತಾರೆ.

ಮಾನವ ಭಗವಂತನತ್ತ ಹೆಜ್ಜೆ ಇರಿಸಿದಾಗ ಭಗವಂತ ಮಾನವನತ್ತ ಧಾವಿಸಿ ಬರುತ್ತಾನೆ. ಧರ್ಮ ದ್ವಿಮುಖವಾದ ಸಂಚಾರ. ಅದು ದೇವರ ಪಾದಪೀಠಕ್ಕೆ 'ಆರೋಹಣ' ಮಾಡಲು ಮನುಷ್ಯನಿಗೆ ಆಧಾರವಾಗಿರುತ್ತದೆ. ಅದು, ಮನುಷ್ಯನ ಆತ್ಮದೊಳಗೆ ಭಗವಂತನ 'ಅವತರಣ'ವೆಂಬುದನ್ನೂ ಸೂಚಿಸುತ್ತದೆ.

ಕೆಲವೊಮ್ಮೆ ದೇವರು ಪ್ರಾರ್ಥನೆಯ ಮೂಲಕ 'ಆಹ್ವಾನಿತ'ನಾಗಿ ಮಾನವನೆಡೆಗೆ ಆಗಮಿಸುತ್ತಾನೆ. ಬಹುವೇಳೆ 'ಆತ' ಮನುಷ್ಯನ ಮೇಲೆ ಆಕ್ರಮಣ ಮಾಡುತ್ತಾನೆ. ಆತನ ದಂಗೆಕೋರ ಹೃದಯಕ್ಕೆ ಲಗ್ಗೆಯಿಡುತ್ತಾನೆ ಮತ್ತು ಅದನ್ನು 'ತನ್ನದೇ' ಭಾಗವನ್ನಾಗಿ ಮಾಡಿಕೊಳ್ಳುತ್ತಾನೆ. ಭಗವಂತನ ಅನುಗ್ರಹಕ್ಕೆ ಸಂಪೂರ್ಣವಾಗಿ ಪಾತ್ರನಾಗದಿರುವಂತೆ ತೀರ ನೀತಿಭ್ರಷ್ಟನಾದವನು ಅಥವಾ ಪರಿತ್ಯಕ್ತನಾದವನು ಯಾರೂ ಇರಲಾರ. ಪಾಪಾತ್ಮನ ಜೀವನದ ದಾರಿಗೆಟ್ಟ ಪಥಕ್ಕೆ 'ಆತ' ತಡೆಯೊಡ್ಡುತ್ತಾನೆ. ಆತನ ಮನಸ್ಸನ್ನು ಶುದ್ಧೀಕರಿಸುತ್ತಾನೆ, ಆತನ ಹೃದಯವನ್ನು ಪವಿತ್ರಗೊಳಿಸುತ್ತಾನೆ, ಮತ್ತು ಆತನ ಆತ್ಮವನ್ನು ಪುನರುಜ್ಜೀವನಗೊಳಿಸುತ್ತಾನೆ. ಮತ್ತೆ ಕೆಲವರಲ್ಲಿಗೆ 'ತನ್ನ'ದೇ ಆದ ಆತ್ಮದಲ್ಲಿ ತಮ್ಮ ಹೃದಯ ಮತ್ತು ನೆಲೆಯನ್ನು ಕಂಡುಕೊಳ್ಳಲು ಅವರನ್ನು ಪ್ರಲೋಭನಗೊಳಿಸುತ್ತ ಒಂದು ಧ್ವನಿ ಅಥವಾ ಒಂದು ದರ್ಶನವಾಗಿ 'ಆತ' ಬರುತ್ತಾನೆ. 'ಆತ' ಹೇಗೆ ಬರುತ್ತಾನೆ ಅಥವಾ 'ತನ್ನ' ಆಗಮನದ ರೀತಿಯನ್ನು ಹೇಗೆ ಮಿತಿಗೊಳಿಸಿಕೊಳ್ಳುವನೆಂಬುದನ್ನು ವ್ಯಕ್ತಿಯೊಬ್ಬನು ಪೂರ್ವಭಾವಿಯಾಗಿ ಕಾಣಲಾಗುವುದಿಲ್ಲ. ಆದರೆ, ಮನುಷ್ಯ ತನ್ನ ಬಾಗಿಲನ್ನು ತೆರೆದಿರಿಸುವುದೇ ಆದರೆ, ಅದೇಕೆ, ದೇವರಿಗೆ ವಿರುದ್ಧವಾಗಿ ಮನುಷ್ಯ ತನ್ನ ಬಾಗಿಲನ್ನು ಮುಚ್ಚಿದರೂ ಸಹ " 'ಆತ' ಬರುತ್ತಾನೆ, 'ಆತ' ಬರುತ್ತಾನೆ, 'ಆತ' ಎಂದೆಂದಿಗೂ ಬರುತ್ತಾನೆ."

ಪ್ರಪಂಚ ಇಂದು ಅದಿರುವುದಕ್ಕಿಂತಲೂ ಹೆಚ್ಚು ಕಶ್ಮಲಮಯವಾಗಿಲ್ಲದಿದ್ದಲ್ಲಿ ಮತ್ತು ಭಗವಂತನ ಸಾರಾಂಶಗಳಾಗಿರುವ ಸತ್ಯ, ಶಿವ ಮತ್ತು ಸುಂದರದ ಪ್ರಧಾನ ಮೌಲ್ಯಗಳ ಉಳಿವಿನ ಭರವಸೆ ಇನ್ನೂ ಇರುವುದಾದರೆ ಅದಕ್ಕೆ ಕಾರಣ 'ಭಗವಂತನೊಂದಿಗೆ ನಡೆದಾಡಿರುವ' ಮತ್ತು ಇತರರಿಗೆ ಅನುಸರಿಸಲು ಮಾರ್ಗವನ್ನು ತೋರಿರುವ ಪವಿತ್ರರಾದ ವ್ಯಕ್ತಿಗಳ ಮೆರವಣಿಗೆ ಮತ್ತು ಅವರಿಗೆ ನಾವು ಧನ್ಯರಾಗಿರಬೇಕು, ಇಂತಹ ಅವನತಿಯ ಕಾಲದಲ್ಲಿಯೂ ಅಂತಹ ವ್ಯಕ್ತಿಗಳು ದುಲರ್ಭರಾಗಿಲ್ಲ. ಈ ಪವಿತ್ರ ವ್ಯಕ್ತಿಗಳ ಜೀವನಗಳು, ನಾವು ಅವರ ಕರೆಯನ್ನು ಆಲಿಸಿದ್ದೇ ಆದರೆ, ನಮ್ಮ ಜೀವನಗಳನ್ನು ನಾವೂ ಸಹ ಮಹೋನ್ನತವನ್ನಾಗಿ ಮಾಡಿಕೊಳ್ಳಬಹುದೆಂಬುದನ್ನು ಮತ್ತೆ ಮತ್ತೆ ನೆನಪಿಸುತ್ತವೆ.

ಮುಂದಿನ ಪುಟಗಳು ಅಂತಹ ಕೆಲವರು ಸಂತರು ಮತ್ತು ದ್ರಷ್ಟಾರರು ತಿಳಿಸಿದಂತೆ ಅಥವಾ ಅವರ ಬರವಣಿಗೆಗಳಿಂದ ಸಂಗ್ರಹಿಸಲಾದಂತೆ 'ಭಗವಂತ ನನ್ನ ಬಾಳಿನೊಳಗೆ ಹೇಗೆ ಪ್ರವೇಶಿಸಿದ'ನೆಂಬುದರ ಮಿನುಗುನೋಟಗಳನ್ನು ಒದಗಿಸುತ್ತವೆ. ಭಗವಂತ ಅವರ ಸಮಗ್ರ ಅಸ್ತಿತ್ವವನ್ನು ಹೇಗೆ ಪರಿವರ್ತನೆಗೊಳಿಸಿದ ಮತ್ತು ಅದನ್ನು ಹೇಗೆ ತನಗೆ ಅಭಿಮುಖಗೊಳಿಸಿಕೊಂಡನೆಂಬುದನ್ನು ಅವು ವಿವರಿಸುತ್ತವೆ.

ನಿಜವಾಗಿಯೂ ಅವರಲ್ಲಿ ಪ್ರತಿಯೊಬ್ಬರೂ ಚೈತನ್ಯದ ಸಾಹಸಕಾರ್ಯದಲ್ಲಿ ಪಥಾನ್ವೇಷಕರಾಗಿದ್ದರು; ಮತ್ತು ಎಲ್ಲ ಪಥಗಳೂ ಅಂತಿಮವಾಗಿ ಒಂದೇ ಗುರಿಯತ್ತ ಸೇರುವಂತೆ ಮಾಡುತ್ತವೆ. ಏಕೆಂದರೆ, ಮಾರ್ಗಗಳು 'ಮಾನವನಿಂದ ನಿರ್ಮಿತ'ವಾದುವುಗಳಲ್ಲ; ಅವರು ಎಲ್ಲಿಂದಲಾದರೂ ಪ್ರಾರಂಭಿಸಿರಲಿ 'ತನ್ನನ್ನು' ತಲುಪಲು 'ತನ್ನ' ಮಕ್ಕಳಿಗಾಗಿ ಅವು 'ದೇವರಿಂದಲೇ ಸ್ಥಾಪಿತವಾದುವುಗಳು.'



# ಪರಿವಿಡಿ


| | |
|---|---|
| ಮುನ್ನುಡಿ | v |
| ಸಂದೇಶ | vii |
| ಹಾರೈಕೆ | viii |
| ಪ್ರಾಸ್ತಾವಿಕ ನುಡಿ | ix |
| ಪೀಠಿಕೆ | xi |
| ಅರಿಕೆ | xiv |
| ಕುಲಪತಿಗಳ ಪ್ರಸ್ತಾವನೆ | xv |
| ಪ್ರಕಾಶಕರ ಟಿಪ್ಪಣಿ | xvii |
| ೧. ಶ್ರೀ ರಾಮಕೃಷ್ಣ ಪರಮಹಂಸ<br>–'ಮಾತೆಯ ಅದ್ಭುತವಾದ ದರ್ಶನ' | ೧ |
| ೨. ಮಹರ್ಷಿ ದೇವೇಂದ್ರನಾಥ ಠಾಕೂರ್<br>–'ದೇವರು ಆತನ ಕನಸಿನಲ್ಲಿ ಆತನಿಗೆ ಮಾರ್ಗದರ್ಶನ ಮಾಡಿದ' | ೭ |
| ೩. ಡಾ॥ ಆನಿ ಬೆಸೆಂಟ್<br>–ದೈವವಾಣಿ ಜೀವನದ ಜಟಿಲ ಸಮಸ್ಯೆಯನ್ನು ಪರಿಹರಿಸಿತು' | ೧೦ |
| ೪. ರವೀಂದ್ರನಾಥ ಠಾಕೂರ್<br>–'ದರ್ಶನ' | ೧೩ |
| ೫. ಸ್ವಾಮಿ ವಿವೇಕಾನಂದ<br>–'ಗೆಲಿಲಿಯನ್ ಜಯಿಸುತ್ತಾನೆ | ೧೯ |
| ೬. ಮಹಾತ್ಮಾ ಗಾಂಧಿ<br>–'ದೇವವಾಣಿ' | ೨೩ |
| ೭. ಶ್ರೀ ಅರವಿಂದೂ<br>–'ಧರ್ಮದಿಂದ ಮತ್ತು ಧರ್ಮಕ್ಕಾಗಿ ಭಾರತ ತಲೆಯೆತ್ತಿ ನಿಲ್ಲುತ್ತದೆ' | ೨೬ |
| ೮. ಫ್ರಾಂಕ್ ಎನ್. ಡಿ. ಬಕಮನ್<br>–'ನಿನ್ನ ಸಂಕಲ್ಪವನ್ನು ತೊಡೆದುಹಾಕು' | ೩೬ |
| ೯. ಅಪ್ಟನ್ ಸಿಂಕ್ಲೇರ್<br>–ದೇವರು ನನಗೆ ಧೈರ್ಯ, ಮನೋದಾರ್ಢ್ಯ, ಭರವಸೆ ಮತ್ತು ಪ್ರೀತಿಯನ್ನು ನೀಡಿದ' | ೪೧ |

೧೦. ಶ್ರೀ ರಮಣ ಮಹರ್ಷಿ
–'ಮಹಾ ಜ್ಞಾನೋದಯ' ೪೬
೧೧. ಸ್ವಾಮಿ ರಾಮದಾಸ್
–'ಗುರುವಿನ ಅನುಗ್ರಹ ನನ್ನ ಅಜ್ಞಾನವನ್ನು ಬಯಲು ಮಾಡಿತು' ೪೯
೧೨. ಸ್ವಾಮಿ ಶಿವಾನಂದ
–'ಭಗವಂತ ಕೃಷ್ಣನಾಗಿ ಗೋಚರಿಸಿದ' ೫೨



# ನನ್ನ ಬಾಳಿನೊಳಗೆ ಭಗವಂತ ಹೇಗೆ ಪ್ರವೇಶಿಸಿದ

(ಶ್ರೇಣಿ ೨)

### ಸರಣಿ ಎರಡು

## ೧. ಶ್ರೀ ರಾಮಕೃಷ್ಣ ಪರಮಹಂಸ

(ಕ್ರಿ. ಶ. ೧೮೩೬–೧೮೮೬)

[ಕಾಳಿ ದೇವಸ್ಥಾನವೊಂದರಲ್ಲಿ ಗಂಗಾಧರನೆಂಬ ಹೆಸರಿನಿಂದ ಪೂಜಾರಿಯಾಗಿ ಪ್ರಾರಂಭಿಸಿದ ಅವರು ವಿಶ್ವವ್ಯಾಪಿಧರ್ಮದ ಸಂತನಾಗಿ ಹೊರಹೊಮ್ಮಿದರು. ಚೈತನ್ಯದ ವಾಸ್ತವತೆಯನ್ನು ಕುರಿತಂತೆ ಸಿನಿಕತನದ ಒಂದು ಯುಗದಲ್ಲಿ ಅವರು ವಿಜ್ಞಾನದ ಖಚಿತತೆಯೊಂದಿಗೆ ಜನ ದೇವರನ್ನು ಕಾಣುವಂತೆ ಮಾಡಿದರು. ೧೯ನೆಯ ಶತಮಾನದ ಅಪರೂಪದ ಆಧ್ಯಾತ್ಮಿಕ ಅಲೌಕಿಕ ವ್ಯಕ್ತಿಯಾದ ಅವರು ಆಯಾ ಧರ್ಮದಲ್ಲಿಯೇ ಜನಿಸಿದ್ದವರೋ ಎಂಬಂತೆ ಪ್ರತಿಯೊಂದು ಸಾಧನೆಯನ್ನೂ ಆಚರಿಸಿದರು ಮತ್ತು ಭಕ್ತಿಯ ಎಲ್ಲ ಭಾವಗಳನ್ನೂ ಅನುಭವಿಸಿದರು. ಎಲ್ಲ ಧರ್ಮ ಮತ್ತು ಮತಗಳನ್ನೂ ತಮ್ಮಲ್ಲಿ ಮೂರ್ತೀಕರಿಸಿಕೊಳ್ಳುತ್ತ ಶ್ರೀ ರಾಮಕೃಷ್ಣರು ತಮ್ಮ ಆಚರಣೆಗಳು ಮತ್ತು ಸಾಕ್ಷಾತ್ಕಾರಣದಿಂದ ಭಗವಂತನತ್ತ ತಲುಪುವ ಎಲ್ಲ ರೂಪಗಳ ಮೌಲ್ಯ ಮತ್ತು ಅಂಗೀಕಾರಾರ್ಹತೆಯನ್ನು ಋಜುವಾತು ಪಡಿಸಿದರು. ತಮ್ಮ ಧರ್ಮಪತ್ನಿ ಶ್ರೀ ಶಾರದಾಮಣಿದೇವಿಗೆ, ಆಕೆ ಸ್ವಯಂ ದೈವೀಮಾತೆಯೆಂದು ಪರಿಗಣಿಸಿ ಸಮರ್ಪಿಸಿದ 'ಷೋಡಶೀಪೂಜೆ' ಸಂತಚರಿತೆಯು ಪುಟಗಳಲ್ಲಿ ಪೂರ್ವೋದಾಹರಣೆಗಳಿಲ್ಲದ ಒಂದು ಧಾರ್ಮಿಕ ಅಚ್ಚರಿಯಾಗಿದೆ. ಗುರುದೇವರ ಸಂಭಾಷಣೆಗಳ ಪದಶಃ ವಿವರಣೆಯಾಗಿರುವ 'ಶ್ರೀ ರಾಮಕೃಷ್ಣ ವಚನವೇದ' ಮನೋಜ್ಞವಾದ ಸರಳತೆಯ ಹೃದಯಂಗಮವಾದ ಭಾಷೆಯಲ್ಲಿ ತತ್ತ್ವಶಾಸ್ತ್ರ ಮತ್ತು ಧರ್ಮದ ಅತ್ಯಂತ ಮಹೋನ್ನತವಾದ ಸತ್ಯಗಳನ್ನು ತಿಳಿಯಪಡಿಸುವ ಚಿರಸ್ಥಾಯಿಯಾದ ಕೃತಿಯಾಗಿದೆ.]

**ಮಾತೆಯ ಅದ್ಭುತ ದರ್ಶನ**

ಒಂದು ದಿನ ಭಗವಾನ್ ಶ್ರೀರಾಮಕೃಷ್ಣರು ದೈವೀಮಾತೆಯ ದರ್ಶನವನ್ನು ಪಡೆಯಲು ಅತ್ಯಂತ ಕಾತರತೆಯಿಂದ ಪ್ರಾರ್ಥಿಸುತ್ತ ಮತ್ತು ರೋದಿಸುತ್ತ ಆಕೆಯನ್ನುದ್ದೇಶಿಸಿ ಭಕ್ತಿಪೂರ್ವಕವಾಗಿ ಹಾಡುತ್ತಲಿದ್ದರು.

'ಓ ಮಾತೆ, ನಾನು ನಿನ್ನನ್ನುದ್ದೇಶಿಸಿ ನುಡಿಯುತ್ತಲಿರುವ ಅಷ್ಟೊಂದು ಪ್ರಾರ್ಥನೆಗಳಲ್ಲಿ ಕಿಂಚಿತ್ತನ್ನೂ ನೀನು ಆಲಿಸುತ್ತಲಿಲ್ಲವೇನು? ನೀನು ರಾಮಪ್ರಸಾದನಿಗೆ ನಿನ್ನ ದರ್ಶನವನ್ನು ನೀಡಿದೆ. ಹಾಗಿದ್ದಲ್ಲಿ ನೀನು ನನಗೇಕೆ ನಿನ್ನ ದರ್ಶನವನ್ನು ನೀಡಬಾರದು?' ಎಂದು ಆಕೆಗೆ ನುಡಿಯುತ್ತ ಪ್ರಾರ್ಥಿಸಿದರು.

ತರುಣ 'ದೇವರ ಹುಚ್ಚ' ಔಷಧ ವೈದ್ಯಶಾಸ್ತ್ರ ಮತ್ತು ನೀತಿಶಾಸ್ತ್ರದ ಎರಡು ಶಾಖೆಗಳ ಎಲ್ಲ ಅತಿಸೂಕ್ಷ್ಮ ವಿವರಗಳೊಂದಿಗೆ ಹಿಂದಿನ ಎಷ್ಟೋ ಶತಮಾನಗಳವರೆಗೆ ಧಾರ್ಮಿಕ ಭಾರತದಿಂದ ಸೂಕ್ಷ್ಮವಾಗಿ ಗುರುತಿಸಲಾಗಿರುವ ಮತ್ತು ಕ್ರೋಡೀಕರಿಸಲಾಗಿರುವಂತೆ ಪ್ರೇರಿತ ಭಾವೋತ್ಕರ್ಷದ ವಿಜ್ಞಾನದ ಯಾವುದೇ ಅರಿವುಳ್ಳವರಾಗಲಿರಲಿಲ್ಲ; ಮತ್ತು ಹೀಗಾಗಿ ಅವರು ಕುರುಡು ಭಾವೋನ್ಮಾದದಿಂದ ಪ್ರೇರಿತರಾಗಿ ಗೊತ್ತು ಗುರಿಯಿಲ್ಲದೆ ಅಲೆದಾಡಿದರು. ಅವರ ಆನಂದಾತಿರೇಕ ಸಂಪೂರ್ಣವಾಗಿ ಅನಿರ್ದೇಶಿತವಾಗಿದ್ದುದರಿಂದ ಅವರು ಅಳಿವಿನ ಗಣನೀಯ ಅಪಾಯದತ್ತ ಸಾಗಿದರು. ಯಾರ ದಾರಿ ಪ್ರಪಾತದ ತೀರ ಅಂಚಿನಲ್ಲಿ ಸಾಗುತ್ತದೆಯೋ ಅಂತಹ ನಾಚಿಕೆಪಡದೆ ಮುನ್ನುಗ್ಗುವ ಯೋಗಿಗೆ ಸಾವು ಹೊಂಚಿಹಾಕುತ್ತಿರುತ್ತದೆ. ದಿಗ್ಭ್ರಾಂತಿಯ ಈ ದಿನಗಳಲ್ಲಿ ಅವರನ್ನು ಕಂಡವರು ಅವರ ಮುಖ ಮತ್ತು ಎದೆ ರಕ್ತದ ಹರಿವಿನಿಂದ ಕೆಂಪಾಗಿದ್ದುದಾಗಿ, ಅವರ ಕಣ್ಣುಗಳು ಕಣ್ಣೀರಿನಿಂದ ತುಂಬಿದ್ದುದಾಗಿ ಮತ್ತು ಅವರ ದೇಹ ಸೆಳೆತಗಳಿಂದ ನಡುಗುತ್ತಿದ್ದುದಾಗಿ ವರ್ಣಿಸಿದ್ದಾರೆ. ಅವರು ದೈಹಿಕ ಸಹಿಷ್ಣುತೆಯ ತುದಿಯಲ್ಲಿದ್ದರು. ಅಂತಹ ಪರಿಸ್ಥಿತಿಯನ್ನು ತಲುಪಿದಾಗ ಮಿದುಳಿನ ಲಕ್ವಾ ಅಥವಾ ದೃಷ್ಟಿಯ ಅಂಧತ್ವದೊಳಗೆ ಪತನದ ಹೊರತೂ ಮತ್ತೇನೂ ಇರುವುದಿಲ್ಲ.

ತೆರೆ ಹಠಾತ್ತನೆ ತೆರೆಯಿತು ಮತ್ತು ಅವರು ಕಂಡರು! ಪರಮಹಂಸರೇ ತಮ್ಮ ಅನುಭವವನ್ನು ಹೇಳಿಕೊಳ್ಳಲಿ:

'ನಾನಾಕೆಯ ದರ್ಶನವನ್ನು ಪಡೆಯಲಾಗದಿದ್ದುದರಿಂದ ನನ್ನ ಹೃದಯದಲ್ಲಿ ಆಗ ಒಂದು ಅಸಹನೀಯವಾದ ಬೇಗುದಿಯಿತ್ತು. ವ್ಯಕ್ತಿಯೋರ್ವನು ನೀರನ್ನು ಸಂಪೂರ್ಣವಾಗಿ ಹೊರಹಾಕುವುದಕ್ಕಾಗಿ ಒರೆಸಿಕೊಳ್ಳುವ ಚೌಕವನ್ನು ಬಲವಾಗಿ ಹಿಂಡುವಂತೆಯೇ ಯಾರೋ ಒಬ್ಬನು ನನ್ನ ಹೃದಯ ಮತ್ತು ಮನಸ್ಸನ್ನು ಹಿಡಿದು ಅವುಗಳೊಂದಿಗೆ ಹಾಗೆಯೇ ಮಾಡುತ್ತಿರುವನೋ ಎಂಬಂತೆ ನಾನು ಭಾವಿಸಿದೆ.'

'ಮಾತೆಯ ದರ್ಶನವನ್ನು ನಾನು ಎಂದಿಗೂ ಪಡೆಯಲಾರೆನೆಂಬ ಆಲೋಚನೆಯೊಂದಿಗೆ ತೀವ್ರವಾಗಿ ವೇದನೆಗೊಳಗಾದ ನಾನು ಹತಾಶೆಯಿಂದ ಸಾಯುತ್ತಲಿದ್ದೆ. ಅಪಾರ ವೇದನೆಗೊಳಗಾದ ನಾನು ಆಗ ಈ ಬಾಳನ್ನು ಬದುಕುವುದರಲ್ಲಿ ಯಾವುದೇ ಪ್ರಯೋಜನವಿಲ್ಲವೆಂದು ಭಾವಿಸಿದೆ.



'ಮಾತೆಯ ದೇವಾಲಯದಲ್ಲಿದ್ದ ಕತ್ತಿಯ ಮೇಲೆ ಹಠಾತ್ತನೆ ನನ್ನ ಕಣ್ಣುಗಳು ಎರಗಿದುವು. ಆ ಕ್ಷಣದಲ್ಲಿಯೇ ಅದರೊಂದಿಗೆ ನನ್ನ ಪ್ರಾಣವನ್ನು ಕೊನೆಗೊಳಿಸಿಕೊಳ್ಳ ಬೇಕೆಂದು ನಾನು ಮನಸ್ಸು ಮಾಡಿದೆ. ಓರ್ವ ಹುಚ್ಚನಂತೆ ನಾನು ಧಾವಿಸಿ ಅದನ್ನು ಕೈಯ್ಯಲ್ಲಿ ಹಿಡಿದುಕೊಂಡೆ.' ಆಗ ಹಠಾತ್ತನೆ ನಾನು ಮಾತೆಯ ಅದ್ಭುತವಾದ ದರ್ಶನವನ್ನು ಪಡೆದೆ ಮತ್ತು ಮೂರ್ಛಿತನಾಗಿ ಕೆಳಗೆ ಬಿದ್ದೆ.

'ಆಗ ಬಾಹ್ಯ ಪ್ರಪಂಚದಲ್ಲಿ ಏನು ಜರುಗಿತೆಂಬುದು, ಆ ದಿನ ಮತ್ತು ಮಾರನೆಯ ದಿನ ಹೇಗೆ ಕಳೆದುಹೋಯಿತೆಂದು ನನಗೆ ತಿಳಿಯಲಿಲ್ಲ. ಆದರೆ, ನನ್ನ ಹೃದಯಾಂತರಾಳದಲ್ಲಿ ಹಿಂದೆಂದೂ ಅನುಭವಿಸದೇ ಇದ್ದ ಉತ್ಕಟವಾದ ಆನಂದದ ಪ್ರವಾದ ಪ್ರವಹಿಸುತ್ತಲಿತ್ತು ಮತ್ತು ಮಾತೆಯೇ ಆಗಿದ್ದ ಬೆಳಕಿನ ಜ್ಞಾನವನ್ನು ನಾನು ತಕ್ಷಣವೇ ಪಡೆದೆ.'

ಮತ್ತೊಂದು ಸಂದರ್ಭದಲ್ಲಿ ಗುರುದೇವ ಈ ಹಿಂದೆ ತಿಳಿಸಲಾದ ತಮ್ಮ ಅದ್ಭುತವಾದ ದರ್ಶನವನ್ನು ವಿಶದವಾಗಿ ವಿವರಿಸಿದರು:

ಆತ ನುಡಿದರು: 'ಮನೆಗಳು, ಬಾಗಿಲುಗಳು, ದೇವಾಲಯಗಳು ಮತ್ತು ಇತರೆ ಎಲ್ಲ ವಸ್ತುಗಳು ಸಂಪೂರ್ಣವಾಗಿ ಕಣ್ಮರೆಯಾದುವೆಂಬಂತೆ ತೋರಿತು; ಎಲ್ಲಿಯೂ ಏನೊಂದೂ ಇಲ್ಲವೆಂಬಂತೆ ತೋರಿತು! ಮತ್ತು ನಾನು ಏನನ್ನು ನೋಡಿದೆನೋ ಅದು ಒಂದು ಎಲ್ಲೆಯಿಲ್ಲದ, ಅನಂತವಾದ, ಪ್ರಜ್ಞಾಪೂರ್ವಕವಾದ ಬೆಳಕಿನ ಸಾಗರವಾಗಿತ್ತು! ಎಷ್ಟೋ ದೂರದವರೆಗೆ ಮತ್ತು ಯಾವುದೇ ದಿಕ್ಕಿನಲ್ಲಿ ನಾನು ನೋಡಿದರೂ ಮುಂದಕ್ಕೆ ಬರುತ್ತಲಿದ್ದ, ಅಬ್ಬರಿಸುತ್ತಲಿದ್ದ ಮತ್ತು ಅತೀವ ವೇಗದೊಂದಿಗೆ ಎಲ್ಲ ಕಡೆಗಳಿಂದಲೂ ಆಕ್ರಮಿಸುತ್ತಲಿದ್ದ ದೇದೀಪ್ಯಮಾನವಾದ ಅಲೆಗಳ ನಿರಂತರವಾದ ಪರಂಪರೆಯನ್ನು ನಾನು ಗಮನಿಸಿದೆ. ಅತಿ ಕ್ಷಿಪ್ರವಾಗಿಯೇ ಅವು ನನ್ನ ಮೇಲೆ ಎರಗಿದುವು ಮತ್ತು ನನ್ನನ್ನು ಅರಿಯಲಾಗದ ಅಂತರಾಳದಲ್ಲಿ ಮುಳುಗಿಹೋಗುವಂತೆ ಮಾಡಿದುವು. ನಾನು ಏದುಸಿರುಬಿಟ್ಟೆ, ಹೆಣಗಾಡಿದೆ ಮತ್ತು ಪ್ರಜ್ಞಾಶೂನ್ಯನಾಗಿ ಬಿದ್ದೆ.'

ತಮ್ಮ ಪ್ರಥಮ ದರ್ಶನದ ಸಮಯದಲ್ಲಿ ತಾವು ಒಂದು ಪ್ರಜ್ಞಾಪೂರ್ವಕವಾದ ಬೆಳಕಿನ ಸಾಗರವನ್ನು ಕಂಡುದಾಗಿ ಗುರುದೇವರು ನುಡಿದರು. ಆದರೆ, ಕೇವಲ ಶುದ್ಧ ಪ್ರಜ್ಞೆಯನ್ನೊಳಗೊಂಡ – ತನ್ನ ಕೈಗಳಲ್ಲಿ ವರಗಳು ಮತ್ತು 'ಅಭಯ'ವನ್ನೊಳಗೊಂಡ ಆಕೆಯ ರೂಪ – ದೈವೀಮಾತೆಯ ರೂಪವನ್ನು ಕುರಿತಂತೆ ಏನು?

ಆ ಬೆಳಕಿನ ಸಾಗರದಲ್ಲಿ ಗುರುದೇವರು ಆ ರೂಪದ ದರ್ಶನವನ್ನೂ ಪಡೆದರೇನು? ಅದನ್ನವರು ಪಡೆದಿದ್ದರೆಂದು ತೋರುತ್ತದೆ. ಏಕೆಂದರೆ, ತಮ್ಮ ಪ್ರಥಮ ದರ್ಶನದ ಸಮಯದಲ್ಲಿ ಅವರು ಅತ್ಯಲ್ಪ ಬಾಹ್ಯಪ್ರಜ್ಞೆಯನ್ನು ಪಡೆಯುತ್ತಲಿದ್ದಂತೆಯೇ

ಪುನಃ ಪುನಃ 'ಅಮ್ಮ' ಎಂಬ ಪದವನ್ನು ಅವರು ವಿಷಾದಭರಿತ ಧ್ವನಿಯಲ್ಲಿ ಉಚ್ಚರಿಸಿದರೆಂದು ನಮಗೆ ತಿಳಿಸಲಾಗಿದೆ.

ಆ ದರ್ಶನ ಮುಕ್ತಾಯಗೊಂಡಾಗ ಗುರುದೇವರ ಹೃದಯದಲ್ಲಿ ಕೇವಲ ಪ್ರಜ್ಞೆಯನ್ನೊಳಗೊಂಡ ದೈವೀಮಾತೆಯ ರೂಪದ ನಿರಂತರವಾದ ತಕ್ಷಣದ ದರ್ಶನಕ್ಕಾಗಿ ಬಂದು ಕಾತರತೆಯ, ಎಡೆಬಿಡದ ರೋದನದ ಕರೆ ಎದ್ದಿತು. ಅಳು ಮುಂತಾದ ಬಾಹ್ಯಲಕ್ಷಣಗಳಿಂದ ಅದು ಯಾವಾಗಲೂ ಪ್ರಕಟಗೊಳ್ಳದಿದ್ದರೂ ಅದು ಅವರ ಹೃದಯದಲ್ಲಿ ಯಾವಾಗಲೂ ಅಸ್ತಿತ್ವದಲ್ಲಿತ್ತು.

ಕೆಲವೊಮ್ಮೆ ಅದು ಎಷ್ಟೊಂದು ಹೆಚ್ಚಾಗುತ್ತಿತ್ತೆಂದರೆ, ಅದನ್ನಡಗಿಸಲು ಅಸಮರ್ಥರಾಗಿ, ಅವರು ನೆಲದ ಮೇಲೆ ಬೀಳುತ್ತಿದ್ದರು ಮತ್ತು ನೋವಿನಿಂದ ಹೆಣಗಾಡುತ್ತಿದ್ದರು. 'ತಾಯಿ, ನನ್ನ ಮೇಲೆ ನಿನ್ನ ಅನುಗ್ರಹವನ್ನು ದಯಪಾಲಿಸು, ನನಗೆ ನಿನ್ನ ದರ್ಶನವನ್ನು ನೀಡು' ಎಂದು ಹೇಳುತ್ತ ಎಷ್ಟೊಂದು ಅಳುತ್ತಲಿದ್ದರೆಂದರೆ ಜನ ಅವರ ಸುತ್ತಲೂ ಸೇರುತ್ತಲಿದ್ದರು! ಅಂತಹ ತಳಮಳವನ್ನು ಕುರಿತಂತೆ ಅವರೇನನ್ನು ಆಲೋಚಿಸುತ್ತಿದ್ದರೋ ಅದರ ಕಲ್ಪನೆಯ ಒಂದು ಲವಲೇಶವೂ ಸಹ, ಹಾಗೆ ಹೇಳಬಹುದಾದರೆ, ಆ ಸಮಯದಲ್ಲಿ ಅವರ ಮನಸ್ಸಿನಲ್ಲಿ ಉದ್ಭವಿಸಲಿಲ್ಲ. ಅವರು ಹೇಳುತ್ತಿದ್ದುದುಂಟು: 'ಜನ ಎಲ್ಲೆಡೆಯಲ್ಲಿಯೂ ನಿಂತಿದ್ದರೂ ಅವರು ನೆರಳುಗಳಂತೆ ಅಥವಾ ಬಟ್ಟೆಯ ಮೇಲೆ ಚಿತ್ರಿಸಲಾದ ಚಿತ್ರಗಳಂತೆ ಕಾಲ್ಪನಿಕವಾಗಿ ತೋರಿದರು, ಮತ್ತು ಆ ಕಾರಣದಿಂದಲಾಗಿ ನಾಚಿಕೆ ಅಥವಾ ಹಿಂಜರಿಕೆ ಅತ್ಯಲ್ಪವಾದ ಪ್ರಜ್ಞೆಯೂ ಮನಸ್ಸನ್ನು ತಟ್ಟಲಿಲ್ಲ. ಆದರೆ, ಭರಿಸಲಾಗದ ಯಾತನೆಯ ಕಾರಣದಿಂದ ಬಾಹ್ಯಪ್ರಜ್ಞೆಯನ್ನು ನಾನು ಕಳೆದುಕೊಂಡೊಡನೆಯೇ ತನ್ನ ಕೈಗಳಲ್ಲಿ ವರಗಳು ಮತ್ತು 'ಅಭಯ'ದೊಂದಿಗೆ ಪ್ರಜ್ಞೆಯನ್ನೊಳಗೊಂಡ ಮಾತೆಯ ರೂಪವನ್ನು – ನಗುತ್ತಲಿದ್ದ, ಮಾತನಾಡಿದ ಮತ್ತು ಸಾಂತ್ವನಗೊಳಿಸಿದ ಮತ್ತು ಕೊನೆಯಿಲ್ಲದ ರೀತಿಗಳಲ್ಲಿ ನನಗೆ ಬೋಧಿಸಿದ ರೂಪವನ್ನು – ನಾನು ಕಂಡೆ!

೧೮೬೪ರ ಕೊನೆಯ ವೇಳೆಗೆ ರಾಮಕೃಷ್ಣರು ಸಾಕಾರದೇವರ ತಮ್ಮ ವಿಜಯವನ್ನು ಸಾಧಿಸಿದ್ದ ಸಮಯದಲ್ಲಿಯೇ, ಇನ್ನೂ ತನ್ನ ಧ್ಯೇಯದ ಅರಿವಿಲ್ಲದಿದ್ದ, ನಿರಾಕಾರದೇವರ ಸಂದೇಶವಾಹಕ ದಕ್ಷಿಣೇಶ್ವರಕ್ಕೆ ಆಗಮಿಸಿದ. ಈತ ತೋತಾಪುರಿ (ನಗ್ನ ವ್ಯಕ್ತಿ) – ಓರ್ವ ಅಸಾಧಾರಣ ವೇದಾಂತದ ವೈರಾಗಿ, ನಲವತ್ತು ವರ್ಷಗಳ ಪೂರ್ವಸಿದ್ಧತೆಯ ಬಳಿಕ ಸರ್ವೋತ್ಕೃಷ್ಟ ದಿವ್ಯಜ್ಞಾನವನ್ನು ತಲುಪಿದ್ದ ಅಲೆಮಾರಿ ಸಂತ – ಓರ್ವ ಮುಕ್ತನಾದ ವ್ಯಕ್ತಿ, ಆತನ ವೈಯಕ್ತಿಕವಲ್ಲದ ನೋಟ ಈ ಪ್ರಪಂಚದ ಭ್ರಮಾಲೋಕದ ಮೇಲೆ ಸಂಪೂರ್ಣವಾದ ನಿರಾಸಕ್ತಿಯೊಂದಿಗೆ ಗಮನಿಸುತ್ತಿತ್ತು.

ಆತ ತನ್ನನ್ನು ದಾಟಿಹೋಗುತ್ತಲಿದ್ದಂತೆ ಕಣ್ಣಿಗೆ ಕಾಣದಂತೆಯೇ ತೋತಾಪುರಿ ಮೊದಲ ಬಾರಿಗೆ ರಾಮಕೃಷ್ಣರನ್ನು ಕಂಡ. ದೇವಾಲಯದ ಮೆಟ್ಟಲುಗಳೊಂದರ



ಮೇಲೆ ಕುಳಿತಿದ್ದ ತರುಣ ಪೂಜಾರಿ ತನ್ನ ರಹಸ್ಯದರ್ಶನದ ಸಂತೋಷದಲ್ಲಿ ಮೈಮರೆತಿದ್ದ. ತೋತಾಪುರಿ ಅದರಿಂದ ಆಕರ್ಷಿತಗೊಂಡ.

'ಮಗು, ಸತ್ಯದ ಮಾರ್ಗದುದ್ದಕ್ಕೂ ನೀನೀಗಾಗಲೆ ಬಹುದೂರ ಪಯಣಿಸಿರುವೆ ಎಂದು ನಾನು ಕಾಣುತ್ತಿದ್ದೇನೆ. ನೀನು ಅದನ್ನು ಬಯಸುವಿಯಾದರೆ ನೀನು ಮುಂದಿನ ಹಂತವನ್ನು ತಲುಪಲು ನಾನು ನಿನಗೆ ಸಹಾಯಮಾಡಬಲ್ಲೆ. ನಾನು ನಿನಗೆ ವೇದಾಂತವನ್ನು ಬೋಧಿಸುತ್ತೇನೆ' ಎಂದು ಆತ ನುಡಿದ.

ಕಠೋರ ತಪಸ್ವಿಯನ್ನು ನಗುವಂತೆ ಮಾಡಿದ. ಸರಳವಾದೊಂದು ಮುಗ್ಧತೆಯೊಂದಿಗೆ ರಾಮಕೃಷ್ಣರು ತಾವು ಮೊದಲು ತಾಯಿಯ (ಕಾಳಿ) ಅನುಮತಿಯನ್ನು ಕೇಳಬೇಕೆಂದು ಉತ್ತರ ನೀಡಿದರು. ಆಕೆ ತನ್ನ ಅನುಮತಿಯನ್ನು ನೀಡಿದಳು ಮತ್ತು ಬಳಿಕ ಅವರು ತಮ್ಮ ದೈವೀಕಗುರುವಿನ ಮಾರ್ಗದರ್ಶನಕ್ಕೆ ವಿನೀತವಾದ ಮತ್ತು ಸಂಪೂರ್ಣವಾದ ವಿಶ್ವಾಸದೊಂದಿಗೆ ತಮ್ಮನ್ನು ಒಳಪಡಿಸಿಕೊಂಡರು.

ಇದೀಗ ತೋತಾಪುರಿ ಅದ್ವೈತ ವೇದಾಂತದ ಪ್ರಧಾನ ಗುಣಗಳನ್ನು ಅವರಿಗೆ ಬೋಧಿಸಲಾರಂಭಿಸಿದ. ಐಕ್ಯೈಕ ಮತ್ತು ಭೇದ ಕಲ್ಪಿಸದ ಬ್ರಹ್ಮ ಮತ್ತು ಸಮಾಧಿ (ಭಾವಪರವಶತೆ)ಯ ಮೂಲಕ 'ಆತ'ನಲ್ಲಿ ದೃಢವಾಗಿ ಸ್ಥಾಪಿತಗೊಳ್ಳುವಂತೆ ಮತ್ತು ಬ್ರಹ್ಮದೊಂದಿಗೆ ಅದರ ಅಭಿನ್ನತೆ ಮನವರಿಕೆಯಾಗುವಂತೆ ಹೇಗೆ ಅಹಮ್ಮಿನ ಅನ್ವೇಷಣೆಯಲ್ಲಿ ಆಳವಾಗಿ ಮುಳುಗುವುದೆಂಬ ವಿಷಯವನ್ನು ಆತ ಬೋಧಿಸತೊಡಗಿದ.

ಭಾವಪರವಶತೆಯ ಇತರ ಎಲ್ಲ ಹಂತಗಳ ಮೂಲಕ ಸಾಗಿದ್ದ ಅವರಿಗೂ ಸಹ ಅಂತಿಮ ಹಂತದತ್ತ ಕರೆದೊಯ್ಯುವ ಕಿರಿದಾದ ಬಾಗಿಲಿನ ಕೀಲಿಯನ್ನು ಕಂಡುಹಿಡಿಯುವುದು ಸುಲಭವಾಗಿತ್ತೆಂದು ಭಾವಿಸುವುದು ತಪ್ಪಾಗುತ್ತದೆ. ಪರಮಹಂಸರ ಸ್ವಂತ ವಿವರಣೆಯನ್ನು ಪುನರುತ್ಪಾದಿಸುವುದು ಯೋಗ್ಯವಾಗಿದೆ.

'ನಗ್ನವ್ಯಕ್ತಿ ತೋತಾಪುರಿ ಎಲ್ಲ ವಸ್ತುಗಳಿಂದ ನನ್ನನ್ನು ಪ್ರತ್ಯೇಕಗೊಳಿಸಲು ಮತ್ತು ಅದನ್ನು ಆತ್ಮದ ಹೃದಯದೊಳಗೆ ಮುಳುಗಿಸಲು ಬೋಧಿಸಿದ. ಆದರೆ, ನನ್ನೆಲ್ಲ ಪ್ರಯತ್ನಗಳ ಹೊರತಾಗಿಯೂ ನಾನು ನಾಮ ಮತ್ತು ರೂಪದ ಲೋಕವನ್ನು ದಾಟಿ ನನ್ನ ಚೈತನ್ಯವನ್ನು ನಿರುಪಾಧಿಕವಾದ ಸ್ಥಿತಿಗೆ ಮುನ್ನಡೆಸಲಾರದೆ ಹೋದೆ. ನ್ನನೆದುರಿಗೆ ಜೀವಂತವಾಸ್ತವವಾಗಿ ಗೋಚರಿಸಿದ ಶುದ್ಧಜ್ಞಾನದ ಸಾರರೂಪಳಾಗಿದ್ದ, ತೀರ ಪರಿಚಿತವಾದ ಉಜ್ವಲಳಾದ ಮಾತೆಯ ರೂಪವೊಂದನ್ನು ಹೊರತುಪಡಿಸಿ ನನ್ನ ಮನಸ್ಸನ್ನು ಎಲ್ಲ ವಸ್ತುಗಳಿಂದಲೂ ಪ್ರತ್ಯೇಕಗೊಳಿಸುವಲ್ಲಿ ನನಗಾವ ಕಷ್ಟವೂ ಇರಲಿಲ್ಲ. ಏಕೆ ಅತೀತಕ್ಕೆ ದಾರಿಯನ್ನು ತಡೆಹಿಡಿದಳು. ನಾನು ಹಲವಾರು ಸಂದರ್ಭಗಳಲ್ಲಿ ನನ್ನ ಮನಸ್ಸನ್ನು ಅದ್ವೈತವೇದಾಂತದ ಉಪದೇಶಗಳ ಮೇಲೆ

ಕೇಂದ್ರೀಕರಿಸಲು ಪ್ರಯತ್ನಿಸಿದೆ; ಆದರೆ, ಪ್ರತಿಯೊಂದು ಸಮಯದಲ್ಲಿಯೂ ಮಾತೆಯ ರೂಪ ಅಡ್ಡಬಂದಿತು. ನಾನು ಹತಾಶೆಯೊಂದಿಗೆ ತೋತಾಪುರಿಗೆ ತಿಳಿಸಿದೆ: 'ಅದು ಪ್ರಯೋಜನವಿಲ್ಲದುದು. ನಾನು ನನ್ನ ಚೈತನ್ಯವನ್ನು "ನಿರುಪಾಧಿಕ"ವಾದ ಸ್ಥಿತಿಗೆ ಏರಿಸಲು ಮತ್ತು ಆತ್ಮನೊಂದಿಗೆ ಮುಖಾಮುಖಿಯಾಗಿ ನನ್ನನ್ನು ಕಾಣಲು ಎಂದಿಗೂ ಸಮರ್ಥನಾಗಲಾರೆ.

ಆತ ಅತ್ಯಂತ ನಿಷ್ಠುರನಾಗಿ ಉತ್ತರ ನೀಡಿದ: 'ಏನೆಂದೆ! ನೀನು ಮಾಡಲಾರೆಯೆಂದು ಹೇಳುವಿಯೇನು? ನೀನು ಮಾಡಲೇಬೇಕು?' ಸುತ್ತಲೂ ದೃಷ್ಟಿಹರಿಸುತ್ತ ಆತ ಗಾಜಿನ ಚೂರೊಂದನ್ನು ಕಂಡ. ಆತ ಅದನ್ನು ತೆಗೆದುಕೊಂಡು, 'ಆ ಬಿಂದುವಿನ ಮೇಲೆ ನಿನ್ನ ಮನಸ್ಸನ್ನು ಕೇಂದ್ರೀಕರಿಸು' ಎಂದು ಹೇಳುತ್ತ ನನ್ನ ಕಣ್ಣುಗಳ ನಡುವಣ ಬಿಂದುವಿಗೆ ಚುಚ್ಚಿದ. "ಬಳಿಕ ನಾನು ನನ್ನೆಲ್ಲ ಸಾಮರ್ಥ್ಯದೊಂದಿಗೆ ಧ್ಯಾನ ಮಾಡಲಾರಂಭಿಸಿದೆ ಮತ್ತು ದೈವೀಮಾತೆಯ ಅನುಗ್ರಹ ತೋರುವ ರೂಪ ಕಾಣಿಸಿಕೊಂಡೊಡನೆಯೇ ನಾನು ನನ್ನ ವಿವೇಚನೆಯನ್ನು ಖಡ್ಗದಂತೆ ಬಳಸಿ ಆಕೆಯನ್ನು ಎರಡಾಗಿ ತುಂಡರಿಸಿದೆ. ಕೊನೆಯ ತಡೆ ಪತನಗೊಂಡು ನನ್ನ ಚೈತನ್ಯ ತಕ್ಷಣವೇ ಸ್ವಯಂ 'ಸೋಪಾಧಿಕ' ಸ್ತರವನ್ನು ಮೀರಿ ರಭಸದಿಂದ ಸಾಗಿತು ಮತ್ತು ನಾನು ಸಮಾಧಿಯಲ್ಲಿ ನನ್ನನ್ನೇ ಕಳೆದುಕೊಂಡೆ."

ಪ್ರವೇಶಿಸಲಾಗದ ದ್ವಾರವನ್ನು ಮಹತ್ತರವಾದ ಶ್ರಮ ಮತ್ತು ಅಪಾರವಾದ ಯಾತನೆಯೊಂದಿಗೆ ಮಾತ್ರವೇ ಬಲಾತ್ಕಾರದೊಂದಿಗೆ ಭೇದಿಸಲಾಯಿತು. ಆದರೆ, ರಾಮಕೃಷ್ಣರು ಹೊಸ್ತಿಲನ್ನು ಇನ್ನೂ ದಾಟಿಲ್ಲವೆನ್ನುವಷ್ಟರಲ್ಲಿಯೇ ಅಂತಿಮ ಹಂತವನ್ನು– ನಿರ್ವಿಕಲ್ಪ ಸಮಾಧಿಯನ್ನು – ತಲುಪಿದರು. ಅಲ್ಲಿ ವಿಷಯಿ ಮತ್ತು ವಿಷಯ ಸಮಾನವಾಗಿ ಕಣ್ಮರೆಯಾದುವು.

ಬ್ರಹ್ಮಾಂಡ ಕೊನೆಗೊಂಡಿತು. ಸ್ವಯಂ ಆಕಾಶ ಇರಲೇ ಇಲ್ಲ. ಮೊದಲಿಗೆ ಭಾವನೆಗಳ ನೆರಳುಗಳು ಮನಸ್ಸಿನ ಅಗೋಚರ ಆಳಗಳಲ್ಲಿ ತೇಲಾಡಿದುವು. ಏಕತಾನದಲ್ಲಿ ಅಹಂಕಾರದ ಒಂದು ದುರ್ಬಲ ಪ್ರಜ್ಞೆ ಟಿಕ್ ಟಿಕ್ ಎಂದು ಮುಂದುವರಿಯಿತು. ಬಳಿಕ ಅದೂ ನಿಂತುಹೋಯಿತು. ಅಸ್ತಿತ್ವವೊಂದನ್ನು ಬಿಟ್ಟು ಬೇರಾವುದೂ ಉಳಿಯಲಿಲ್ಲ. ಆತ್ಮ ತನ್ನಲ್ಲಿ ಕಳೆದುಹೋಯಿತು. ದ್ವೈತಭಾವ ತೊಲಗಿ ಹೋಯಿತು. ಸಾಂತ ಮತ್ತು ಅನಂತ ಆಕಾಶಗಳು ಬಂದೆಂಬಂತಾದುವು. ಮಾತನ್ನು ಮೀರಿ, ಆಲೋಚನೆಯನ್ನು ಮೀರಿ ಅವರು ಬ್ರಹ್ಮವನ್ನು ಮುಟ್ಟಿದರು.

* * * *



# ೨. ಮಹರ್ಷಿ ದೇವೇಂದ್ರನಾಥ ಠಾಕೂರ್
## (ಕ್ರಿ.ಶ. ೧೮೧೭ ರಿಂದ ೧೯೦೫)

[ಗುರುದೇವ ರವೀಂದ್ರನಾಥ ಠಾಕೂರ್‌ರವರ ತಂದೆ ದೇವೇಂದ್ರನಾಥ ಠಾಕೂರ್ ಅವರು ಬ್ರಾಹ್ಮೋ ಸಮಾಜದ ಓರ್ವ ಪ್ರಮುಖ ಸದಸ್ಯರಾಗಿದ್ದರು. ತತ್ತ್ವಶಾಸ್ತ್ರದ ಅಧ್ಯಯನಗಳಲ್ಲಿ ಗಂಭೀರವಾದ ಆಸಕ್ತಿಯನ್ನುಳ್ಳ, ಓರ್ವ ಮಹಾಖ್ಯಾತಿವಂತ ಜ್ಞಾನಿ ಮತ್ತು ಮಹರ್ಷಿಯಾಗಿದ್ದ ಅವರು 'ತತ್ತ್ವರಂಜಿನಿ' ಎಂದು ಪ್ರಸಿದ್ಧವಾಗಿದ್ದ ಅಕಾಡೆಮಿಯೊಂದನ್ನು ಮತ್ತು 'ವೇದಪಾಠಶಾಲೆ'ಯನ್ನು ಸ್ಥಾಪಿಸಿದರು. ಅವರ ಜೀವನ ಸೌಮ್ಯವಾಗಿತ್ತು ಮತ್ತು ಒಂದು ಅವರು ಸಮಕಾಲೀನರ ಮನ್ನಣೆಯನ್ನು ಅವರಿಗೆ ಗಳಿಸಿಕೊಟ್ಟ ಸಂತತನದ ಒಂದು ಪ್ರಭಾವವಲಯವನ್ನು ಅವರು ತಮ್ಮ ಸುತ್ತಲೂ ಹೊಂದಿದ್ದರು. ಅವರು ಭಾರತದ ಸಾಂಸ್ಕೃತಿಕ ಪರಂಪರೆಯ ಹಲವಾರು ಅಂಶಗಳನ್ನು ಕುರಿತಂತೆ ಅನೇಕ ವಿದ್ವತ್ಪೂರ್ಣ ಗ್ರಂಥಗಳ ಲೇಖಕರಾಗಿದ್ದರು.]

ದೇವರು ಆತನ ಕನಸಿನಲ್ಲಿ ಆತನಿಗೆ ಮಾರ್ಗದರ್ಶನ ಮಾಡಿದ. ಪ್ರಪಂಚವೋ ಅಥವಾ ಧರ್ಮವೋ, ಜಯಶಾಲಿಯಾಗುವುದು ಯಾವುದು?– ಯಾರೊಬ್ಬನೂ ಹೇಳಲಾರದವನಾಗಿದ್ದ– ನನ್ನನ್ನು ಚಿಂತೆಗೀಡುಮಾಡಿದುದು ಇದೇ.

'ನನ್ನ ದುರ್ಬಲ ಹೃದಯದೊಳಗೆ ಶಕ್ತಿಯನ್ನು ದಯಪಾಲಿಸು, ನೀನು ನನಗೆ ಆಶ್ರಯವಾಗಿರು' ಎಂಬುದೇ ದೇವರಲ್ಲಿ ನನ್ನ ನಿರಂತರವಾದ ಪ್ರಾರ್ಥನೆಯಾಗಿತ್ತು.

ಈ ಎಲ್ಲ ತಳಮಳಗಳು ಮತ್ತು ತೊಂದರೆಗಳು ನಾನು ರಾತ್ರಿಯಲು ನಿದ್ರಿಸಲು ನನಗೆ ಅವಕಾಶ ನೀಡುತ್ತಿರಲಿಲ್ಲ, ನನ್ನ ತಲೆ, ದಿಂಬಿನ ಮೇಲೆ ದಿಗ್ಭ್ರಮೆಯನ್ನನುಭವಿಸುತ್ತಿತ್ತು. ನಾನೀಗ ನಸುನಿದ್ದೆ ಮಾಡುತ್ತಿದ್ದೆ ಮತ್ತು ಮತ್ತೊಮ್ಮೆ ಎಚ್ಚರಗೊಳ್ಳುತ್ತಿದ್ದೆ. ನಾನು ಎಚ್ಚರ ಮತ್ತು ನಿದ್ರೆಯ ನಡುವಣ ಮಧ್ಯಮಾವಸ್ಥೆಯಲ್ಲಿ ನಿದ್ರಿಸುತ್ತಿರುವೆನೆಂಬಂತೆ ತೋರುತ್ತಿತ್ತು.

ಅಂತಹ ಒಂದು ಸಮಯದಲ್ಲಿ ಕತ್ತಲೆಯಲ್ಲಿ ಯಾರೋ ಒಬ್ಬನು ನನ್ನ ಬಳಿಗೆ ಬಂದು 'ಮೇಲೇಳು' ಎಂದು ನುಡಿದ, ಕೂಡಲೇ ನಾನು ಎದ್ದು ಕುಳಿತೆ.

ಒಳಗಿನ ವಾಸದ ಕೊಠಡಿಗಳಿಂದ ಹೊರಗೆ ಕರೆದೊಯ್ಯುವ ಮೆಟ್ಟಲುಗಳಿಂದ ಆತ ಕೆಳಗಿಳಿದ; ನಾನೂ ಅದನ್ನೇ ಮಾಡಿದೆ ಮತ್ತು ಆತನೊಂದಿಗೆ ಅಂಗಳದೊಳಗೆ ಹೊರಟುಬಂದೆ. ನಾವು ಮುಂದಿನ ಬಾಗಿಲ ಎದುರಿಗೆ ನಿಂತೆವು. 'ದರ್ವಾನರು' ನಿದ್ರಿಸುತ್ತಿದರು.

ನನ್ನ ಮಾರ್ಗದರ್ಶಿ ಬಾಗಿಲನ್ನು ಮುಟ್ಟಿದ ಮತ್ತು ತಕ್ಷಣವೇ ಎರಡೂ ಬಾಗಿಲ ರೆಕ್ಕೆಗಳು ತೆರೆದುಕೊಂಡುವು. ಆತನೊಂದಿಗೆ ಮನೆಯ ಮುಂದಿನಲ್ಲಿನ ಬೀದಿಯೊಳಗೆ ಹೊರಟೆ.

ಆತ ಓರ್ವ ನೆರಳನ್ನು ಹೋಲುವ ರೂಪದವನಾಗಿದ್ದ. ನಾನು ಆತನನ್ನು ಸ್ಪಷ್ಟವಾಗಿ ಕಾಣಲಾರದೆ ಹೋದೆ, ಆದರೆ, ಏನನ್ನೇ ಆದರೂ ಆತ ನನಗೆ ಆಜ್ಞಾಪಿಸಿದಲ್ಲಿ ತಕ್ಷಣವೇ ಹಾಗೆ ಮಾಡಲು ನಾನು ಒತ್ತಾಯಕ್ಕೆ ಸಿಲುಕಿದವನಂತೆ ನಾನು ಭಾವಿಸಿದೆ.

ಅಲ್ಲಿಂದ ಆತ ಆಕಾಶಕ್ಕೆ ಮೇಲಕ್ಕೇರತೊಡಗಿದ, ನಾನೂ ಆತನನ್ನು ಹಿಂಬಾಲಿಸಿದೆ. ಬಲಕ್ಕೆ ಮತ್ತು ಎಡಕ್ಕೆ ಮತ್ತು ನನ್ನ ಮುಂಭಾಗದಲ್ಲಿ ನಕ್ಷತ್ರಗಳು ಮತ್ತು ಗ್ರಹಗಳ ಸಮೂಹ ಒಂದು ಉಜ್ವಲವಾದ ಕಾಂತಿಯನ್ನು ಬೀರುತ್ತಿದ್ದುವು ಮತ್ತು ನಾವು ಅವುಗಳ ಮೂಲಕ ಸಾಗುತ್ತಲಿದ್ದೆ.

ದಾರಿಯಲ್ಲಿ ನಾನು ಮಂಜಿನ ಸಮುದ್ರವೊಂದನ್ನು ಪ್ರವೇಶಿಸಿದೆ. ಅಲ್ಲಿ ಮುಂದೆಂದೂ ನಕ್ಷತ್ರಗಳು ಮತ್ತು ಗ್ರಹಗಳು ಕಾಣುತ್ತಿರಲಿಲ್ಲ. ಮಂಜಿನಲ್ಲಿ ಸ್ವಲ್ಪ ದೂರ ಪ್ರಯಾಣಮಾಡಿದ ಬಳಿಕ ನಿಶ್ಚಲನಾದ ಪೂರ್ಣಚಂದ್ರನನ್ನು ನಾನು ಹಠಾತ್ತನೆ ಕಂಡೆ. ಆ ಆವಿರೂಪದ ಸಮುದ್ರದಲ್ಲಿ ಅದು ಒಂದು ಸಣ್ಣ ದ್ವೀಪದಂತೆ ಕಂಡಿತು.

ನಾನು ಹೆಚ್ಚು ಹೆಚ್ಚು ಸಮೀಪಕ್ಕೆ ಬರುತ್ತಲಿದ್ದಂತೆ ಆ ಚಂದ್ರ ಹೆಚ್ಚು ದೊಡ್ಡದಾಗಿ ಬೆಳೆದ. ಅದು ಮುಂದೆಂದೂ ಗುಂಡಾಗಿ ಗೋಚರಿಸಲಿಲ್ಲ, ಆದರೆ, ನಮ್ಮ ಭೂಮಿಯಂತೆ ಸಮತಲವಾಗಿತ್ತು.

ಪ್ರೇತ ಹೋಗಿ ಆ ಭೂಮಿಯ ಮೇಲೆ ನಿಂತಿತು, ನಾನೂ ಹಾಗೆಯೇ ಮಾಡಿದೆ. ನೆಲ ಸಂಪೂರ್ಣವಾಗಿ ಬಿಳಿಯ ಅಮೃತಶಿಲೆಯದಾಗಿತ್ತು. ಒಂದೇ ಒಂದು ಹುಲ್ಲಿನ ಗರಿಯೂ ಅಲ್ಲಿರಲಿಲ್ಲ – ಹೂವುಗಳೂ ಇಲ್ಲ, ಹಣ್ಣುಗಳೂ ಇಲ್ಲ. ಕೇವಲ ಆ ಸಸ್ಯರಹಿತವಾದ ಬಿಳಿಯ ಸಮತಲದ ಭೂಮಿ ಎಲ್ಲೆಡೆಯಲ್ಲಿಯೂ ಹರಡಿಕೊಂಡಿತ್ತು.

ಅಲ್ಲಿ ತಿಂಗಳ ಬೆಳಕು ಸೂರ್ಯನಿಂದ ಉದ್ಭವಿಸಿದುದಾಗಿರಲಿಲ್ಲ. ತನ್ನದೇ ಆದ ಬೆಳಕಿನ ಗುಣದ ಮೂಲಕ ಅದು ಬೆಳಗುತ್ತಿತ್ತು. ಸೂರ್ಯನ ಕಿರಣಗಳಿಗೆ ಸುತ್ತುವರಿದಿದ್ದ ಮಂಜನ್ನು ಭೇದಿಸಲಾಗುತ್ತಿರಲಿಲ್ಲ. ಅದರದೇ ಬೆಳಕು ನಾವು



ಹಗಲಿನಲ್ಲಿ ಹೊಂದಿರುವ ನೆರಳಿನಂತೆ ಆಹ್ಲಾದಕರವಾಗಿತ್ತು. ಗಾಳಿ ಇಂದ್ರಿಯಗಳಿಗೆ ಆಪ್ಯಾಯಮಾನವಾಗಿತ್ತು.

ಈ ಸಮತಲ ಪ್ರದೇಶದ ನನ್ನ ಪ್ರಯಾಣದ ಅವಧಿಯಲ್ಲಿ ನಾನು ಅದರ ನಗರಗಳಲ್ಲೊಂದನ್ನು ಪ್ರವೇಶಿಸಿದೆ. ಎಲ್ಲ ಮನೆಗಳು ಮತ್ತು ಎಲ್ಲ ಬೀದಿಗಳು ಬಿಳಿಯ ಅಮೃತಶಿಲೆಯಿಂದ ನಿರ್ಮಿತವಾಗಿದ್ದುವು, ಚೊಕ್ಕಟವಾದ ಮತ್ತು ಉಜ್ವಲವಾದ ಮತ್ತು ಹೊಳಪಾಗಿದ್ದ ಬೀದಿಗಳಲ್ಲಿ ಒಂದೇ ಒಂದು ಪ್ರಾಣಿಯೂ ಕಾಣಿಸುತ್ತಿರಲಿಲ್ಲ, ಎಲ್ಲವೂ ಮೌನ ಮತ್ತು ಶಾಂತಿಪೂರ್ಣವಾಗಿತ್ತು.

ನನ್ನ ಮಾರ್ಗದರ್ಶಿ ರಸ್ತೆಯ ಬಳಿಯ ಮನೆಯೊಂದನ್ನು ಪ್ರವೇಶಿಸಿ ಎರಡನೆ ಮಹಡಿಗೆ ಹತ್ತಿಹೋದ, ನಾನು ಅವನೊಂದಿಗೆ ಹೋದೆ. ವಿಶಾಲವಾದ ಕೋಣೆಯೊಂದರಲ್ಲಿ ನಾನಿರುವುದಾಗಿ ಕಂಡೆ. ಅದರಲ್ಲಿ ಬಿಳಿಯ ಅಮೃತಶಿಲೆಯ ಒಂದು ಮೇಜು ಮತ್ತು ಕೆಲವು ಕುರ್ಚಿಗಳಿದ್ದುವು. ಆತ ಕುಳಿತುಕೊಳ್ಳುವಂತೆ ನನಗೆ ತಿಳಿಸಿದ ಮತ್ತು ನಾನು ಕುರ್ಚಿಗಳೊಂದರಲ್ಲಿ ಕುಳಿತೆ. ಬಳಿಕ ಪ್ರೇತ ಕಣ್ಮರೆಯಾಯಿತು.

ಅಲ್ಲಿ ಬೇರಾರೂ ಇರಲಿಲ್ಲ. ಆ ಮೌನವಾದ ಕೋಣೆಯಲ್ಲಿ ನಾನು ಮೌನವಾಗಿ ಕುಳಿತೆ. ಸ್ವಲ್ಪವೇ ಸಮಯದ ಬಳಿಕ ಕೋಣೆಯ ಮುಂದಿನ ಬಾಗಿಲುಗಳೊಂದರ ಪರದೆಯನ್ನು ಪಕ್ಕಕ್ಕೆ ಸರಿಸಲಾಯಿತು, ಮತ್ತು ನನ್ನ ತಾಯಿ ಕಾಣಿಸಿಕೊಂಡಳು. ಆಕೆಯ ಸಾವಿನ ದಿನ ನಾನದನ್ನು ಕಂಡಿದ್ದಂತೆಯೇ ಆಕೆಯ ಕೂದಲು ಕೆಳಮುಖವಾಗಿತ್ತು.

ಆಕೆ ಸತ್ತುಹೋದಾಗ ನಾನು ಆಕೆ ಸತ್ತುಹೋಗಿದ್ದಳೆಂದು ಎಂದಿಗೂ ಭಾವಿಸಿರಲಿಲ್ಲ. ಆಕೆಯ ಅಂತಿಮ ಸಂಸ್ಕಾರಗಳನ್ನು ನೆರವೇರಿಸಿದನಂತರ ಶ್ಮಶಾನದಿಂದ ನಾನು ಹಿಂದಿರುಗಿದ ಬಳಿಕವೂ ಆಕೆ ಸತ್ತುಹೋಗಿದ್ದಳೆಂದು ನಾನು ನಂಬಲಾರದವನಾಗಿದ್ದೆ. ಆಕೆ ಇನ್ನೂ ಬದುಕಿರುವಳೆಂದು ನಾನು ಖಾತ್ರಿಗೊಂಡಿದ್ದೆ.

ಇದೀಗ ನಾನು ನನ್ನ ಆ ಜೀವಂತಳಾದ ತಾಯಿಯನ್ನು ನನ್ನೆದುರಿನಲ್ಲಿ ಕಂಡೆ. 'ನಾನು ನಿನ್ನನ್ನು ನೋಡಬಯಸಿದೆ. ಆದ್ದರಿಂದಲೇ ನಿನಗೆ ಹೇಳಿಕಳುಹಿಸಿದೆ. ನೀನು ನಿಜವಾಗಿಯೂ ಬ್ರಹ್ಮವನ್ನರಿತಿರುವವರಲ್ಲಿ ಒಬ್ಬನಾಗಿರುವೆಯೇನು? ಕುಟುಂಬ ಪವಿತ್ರಗೊಂಡಿದೆ, ತಾಯಿಯ ಬಯಕೆ ಈಡೇರಿದೆ' ಎಂದು ಆಕೆ ನುಡಿದಳು.

ಆಕೆಯನ್ನು ಕಂಡಾಗ ಮತ್ತು ಆಕೆಯ ಈ ಮಧುರವಾದ ನುಡಿಗಳನ್ನು ಕೇಳಿದಾಗ ಆನಂದದ ಪ್ರವಾಹದೆದುರಿನಲ್ಲಿ ನನ್ನ ನಿದ್ರೆ ದೂರಸರಿಯಿತು.

ನನ್ನನ್ನು ನಾನು ಹಾಸಿಗೆಯ ಮೇಲೆ ಇನ್ನೂ ಹೊರಳಾಡುತ್ತಿರುವುದಾಗಿ ಕಂಡೆ.

* * * *

## ೩. ಡಾ॥ ಆನಿ ಬೆಸೆಂಟ್
### (ಕ್ರಿ.ಶ. ೧೮೪೭–೧೯೩೩)

[ಅತೀಂದ್ರಿಯವಿದ್ಯೆಯಲ್ಲಿನ ಆಕೆಯ ಆಸಕ್ತಿ ಆಕೆಯನ್ನು ಭಾರತಕ್ಕೆ ಸೆಳೆದು ತಂದಿತು. ಕರ್ನಲ್ ಆಲ್ಕಾಟ್ ಮತ್ತು ಮದಾಂ ಬ್ಲಾವಟ್ಕಿಯ ನೆರವಿನೊಂದಿಗೆ ಆಕೆ ಥಿಯೊಸೋಫಿಕಲ್ ಸೊಸೈಟಿಯನ್ನು ಸ್ಥಾಪಿಸಿದಳು. ಆಕೆಯ ಸಾವಿನವರೆಗೆ ಆಕೆ ಅದರ ಅಧ್ಯಕ್ಷಳಾಗಿದ್ದಳು. ಭಾರತದ ಚಿರ ನೂತನವಾದ ಗತಕಾಲ ಮತ್ತು ಆಧ್ಯಾತ್ಮಿಕ ಸಂಸ್ಕೃತಿಯ ಬಗೆಗೆ ಪೂಜ್ಯ ಭಾವದೊಂದಿಗೆ ತುಂಬಿದವಳಾದ ಆಕೆ, ತಾನು ಪ್ರಾರಂಭಿಸಿದ ಮತ್ತು ಇದೀಗ ಒಂದು ವಿಶ್ವವಿದ್ಯಾನಿಲಯವಾಗಿ ಬೆಳೆದಿರುವ ಬನಾರಸ್‌ನಲ್ಲಿನ ಕೇಂದ್ರೀಯ ಹಿಂದೂ ಕಾಲೇಜಿನ ಮೂಲಕ ಆ ಸಂಸ್ಕೃತಿಯನ್ನು ಪುನಃ ನೆನಪಿಗೆ ತಂದುಕೊಳ್ಳಲು ಶ್ರಮಿಸಿದಳು. ತನ್ನ ಪಾಕ್ಷಿಕ ಪತ್ರಿಕೆ 'ಕಾಮನ್ ವೀಲ್', ವೃತ್ತಪತ್ರಿಕೆ 'ನ್ಯೂ ಇಂಡಿಯಾ' ಮತ್ತು ಹೋಂ ರೂಲ್ ಸಂಘಗಳ ಮೂಲಕ ಭಾರತದ ಸ್ವಾತಂತ್ರ್ಯಕ್ಕಾಗಿನ ತನ್ನ ರಾಜಕೀಯ ಹೋರಾಟಗಳ ಮಧ್ಯದಲ್ಲಿ ಮತ್ತು ಆಕೆ ಅನುಭವಿಸಿದ ಪ್ರವೇಶನಿರ್ಬಂಧಗಳ ಹೊರತಾಗಿಯೂ ಆಕೆ ತನ್ನ ಆತ್ಮದ ಹಂಬಲಗಳನ್ನು ಪೋಷಿಸುವುದನ್ನು ಮತ್ತು ಪ್ರಪಂಚದ ಎಲ್ಲ ಭಾಗಗಳಲ್ಲಿದ್ದ ತನ್ನ ಅನುಯಾಯಿಗಳ ಆಧ್ಯಾತ್ಮಿಕ ಅಗತ್ಯಗಳಿಗೆ ನೆರವಾಗುವುದನ್ನು ಮುಂದುವರಿಸಿದಳು. ಆಕೆ ಉತ್ಕಟವಾದ ಭಕ್ತಿಯ ಮತ್ತು ತನ್ನ ಕನಸುಗಳ ಭಾರತಕ್ಕೆ ಸಂಪೂರ್ಣ ಸಮರ್ಪಣ ಭಾವದ ಜೀವನವನ್ನು ನಡೆಸಿದಳು. ಆಕೆ ಓರ್ವ ನಿಪುಣಳಾದ ಭಾಷಣಕಾರಳಾಗಿದ್ದಳು ಮತ್ತು ಶಕ್ತಿಶಾಲಿ ಬರಹಗಾರಳಾಗಿದ್ದಳು.]

**ದೈವವಾಣಿ ಜೀವನದ ಜಟಿಲ ಸಮಸ್ಯೆಯನ್ನು ಪರಿಹರಿಸಿತು**

೧೮೮೬ರಿಂದಲೂ ನನ್ನ ತತ್ತ್ವಚಿಂತನೆ ಸಮರ್ಪಕವಾಗಿಲ್ಲವೆಂಬ, ಜೀವನ ಮತ್ತು ಮನಸ್ಸು ನಾನು ಕನಸು ಕಂಡಿದ್ದಕ್ಕಿಂತಲೂ ಹೆಚ್ಚಾಗಿ ವಿಭಿನ್ನವಾದವುಗಳೆಂಬ ಒಂದು ಮನವರಿಕೆ ನಿಧಾನವಾಗಿ ಬೆಳೆಯುತ್ತಲಿತ್ತು; ಮನಃಶಾಸ್ತ್ರ ರಭಸವಾದ ಹೆಜ್ಜೆಗಳೊಂದಿಗೆ ಪ್ರಗತಿ ಹೊಂದುತ್ತಲಿತ್ತು; ಸಂಮೋಹನದ ಪ್ರಯೋಗಗಳು ಮಾನವ ಪ್ರಜ್ಞೆಯಲ್ಲಿ ಅನಿರೀಕ್ಷಿತವಾದ ಸಂಕೀರ್ಣತೆಗಳ ವಿಚಿತ್ರ ಜಟಿಲ ಸಮಸ್ಯೆಗಳನ್ನು ಹೊರಗೆಡಹುತ್ತಿದ್ದುವು ಮತ್ತು ಎಲ್ಲಕ್ಕಿಂತಲೂ ಚಕಿತಗೊಳಿಸುವುದೆಂದರೆ,



ಆಲೋಚನೆಯ ಉತ್ಪಾದಕವಾಗಿರುವ ಮೆದುಳು ವಿಸ್ಮೃತಿ ನಿದ್ರೆಯ ಸ್ಥಿತಿಗೆ ಇಳಿಸಲ್ಪಟ್ಟಾಗ ಮಾನಸಿಕಕ್ರಿಯೆಯ ವೈವಿಧ್ಯಮಯ ತೀವ್ರತೆಗಳು ನಾನು ನೀಡಲು ಅಸಮರ್ಥಳಾಗಿದ್ದ ವಿವರಣೆಯನ್ನು ನೀಡುವಂತೆ ಬಲಾತ್ಕರಿಸುತ್ತ ಘಟನೆಯ ನಂತರ ಘಟನೆ ನನ್ನ ಮೇಲೆ ಅಪ್ಪಳಿಸುತ್ತ ಬಂದುವು. ನಾನು ಪ್ರಜ್ಞೆ, ಕನಸುಗಳು, ಭ್ರಮೆಗಳು, ಮಿಥ್ಯಾಕಲ್ಪನೆಗಳು, ಬುದ್ಧಿಭ್ರಮಣೆಯನ್ನು ಅಧ್ಯಯನ ಮಾಡಿದೆ.

ಕತ್ತಲೆಯೊಳಗೆ ಒಂದು ಬೆಳಕಿನ ಕಿರಣ – ನಾನು ಕಲ್ಪಿಸಿಕೊಳ್ಳಲು ಧೈರ್ಯ ವಹಿಸುವುದಕ್ಕಿಂತಲೂ ವ್ಯಾಪಕವಾಗಿ, ಅತೀಂದ್ರಿಯವನ್ನಲ್ಲ, ಆದರೆ, ನಿಯಮಕ್ಕೊಳಪಟ್ಟ ಪ್ರಕೃತಿಯನ್ನು ವಿವರವಾಗಿ ಪ್ರತಿಪಾದಿಸುವ ತನ್ನ ಅದ್ಭುತವಾಗಿ ಧ್ವನ್ಯಾತ್ಮಕವಾದ ಪತ್ರಗಳೊಂದಿಗಿನ ಎ.ಪಿ.ಸಿನ್ನೆಟ್‌ನ 'ಅತೀಂದ್ರಿಯಲೋಕ' – ಮೂಡಿತು. ರಹಸ್ಯವಾಗಿ ಪ್ರಯೋಗವನ್ನು ಮಾಡುತ್ತ, ಇಂದ್ರಿಯಗೋಚರವಾದ ವಿಷಯಗಳನ್ನು ನಿಸ್ಸಂಶಯ ವಾದುವುಗಳೆಂದೂ, ಆದರೆ, ಅವುಗಳ ಆಧ್ಯಾತ್ಮಿಕ ವಿವರಣೆ ನಂಬಲಶಕ್ಯವಾದುದೆಂದೂ ಗಮನಿಸುತ್ತ ನನ್ನ ಅಧ್ಯಯನಗಳಿಗೆ ಆಧ್ಯಾತ್ಮಿಕತೆಯನ್ನು ಸೇರಿಸಿಕೊಂಡೆ. ಅತೀಂದ್ರಿಯದೃಷ್ಟಿ, ಅತೀಂದ್ರಿಯಶ್ರವಣಶಕ್ತಿ, ಅನ್ಯಚಿತ್ತಗ್ರಹಣದ ವಿದ್ಯಮಾನಗಳು ನಿಜವಾದುವುಗಳೆಂದು ಕಂಡುಕೊಳ್ಳಲಾಯಿತು. ಈಗಾಗಲೇ ಸಂಕ್ಷೇಪವಾಗಿ ಸೂಚಿಸಿರುವಂತೆ, ಬಾಹ್ಯಜೀವನದ ಎಲ್ಲ ಚಟುವಟಿಕೆಯ ಭರಾಟೆಗಳ ನಡುವೆ ಈ ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಕ್ರಿಯಾಶೀಲವಾಗಿದ್ದುವು, ಅವುಗಳ ಉತ್ತರಗಳನ್ನು ದೃಢಪ್ರಯತ್ನದಿಂದ ಹುಡುಕಲಾಗುತ್ತಿತ್ತು. ನಾನು ನಾನಾಬಗೆಯ ಪುಸ್ತಕಗಳನ್ನು ಓದಿದೆ, ಆದರೆ ನನಗೆ ತೃಪ್ತಿಯನ್ನುಂಟುಮಾಡಿದ ಕೆಲವೇ ವಿಷಯಗಳನ್ನು ಅವುಗಳಲ್ಲಿ ನಾನು ಕಾಣಬಲ್ಲವಳಾದೆ. ಅವುಗಳಲ್ಲಿ ಸೂಚಿತವಾಗಿದ್ದವುಗಳನ್ನು ನಾನಾ ವಿಧಗಳಲ್ಲಿ ನಾನು ಪ್ರಯೋಗವಮಾಡಿದೆ ಮತ್ತು (ನನಗೆ) ಕುತೂಹಲಕಾರಿಯೆನಿಸಿದ ಫಲಿತಾಂಶಗಳನ್ನು ಪಡೆದೆ. ಯಾವುದೋ ಒಂದು ರಹಸ್ಯವಾದ ಸಂಗತಿ, ಯಾವುದೋ ಒಂದು ರಹಸ್ಯವಾದ ಶಕ್ತಿ ಅಲ್ಲಿದೆಯೆಂದು ಅಂತಿಮವಾಗಿ ನನ್ನಷ್ಟಕ್ಕೆ ನಾನು ಮನವರಿಕೆ ಮಾಡಿಕೊಂಡೆ, ಮತ್ತು ನಾನು ಅದನ್ನು ಕಂಡುಹಿಡಿಯುವವರೆಗೆ ಹುಡುಕಬೇಕೆಂದು ತೀರ್ಮಾನ ಕೈಕೊಂಡೆ. ೧೮೮೯ರಲ್ಲಿ ವಸಂತಮಾಸದ ಆದಿ ಭಾಗದ ವೇಳೆಗೆ ನಾನೇನನ್ನು ಹುಡುಕುತ್ತಲಿದ್ದೆನೋ ಅದನ್ನು ಎಷ್ಟೇ ಅಪಾಯ ವೊದಗಲಿ ಕಂಡುಹಿಡಿಯಲು ನಾನು ಹುಚ್ಚುಸಾಹಸದೊಂದಿಗೆ ದೃಢನಿರ್ಧಾರ ತಳೆದವಳಾಗಿದ್ದೆ.

ಹದಿನೈದು ದಿನಗಳು ಕಳೆದುವು; ಆಗ ಶ್ರೀಮಾನ್ ಸ್ಟೆಡ್‌ರವರು ನನ್ನ ಕೈಗಳಿಗೆ ಎರಡು ಬೃಹತ್ ಸಂಪುಟಗಳನ್ನು ನೀಡಿದರು. 'ನೀನು ಇವುಗಳನ್ನು ಮರುಪರಿಶೀಲಿಸಬಲ್ಲೆಯೇನು? ನನ್ನ ಗೆಳೆಯರೆಲ್ಲರೂ ಅವುಗಳ ಬಗ್ಗೆ ಹಿಂದೇಟು ಹಾಕುತ್ತಿದ್ದಾರೆ. ಆದರೆ, ನೀನು ಅವುಗಳ ಬಗ್ಗೆ ಏನನ್ನಾದರೂ ಮಾಡುವಷ್ಟರ

ಮಟ್ಟಿಗೆ ಈ ವಿಷಯಗಳ ಬಗೆಗೆ ಸಾಕಷ್ಟು ಅತ್ಯಾಸಕ್ತಿಯುಳ್ಳವಳಾಗಿದ್ದೀಯೆ.' ನಾನು ಆ ಗ್ರಂಥಗಳನ್ನು ತೆಗೆದುಕೊಂಡೆ; ಅವು ಹೆಚ್.ಪಿ.ಬ್ಲಾವಟ್ಸ್ಕಿಯಿಂದ ರಚಿತವಾಗಿದ್ದ 'ರಹಸ್ಯ ಸಿದ್ಧಾಂತ'(Secret Doctrine)ದ ಎರಡು ಸಂಪುಟಗಳಾಗಿದ್ದುವು.

ನನ್ನ ಹೊರೆಯನ್ನು ನಾನು ಮನೆಗೆ ಕೊಂಡೊಯ್ದೆ ಮತ್ತು ಓದಲು ಕುಳಿತೆ. ಪುಟದನಂತರ ಪುಟವನ್ನು ನಾನು ತಿರುವಿಹಾಕುತ್ತಲಿದ್ದಂತೆ ಆಸಕ್ತಿಗಳು ಗಮನ ಸೆಳೆದವುಗಳಾಗಿ ಪರಿಣಮಿಸಿದುವು; ಆದರೆ, ಅದು ತೀರ ಚಿರಪರಿಚಿತವಾದಂತೆ ತೋರಿತು; ನನ್ನ ಮನಸ್ಸು ತೀರ್ಮಾನಗಳನ್ನು ಮುನ್ಸೂಚಿಸಲು ಹೇಗೆ ಮುನ್ನುಗ್ಗಿತು, ಎಷ್ಟು ಸುಸಂಬದ್ಧವಾಗಿತ್ತು, ಎಷ್ಟು ಸೂಕ್ಷ್ಮವಾಗಿತ್ತು, ಆದರೂ, ಎಷ್ಟೊಂದು ಬುದ್ಧಿಗ್ರಾಹ್ಯವಾಗಿತ್ತು. ಅಸಂಗತವಾದ ವಾಸ್ತವಾಂಶಗಳು ಪ್ರಬಲವಾದ ಅಖಂಡವೊಂದರ ಭಾಗಗಳಾಗಿ ಕಂಡುಬಂದ ಬೆಳಕಿನಿಂದ ಕುರುಡಳಾದ ನಾನು ದಿಗ್ಭ್ರಮೆಗೊಂಡೆ, ಮತ್ತು ನನ್ನ ಎಲ್ಲ ತಬ್ಬಿಬ್ಬುಗೊಳಿಸುವ ಪ್ರಶ್ನೆಗಳು, ಜಟಿಲ ಸಮಸ್ಯೆಗಳು, ತೊಡಕಾದ ಪ್ರಶ್ನೆಗಳು ಕಣ್ಮರೆಯಾಗುವಂತೆ ತೋರಿದುವು. ಒಂದು ಅರ್ಥದಲ್ಲಿ ಪರಿಣಾಮ ಆಂಶಿಕವಾಗಿ ಭ್ರಾಮಕವಾಗಿತ್ತು, ಅದರಲ್ಲಿ ಅವುಗಳೆಲ್ಲವೂ ನಿಧಾನವಾಗಿ ಮುಂದೆ ಗೋಜಿಲ್ಲದಂತಾಗಿರಬೇಕಾಗಿತ್ತು. ಮೆದುಳು ಕ್ರಮವಾಗಿ ಕ್ಷಿಪ್ರವಾದ ಅಂತಃಪ್ರಜ್ಞೆ ಸತ್ಯವೆಂದು ಗ್ರಹಿಸಿದುದನ್ನು ಮೈಗೂಡಿಸಿಕೊಳ್ಳಬೇಕಿತ್ತು. ಆದರೆ, ಜ್ಯೋತಿಯನ್ನು ಕಾಣಲಾಗಿತ್ತು, ಮತ್ತು ಜ್ಞಾನೋದಯದ ಆ ಮಿಂಚಿನಲ್ಲಿ ಆಯಾಸವುಂಟುಮಾಡುವ ಹುಡುಕಾಟ ಮುಗಿದಿತ್ತೆಂದು ನಾನು ಅರಿತೆ ಮತ್ತು ನೈಜಸತ್ಯವನ್ನು ಕಾಣಲಾಯಿತು.

* * * *



## ೪. ರವೀಂದ್ರನಾಥ ಠಾಕೂರ್
### (ಕ್ರಿ.ಶ. ೧೮೬೪–೧೯೪೬)

[ಸಾಹಿತ್ಯಕ್ಕಾಗಿ ನೊಬೆಲ್ ಪಾರಿತೋಷಕವನ್ನು ಪಡೆದ ಆಧುನಿಕ ಬಂಗಾಳದ ಕವಿ. ತಮ್ಮ 'ಕಾನನದ ಸಂದೇಶ'(Message of the forest)ವನ್ನು ಉಪನಿಷತ್ತುಗಳಿಂದ ಪಡೆದುಕೊಂಡ ಮತ್ತು ತಮ್ಮ 'ಗೀತಾಂಜಲಿ'ಯನ್ನು ಸರ್ವೋತ್ಕೃಷ್ಟನಾದ ಭಗವಂತನಿಗೆ ಸಮರ್ಪಿಸಿದ ಅವರು ಓರ್ವ ದಾರ್ಶನಿಕ ಕವಿಯಾಗಿದ್ದರು. ಭಾರತೀಯ ಪುನರುಜ್ಜೀವನದ ಮುಂದಾಳುಗಳಲ್ಲೊಬ್ಬರಾಗಿದ್ದ ಅವರು ಜೀವನಕ್ಕೆ ಒಂದು ಹೊಸ ಅರ್ಥ ಮತ್ತು ಉದ್ದೇಶವನ್ನು ತಂದುಕೊಟ್ಟರು. ಸರ್ವಬ್ರಹ್ಮಾತ್ಮಕ ದೃಷ್ಟಿಯಿಂದ ಕೂಡಿದವರಾದ ಆತ 'ಹಸಿದ ಕಲ್ಲುಗಳ' (Hungry Stones) ನಡುವೆ ಮತ್ತು ರಮ್ಯತೆಯಿಲ್ಲದ 'ಅಂಚೆಮನೆ'(Post Office)ಯಲ್ಲಿಯೂ ಸಹ ಅವರು 'ಕತ್ತಲೆಯ ಕೋಣೆಯ ದೊರೆ' (King of the Dark Chamber)ಯನ್ನು ಕಂಡರು. ಸಾಂತಪ್ರಪಂಚದ ಪ್ರತಿಯೊಂದು ಕಣದಲ್ಲಿಯೂ ಅನಂತದ ಮಿಡಿತಗಳನ್ನು ಆತ ಅನುಭವಿಸಿದರು. ರಾಷ್ಟ್ರೀಯ ಎಲ್ಲೆಗಳನ್ನು ಮೀರುತ್ತ ಆತ 'ಮಾನವಧರ್ಮ'(Religion of Man)ವನ್ನು ಬೋಧಿಸಿದರು. ಅವರ 'ಸಾಧನೆ' (Sadhana) ಶಾಂತಿಯ ನೆಲೆಯಾದ 'ಶಾಂತಿನಿಕೇತನ'ದಲ್ಲಿ ಒಂದು ಸ್ಥಳೀಯ ನಿವಾಸವನ್ನು ಮತ್ತು 'ವಿಶ್ವಭಾರತಿ' ಎಂಬ ಹೆಸರನ್ನು ಅವರು ನೀಡಿದ ಚೈತನ್ಯದೊಂದಿಗೆ ಭೌತದ್ರವ್ಯವನ್ನು ವರ್ಣವೈವಿಧ್ಯದ್ದನ್ನಾಗಿ ಮಾಡುತ್ತ 'ವ್ಯಕ್ತಿತ್ವ'ದ ಬೆಳವಣಿಗೆಗೆ ಅಭಿಮುಖವಾಗಿತ್ತು.]

**ದರ್ಶನ**

ಅನಿರೀಕ್ಷಿತವಾಗಿ ನೆಲದ ಮೇಲ್ಮೈ ಮೇಲೆ ಚಿಲುಮೆಯಾಗಿ ಉಕ್ಕಿ ಹರಿಯುವ ಸಾರ್ವಕಾಲಿಕ ಹೊಳೆಯ ಭೂಗತ ಪ್ರವಾಹದಂತೆ ನನ್ನೊಳಗಿನಿಂದ ಒಂದು ಹಠಾತ್ ಆಧ್ಯಾತ್ಮಿಕ ಸ್ಫೋಟದ ನನ್ನದೇ ಆದ ವೈಯಕ್ತಿಕ ಅನುಭವದ ವಿವರವೊಂದನ್ನು ನಾನು ನೀಡಿದಲ್ಲಿ ಅದು ಆಸಕ್ತಿಯ ವಿಷಯವಾಗಿ ಸಾಬೀತುಪಡಿಸುವುದೆಂದು ನಾನು 'ಭರವಸೆ' ಹೊಂದಿದ್ದೇನೆ.

ನಾನು ಹದಿನೆಂಟು ವರ್ಷದವನಾಗಿದ್ದಾಗ ಪ್ರಥಮ ಬಾರಿಗೆ ಧಾರ್ಮಿಕ ಅನುಭವದ ಹಠಾತ್ ವಸಂತದ ತಂಘಾಳಿ ನನ್ನ ಬಾಳಿಗೆ ಆಗಮಿಸಿತು ಮತ್ತು ನನ್ನ ನೆನಪಿನಲ್ಲಿ ಆಧ್ಯಾತ್ಮಿಕ ವಾಸ್ತವತೆಯ ಒಂದು ನೇರವಾದ ಸಂದೇಶವನ್ನು ಉಳಿಸುತ್ತ ಗತಿಸಿಹೋಯಿತು. ಒಂದು ದಿನ ಮರಗಳ ಹಿಂದಿನಿಂದ ಸೂರ್ಯ ತನ್ನ ಕಿರಣಗಳನ್ನು ಹೊರಸೂಸುತ್ತಲಿದ್ದ ಹೊತ್ತಿಗೆ ಮುಂಚಿನ ಅರುಣೋದಯದತ್ತ ಗಮನಿಸುತ್ತ ನಾನು ನಿಂತಿರುವಂತೆಯೇ ಕ್ಷಣವೊಂದರಲ್ಲಿ ಯಾವುದೋ ಒಂದು ಪ್ರಾಚೀನವಾದ ಮಬ್ಬು ನನ್ನ ದೃಷ್ಟಿಯಿಂದ ಕೊನೆಗೊಂಡಿತೆಂಬಂತೆ ಹಠಾತ್ತನೆ ನಾನು ಭಾವಿಸಿದೆ ಮತ್ತು ಪ್ರಪಂಚದ ಮುಖದ ಮೇಲಣ ಹಗಲಿನ ಬೆಳಕು ಆನಂದದ ಆಂತರಿಕಪ್ರಭೆಯನ್ನು ಪ್ರಕಟಪಡಿಸಿತು. ಎಲ್ಲ ವಸ್ತುಗಳು ಮತ್ತು ಎಲ್ಲ ಜನರಿಂದ ಸರ್ವೇಸಾಮಾನ್ಯವಾದ ಅಗೋಚರ ತೆರೆ ತೆರೆಯಲ್ಪಟ್ಟಿತು ಮತ್ತು ನನ್ನ ಮನಸ್ಸಿನಲ್ಲಿ ಅವುಗಳ ಸರ್ವೋತ್ಕೃಷ್ಟವಾದ ಮಹತ್ವ ಉತ್ಕಟಗೊಂಡಿತು; ಮತ್ತು ಇದು ಸೌಂದರ್ಯದ ಅರ್ಥವಿವರಣೆ. ಈ ಅನುಭವದಲ್ಲಿ ಸ್ಮರಣೀಯವಾಗಿದ್ದುದು ಯಾವುದೆಂದರೆ ಅದರ ಮಾನವೀಯ ಸಂದೇಶ, ಮಾನವನ ವೈಯಕ್ತಿಕಾತೀತ ಪ್ರಪಮಚದಲ್ಲಿ ನನ್ನ ಪ್ರಜ್ಞೆಯ ಹಠಾತ್ ವಿಸ್ತರಣ. ನನ್ನ ಅಚ್ಚರಿಯ ಮೊದಲ ದಿನದಂದು ನಾನು ಬರೆದ ಪದ್ಯಕ್ಕೆ 'ಜಲಪಾತದ ಎಚ್ಚರ' ಎಂದು ಹೆಸರಿಸಲಾಯಿತು. ಅದರ ಹಿಮಾವೃತ ಏಕಾಂಗಿತನದಲ್ಲಿ ಅದರ ಚೈತನ್ಯ ನಿಷ್ಕ್ರಿಯವಾಗಿದ್ದ ಜಲಪಾತವನ್ನು ಸೂರ್ಯ ಸ್ಪರ್ಶಿಸಿದ ಮತ್ತು ಸ್ವಾತಂತ್ರ್ಯದ ಒಂದು ಬಿರುಪ್ರವಾಹದಲ್ಲಿ ಮುನ್ನುಗ್ಗುತ್ತ ಅದು ಒಂದು ಕೊನೆಯಿಲ್ಲದ ಬಲಿದಾನವಾಗಿ ಸಮುದ್ರದೊಂದಿಗೆ ನಿರಂತರವಾದ ಐಕ್ಯದಲ್ಲಿ ತನ್ನ ಅಂತ್ಯತೆಯನ್ನು ಕಂಡಿತು. ನಾಲ್ಕು ದಿನಗಳ ಬಳಿಕ ದರ್ಶನ ಕೊನೆಗೊಂಡಿತು ಮತ್ತು ನನ್ನ ಅಂತರ್ದೃಷ್ಟಿಯ ಮೇಲೆ ಮುಚ್ಚಳ ತೂಗುಬಿದ್ದಿತು. ಕತ್ತಲೆಯಲ್ಲಿ ಪ್ರಪಮಚ ಮತ್ತೊಮ್ಮೆ ಒಂದು ಸಾಮಾನ್ಯ ವಾಸ್ತವಾಂಶದ ಅಸ್ಪಷ್ಟತೆಯ ತನ್ನ ವೇಷವನ್ನು ತಳೆಯಿತು.

ನಾನು ವಯಸ್ಕನಾಗಿ ಬೆಳೆದಾಗ ಮತ್ತು ಕೆಲವು ಹಳ್ಳಿಗಳಲ್ಲಿ ಜವಾಬ್ದಾರಿಯುತವಾದ ಕೆಲಸದಲ್ಲಿ ನೇಮಕಗೊಂಡಾಗ ನೆರೆಯ ಪ್ರದೇಶವೊಂದರಲ್ಲಿ ಆಶ್ರಯವನ್ನು ಪಡೆದೆ. ಅಲ್ಲಿ ಸಮಯದ ಹರಿವು ನಿಧಾನವಾಗಿ ಸಾಗುತ್ತಿತ್ತು ಮತ್ತು ಸಂತೋಷಗಳು ಮತ್ತು ದುಃಖಗಳು ತಮ್ಮ ಸರಳವಾದ ಮತ್ತು ಮೂಲಭೂತವಾದ ನೆರಳುಗಳು ಮತ್ತು ಬೆಳಕುಗಳನ್ನು ಹೊಂದಿದ್ದುವು. ನನಗೆ ವಿಶೇಷವಾದ ಮಹತ್ವವನ್ನು ಹೊಂದಿದ್ದ ದಿನ ತನ್ನೆಲ್ಲ ಸರ್ವಸಾಮಾನ್ಯ ಜೀವನದ ಸಹಜ ಪ್ರವೃತ್ತಿಯ ಕ್ಷುಲ್ಲಕತೆಗಳೊಂದಿಗೆ ಆಗಮಿಸಿತು. ನನ್ನ ಹಗಲಿನ ಸಾಮಾನ್ಯವಾದ ಕೆಲಸ ತನ್ನ ಕೊನೆಗೆ ಬಂದಿತ್ತು ಮತ್ತು ನನ್ನ ಸ್ನಾನಮಾಡುವುದಕ್ಕೆ ಮುಂಚಿತವಾಗಿ ಒಂದು ಕ್ಷಣಕಾಲ, ತನ್ನ ನಾಲೆಯುದ್ದಕ್ಕೂ ಮಳೆಗಾಲದ ಮೊದಲ ಪ್ರವಾಹವನ್ನು ಸ್ವಾಗತಿಸುತ್ತಿದ್ದ,



ಒಣಗಿದ್ದ ನದಿಯ ಪಾತ್ರದ ತೀರದ ಮೇಲಣ ಅಂಗಡಿಯ ಬೀದಿಯ ಮೇಲೆ ದೃಷ್ಟಿಹಾಯಿಸುತ್ತ ನನ್ನ ಕಿಟಕಿಯ ಬಳಿ ನಿಂತೆ. ನಾನು ಇದ್ದಕ್ಕಿದ್ದಂತೆ ನನ್ನೊಳಗೆ ಆತ್ಮದ ಕದಲುವಿಕೆಯ ಪ್ರಜ್ಞೆಯುಳ್ಳವನಾದೆ. ಕ್ಷಣವೊಂದರಲ್ಲಿ ನನ್ನ ಅನುಭವದ ಪ್ರಪಂಚ ಹಗುರವಾದದ್ದಾಗಿ ಪರಿಣಮಿಸಿದಂತೆ ತೋರಿತು ಮತ್ತು ಪ್ರತ್ಯೇಕಗೊಂಡಿದ್ದ ಮತ್ತು ಮಂಕಾಗಿದ್ದ ವಿದ್ಯಮಾನಗಳು ಅರ್ಥದ ಮಹಾಐಕ್ಯವನ್ನು ಕಂಡುಕೊಂಡುವು. ನಾನು ಹೊಂದಿದ್ದ ಭಾವನೆ, ವ್ಯಕ್ತಿಯೊಬ್ಬನು ತನ್ನ ಗುರಿಯನ್ನರಿಯದೆಯೇ ದಟ್ಟಮಂಜಿನ ಮೂಲಕ ಕುರುಡನಂತೆ ತಡಕಾಡುವವನು ಹಠಾತ್ತನೆ ತಾನು ತನ್ನ ಸ್ವಂತಮನೆಯ ಮುಂದುಗಡೆಯೆ ನಿಂತಿರುವುದಾಗಿ ಕಂಡುಕೊಂಡಾಗ ಭಾವಿಸುವಂತಹುದೇ ಆಗಿತ್ತು.

ಉಚ್ಚಾರಣೆಯ ಹೊರೆಯಲ್ಲಿ ಉಸಿರುಕಟ್ಟಿದವನಾಗಿ ಪ್ರತ್ಯೇಕವಾದ ಪದಗಳೊಂದಿಗೆ ಹರಡಿಹೋಗಿದ್ದ ಬಾಲಬೋಧೆಯಲ್ಲಿನ ನನ್ನ ಪಾಠಗಳ ಆಚೆಯಿಂದೀಚೆಗೆ ನಾನು ಹೆಣಗಾಡುವಂತೆ ಮಾಡಿದಾಗಿನ ನನ್ನ ಬಾಲ್ಯದ ದಿನವನ್ನು ನಾನೀಗಲೂ ನೆನಪಿಸಿಕೊಳ್ಳುತ್ತೇನೆ. ಹಗಲಿನ ಸಮಯ, ಧೂಳು ತುಂಬಿ ಮಸುಕಾಗಿರುವ, ಅಸಂಬದ್ಧ ಚಿಹ್ನೆಗಳು, ಕಲೆಗಳು ಮತ್ತು ಅಂತರಗಳೊಳಗೆ ಬಣ್ಣ ಕೆಟ್ಟ, ಅದರ ನುಸಿತಿಂದ ಅರ್ಥಹೀನತೆಗಳಲ್ಲಿ ಬೇಸರ ಹುಟ್ಟಿಸುವ ಒಮ್ಮೆ ಬೆಳಗುತ್ತಲಿದ್ದ ಪುಟದಂತೆ ಅದು ನನಗೆ ಕಾಣಿಸಿತು. ಹಠಾತ್ತನೆ ನಾನು ಜೋಡಿಸಿಕೊಂಡ ಪದಗಳ ಪ್ರಾಸಬದ್ಧವಾದ ವಾಕ್ಯವೊಂದಕ್ಕೆ ಬಂದೆ. ಅದನ್ನು ಹೀಗೆ ಅನುವಾದಿಸಬಹುದಾಗಿತ್ತು– 'ಮಳೆಗರೆಯುತ್ತಿದೆ, ನಡುಗುತ್ತಿವೆ ಎಲೆಗಳು' (It rains, the leaves tremble). ತಕ್ಷಣವೇ ನನ್ನ ಸಂಪೂರ್ಣವಾದ ಅರ್ಥವನ್ನು ಪುನಃ ಪಡೆದುಕೊಂಡ ಲೋಕವೊಂದಕ್ಕೆ ನಾನು ಬಂದೆ. ನನ್ನ ಮನಸ್ಸು ಅಭಿವ್ಯಕ್ತಿಯ ಕ್ರಿಯಾಶೀಲ ಲೋಕವನ್ನು ಸ್ಪರ್ಶಿಸಿತು ಮತ್ತು ಆ ಕ್ಷಣದಲ್ಲಿ ನಾನು ಮತ್ತೆ ಎಂದಿಗೂ, ತರಗತಿಯ ಕೊಠಡಿಯಿಂದ ಸುತ್ತುವರಿದ, ಉಚ್ಚಾರಣೆಯ ಪಾಠಗಳಿಂದ ಆತನ ಮನಸ್ಸು ಅಡಗಿಕೊಂಡಿದ್ದ ಕೇವಲ ವಿದ್ಯಾರ್ಥಿಯಾಗಿರಲಿಲ್ಲ. ಮಳೆಯಿಂದ ಹೊಡೆತಕ್ಕೊಳಗಾದ ಅಲುಗಾಡುವ ಎಲೆಗಳ ಲಯಬದ್ಧವಾದ ಚಿತ್ರ ಕೇವಲ ಮಾಹಿತಿಯನ್ನು ಕೊಂಡೊಯ್ಯದಿರುವ, ಆದರೆ, ನನ್ನ ಅಸ್ತಿತ್ವದೊಂದಿಗೆ ಸಾಮರಸ್ಯವುಳ್ಳ ಲೋಕವನ್ನು ನನ್ನ ಮನಸ್ಸಿನೆದುರಿಗೆ ತೆರೆದಿರಿಸಿತು. ಅರ್ಥಶೂನ್ಯವಾದ ತುಣುಕುಗಳು ತಮ್ಮ ವೈಯಕ್ತಿಕ ಪ್ರತ್ಯೇಕತೆಯನ್ನು ಕಳೆದುಕೊಂಡುವು ಮತ್ತು ನನ್ನ ಮನಸ್ಸು ದರ್ಶನವೊಂದರ ಅಖಂಡತೆಯಲ್ಲಿ ತೀವ್ರ ಖುಷಿಗೊಂಡಿತು. ಅಂತಹುದೇ ರೀತಿಯಲ್ಲಿ ಹಳ್ಳಿಯಲ್ಲಿನ ಆ ಹಗಲಿನಲ್ಲಿ ನನ್ನ ಜೀವನ ಹಠಾತ್ತನೆ ನನಗೆ ಬಂದು ಪ್ರಕಾಶಮಾನವಾದ ಸತ್ಯದ ಐಕ್ಯದಲ್ಲಿ ಗೋಚರಿಸಿತು. ಅಲೆದಾಡುವ ಅಲೆಗಳಂತೆ ಗೋಚರಿಸಿದ್ದ ಎಲ್ಲ ವಸ್ತುಗಳು ಎಲ್ಲೆಯಿಲ್ಲದ ಸಮುದ್ರಕ್ಕೆ ಸಂಬಂಧಿಸಿದಂತೆ ನನ್ನ ಮನಸ್ಸಿಗೆ ಬಹಿರಂಗಗೊಂಡುವು. ಕಲೆಯ

ಅಧ್ಯಾತ್ಮಿಕ ಕೃತಿಯಾಗಿರುವ, ಎಂದೆಂದಿಗೂ ವಿಸ್ತಾರಗೊಳ್ಳುತ್ತಿರುವ ವೈಯಕ್ತಿಕತೆಯಲ್ಲಿ ಅವುಗಳನ್ನು ಒಂದುಗೂಡಿಸುತ್ತ, ನನ್ನನ್ನು ಮತ್ತು ನನ್ನ ಪ್ರಪಂಚವನ್ನು ಅರ್ಥ ಮಾಡಿಕೊಂಡ ಯಾವುದೋ ಒಂದು ವ್ಯಕ್ತಿ ನನ್ನೆಲ್ಲ ಅನುಭವಗಳಲ್ಲಿ ತನ್ನ ಅತ್ಯುತ್ತಮವಾದ ಅಭಿವ್ಯಕ್ತಿಯನ್ನು ಹುಡುಕುತ್ತಿರುವನೆಂದು ನಾನು ಖಚಿತಗೊಂಡೆ.

ಈ ವ್ಯಕ್ತಿಗೆ ನಾನು ಹೊಣೆಗಾರನಾಗಿದ್ದೆ; ಏಕೆಂದರೆ, ನನ್ನೊಳಗಿನ ಸೃಷ್ಟಿ ಆತನದಾಗಿರುವಂತೆಯೇ ನನ್ನದೂ ಆಗಿತ್ತು. ಅದೇ ಕ್ರಿಯಾಶೀಲ ಮನಸ್ಸೇ ಬ್ರಹ್ಮಾಂಡವನ್ನು ಅದರ ಶಾಶ್ವತವಾದ ಮಾದರಿಗೆ ರೂಪಿಸುತ್ತಲಿದ್ದಿರಬಹುದು; ಆದರೆ, ಓರ್ವ ವ್ಯಕ್ತಿಯಾಗಿ ನನ್ನಲ್ಲಿ ಅದು ಒಂದು ಆಳವಾಗುತ್ತಿರುವ ಪ್ರಜ್ಞೆಯೊಳಗೆ ಬೆಳೆಯುತ್ತ ವೈಯಕ್ತಿಕ ಸಂಬಂಧಗಳ ತನ್ನ ವಿಶೇಷ ಕೇಂದ್ರಗಳಲ್ಲೊಂದನ್ನು ಹೊಂದಿತ್ತು. ನನ್ನ ದಿನಗಳ ಅಕ್ಕಪಕ್ಕ ಒಂದು ಸುದೀರ್ಘವಾದ ಉರಿಯುತ್ತಲಿದ್ದ ಹಾದಿಯಲ್ಲಿ ತಮ್ಮ ನೆನಪುಗಳನ್ನು ಬಿಟ್ಟಿದ್ದ ನನ್ನ ದುಃಖಗಳನ್ನು ನಾನು ಹೊಂದಿದ್ದೆ. ಆದರೆ, ಆ ಕ್ಷಣದಲ್ಲಿ ನಾನು ಅವುಗಳಲ್ಲಿ, ತಮ್ಮ ವೈಯಕ್ತಿಕ ಸ್ಫೋಟಗಳಲ್ಲಿ ಬ್ರಹ್ಮಾಂಡದ ಇತಿಹಾಸವನ್ನು ಬೆಳಗಿಸುತ್ತಿದ್ದ ನಕ್ಷತ್ರಗಳಂತೆ ನನ್ನದೇ ಆದ ವೈಯಕ್ತಿಕ ಎಲ್ಲೆಗಳನ್ನು ಎಲ್ಲ ಕಾಲದಲ್ಲೂ ಮೀರಿದ ಸೃಷ್ಟಿಯ ಒಂದು ಯಾತನೆಗೆ ನಾನು ನನ್ನನ್ನು ಸರಿಹೊಂದಿಸಿಕೊಂಡೆ. ಕ್ರಿಯಾಶೀಲವಾದೊಂದು ಗೆಳೆತನದಲ್ಲಿ ಎರಡರ ಭೇಟಿಯ ರಹಸ್ಯದಲ್ಲಿನ ಪ್ರತ್ಯೇಕತೆಯನ್ನು ನನ್ನ ಬಾಳಿನಲ್ಲಿ ಅನುಭವಿಸಲು ಅದು ನನಗೆ ಮಹದಾನಂದವನ್ನು ನೀಡಿತು. ಅಂತಿಮವಾಗಿ ನನ್ನ ಧರ್ಮವನ್ನು, ಮಾನವನ ಧರ್ಮವನ್ನು ಕಂಡುಕೊಂಡಿದ್ದೆನೆಂದು ನಾನು ಭಾವಿಸಿದೆ. ಅದರಲ್ಲಿ ಅನಂತವು ಮಾನವೀಯತೆಯಲ್ಲಿ ಅರ್ಥೈಸಿಕೊಂಡಿದ್ದೆನೆಂದು ನಾನು ಭಾವಿಸಿದೆ. ಅದರಲ್ಲಿ ಅನಂತವು ಮಾನವೀಯತೆಯಲ್ಲಿ ಅರ್ಥನಿರೂಪಿತಗೊಂಡಿತು ಮತ್ತು ನನ್ನ ಪ್ರೀತಿ ಮತ್ತು ಸಹಕಾರದ ಅಗತ್ಯವನ್ನು ಪಡೆಯುವಂತೆ ನನ್ನ ಸಮೀಪಕ್ಕೆ ಬಂದಿತು.

ನನ್ನ ಈ ಭಾವನೆ ಮುಂದೊಂದು ದಿನ 'ಜೀವನ್ ದೇವತಾ' (Jivan Devata), ನನ್ನ ಜೀವನದ ಪ್ರಭು ಎಂದು ನಾನು ಕರೆದುದನ್ನು ಸಂಬೋಧಿಸಿದ ನನ್ನ ಕೆಲವು ಪದ್ಯಗಳಲ್ಲಿ ಅಭಿವ್ಯಕ್ತಿಯನ್ನು ಪಡೆಯಿತು.

ವಿದೇಶೀಯ ಭಾಷೆಯೊಂದರೊಂದಿಗೆ ವ್ಯವಹರಿಸುವಲ್ಲಿನ ನನ್ನ ಮುಜುಗರದ ಬಗ್ಗೆ ಪೂರ್ಣ ಅರಿವುಳ್ಳವನಾದ ನಾನು ಸ್ವಲ್ಪ ಮಟ್ಟಿನ ಹಿಂಜರಿಕೆಯೊಂದಿಗೆ, ಕಾವ್ಯದ ಸ್ವಯಂ ದಾಖಲಾತಿಯ ಮಾಧ್ಯಮದ ಮೂಲಕ ಪ್ರಕಟಿತಗೊಂಡ ಯಾವುದೇ ಸಾಕ್ಷ್ಯ, ಪ್ರಜ್ಞಾಪೂರ್ವಕ ಪ್ರಶ್ನಿಸುವಿಕೆಗಳ ಮೂಲಕ ಒತ್ತಾಯಪೂರ್ವಕವಾಗಿ ಪಡೆದ ಉತ್ತರಗಳಿಗಿಂತಲೂ ಹೆಚ್ಚು ವಿಶ್ವಾಸಾರ್ಹವಾದುದೆಂದು ಖಚಿತಗೊಂಡವನಾಗಿಯೇ ಅನುವಾದವೊಂದನ್ನು ನೀಡುತ್ತಿದ್ದೇನೆ:



ನನ್ನ ಬಾಳಿನ ಪ್ರಭುವೆ, ನನ್ನ ಅಸ್ತಿತ್ವದ ಅಂತರತಮ ಚೈತನ್ಯವಾಗಿರುವ
ನೀನು, ಸಂತೋಷಗೊಂಡಿರುವೆಯೇನು?
ಏಕೆಂದರೆ, ನಾನು ನನ್ನ ಹೃದಯದ ಹಿಂಡಿದ ದ್ರಾಕ್ಷಿಗಳು ಬಿಟ್ಟುಕೊಟ್ಟಿದ್ದ
ನೋವು ಮತ್ತು ನಲಿವಿನೊಂದಿಗೆ ತುಂಬಿದ್ದ ನನ್ನ
ಬಟ್ಟಲನ್ನು ನಿನಗೆ ನೀಡಿದೆ,
ನಾನು ಬಣ್ಣಗಳು ಮತ್ತು ಹಾಡುಗಳ ಲಯದೊಂದಿಗೆ ನಿನ್ನ ಹಾಸಿಗೆಗಾಗಿ
ಹೊಂದಿಕೆಯನ್ನು ಹೆಣೆದೆ,
ಮತ್ತು ನನ್ನ ಬಯಕೆಗಳ ಕರಗಿಸಿದ ಚಿನ್ನದೊಂದಿಗೆ
ನಿನ್ನ ಕಳೆಯುತ್ತಲಿರುವ ಗಂಟೆಗಳಿಗಾಗಿ ಆಟಿಕೆಗಳನ್ನು ರಚಿಸಿದೆ.

ನನ್ನನ್ನು ನೀನು ನಿನ್ನ ಜೊತೆಗಾರನನ್ನಾಗಿ, ನನ್ನ ಬಾಳಿನ
ಪ್ರಭು, ಏತಕ್ಕೆ ಆಯ್ದುಕೊಂಡೆಯೋ ನನಗೆ ತಿಳಿಯದು!
ನೀನು ನನ್ನ ದಿನಗಳು ಮತ್ತು ರಾತ್ರಿಗಳನ್ನು, ನನ್ನ ಕಾರ್ಯಗಳು
ಮತ್ತು ಕನಸುಗಳನ್ನು ನಿನ್ನ ಕಲೆಯ ರಸವಿದ್ಯೆಗಾಗಿ ಸಂಗ್ರಹಿಸಿದೆಯೇನು
ಮತ್ತು ನನ್ನ ಶರತ್ಕಾಲ ಮತ್ತು ವಸಂತದ ನನ್ನ ಹಾಡುಗಳನ್ನು ನಿನ್ನ
ಸಂಗೀತದ ಹಾರದಲ್ಲಿ ಪೋಣಿಸಿದೆಯೇನು ಮತ್ತು ನಿನ್ನ ಕಿರೀಟಕ್ಕಾಗಿ
ನನ್ನ ಮಾಗಿದ ಕ್ಷಣಗಳಿಂದ ಹೂಗಳನ್ನು ಶೇಖರಿಸಿದೆಯೇನು?

ನನ್ನ ಬಾಳಿನ ಪ್ರಭುವೆ, ನಿನ್ನ ಕಣ್ಣುಗಳು ನನ್ನ ಹೃದಯದ
ಕತ್ತಲೆಯತ್ತ ದಿಟ್ಟಿಸಿ ನೋಡುತ್ತಿರುವುದನ್ನು ನಾನು ಕಾಣುತ್ತಿದ್ದೇನೆ,

ನನ್ನ ವೈಫಲ್ಯಗಳು ಮತ್ತು ತಪ್ಪುಗಳು ಕ್ಷಮಿಸಲ್ಪಟ್ಟಿವೆಯೇ
ಎಂದು ನನಗೇನೊ ಬಹಳ ಸಂಶಯವಿದೆ.

ಏಕೆಂದರೆ, ಸೇವಾರಹಿತವಾದ ನನ್ನ ಹಗಲುಗಳು ಮತ್ತು ವಿಸ್ಮರಣೆಯ
ರಾತ್ರಿಗಳು ಬಹಳವಾಗಿದ್ದುವು; ನಿನಗೆ ಸಮರ್ಪಿತವಾಗದಿದ್ದ
ನೆರಳಿನಲ್ಲಿ ಬಾಡಿಹೋಗಿದ್ದ ಹೂವುಗಳು ವ್ಯರ್ಥವಾಗಿದ್ದುವು.

ಬಹುವೇಳೆ ನನ್ನ ಲ್ಯೂಟ್‌ವಾದ್ಯದ ಪರೀಕ್ಷಿಸಲಾದ ತಂತಿಗಳು
ನಿನ್ನ ಸಂಗೀತದ ಮೊಳಗಿನತ್ತ ಸಡಿಲಗೊಂಡವು.

ಮತ್ತು ಬಹುವೇಳೆ ವ್ಯರ್ಥಗೊಂಡ ಗಂಟೆಗಳ ವಿನಾಶದಲ್ಲಿ ನನ್ನ
ಮಂಕುಕವಿದ ಸಂಜೆಗಳು ಕಣ್ಣೀರಿನಿಂದ ತುಂಬಿರುತ್ತಿದ್ದುವು.

ನನ್ನ ಬಾಳಿನ ಪ್ರಭುವೆ, ನನ್ನ ಚುಂಬನಗಳು ತಮ್ಮ ಸತ್ಯತೆಯನ್ನು
ಕಳೆದುಕೊಳ್ಳುತ್ತ, ನಿನ್ನ ಸುತ್ತಲಿರುವ ನನ್ನ ತೋಳುಗಳು ಸತ್ವಹೀನವಾಗುತ್ತ
ಲಿರುವಂತೆ ಅಂತಿಮವಾಗಿ ನನ್ನ ದಿನಗಳು ತಮ್ಮ ಕೊನೆಮುಟ್ಟುತ್ತವೆಯೆ?

ಹಾಗಿದ್ದಲ್ಲಿ ಈ ಉತ್ಸಾಹಶೂನ್ಯದಿನದ ಭೇಟಿಯನ್ನು ತಟಸ್ಥ
ಗೊಳಿಸು ಹೊಸ ರೂಪಗಳ ಆನಂದದಲ್ಲಿ ನನ್ನಲ್ಲಿನ ಹಳೆಯದನ್ನು ನವೀಕರಿಸು;
ಬಾಳಿನ ಹೊಸ ಉತ್ಸವಾಚರಣೆಯಲ್ಲಿ ಮತ್ತೊಮ್ಮೆ ವಿವಾಹಮಹೋತ್ಸವ
ಬರಲಿ

ಹಳ್ಳಿಯ ಹುಡುಗರ ಒಂದು ಸಂಭ್ರಮಗೊಂಡ ಗುಂಪು ದಡದಿಂದ ಹಳೆಯದೊಂದು ಮೀನುಹಿಡಿಯುವ ದೋಣಿಯನ್ನು ಗದ್ದಲದಿಂದ ಕೂಡಿ ಎಳೆಯುತ್ತಲಿದ್ದಂತೆ, ಹಗಲಿನ ಮೋಡಗಳು ಪೂರ್ವದ ದಿಗಂತದ ಮೇಲೆ ದಟ್ಟವಾಗುತ್ತಲಿದ್ದಾಗ ಮತ್ತು ಅಲುಗಾಡುವ ಬಿದುರಿನ ಟೊಂಗೆಗಳ ಮೇಲೆ ಮೈದಡವುತ್ತಿದ್ದ ನೆರಳು ನೆಲೆಸಿರುವಾಗ ಜುಲೈನ ಒಂದು ದಿನದಂದು ಒಂದು ಬರಡು ಕ್ಷಣದಲ್ಲಿ ಅಕಸ್ಮಾತ್ತಾಗಿ ನಾನು ಸಂಧಿಸಿದ ಸಾಕ್ಷಾತ್ಕಾರದೆಡೆಗೆ ಅಪ್ರಜ್ಞಾಪೂರ್ವಕವಾಗಿ ಹೇಗೆ ಪಯಣಿಸುತ್ತಿದ್ದೆನೆಂಬುದನ್ನು ಇದರಿಂದ ನೀವು ಅರ್ಥಮಾಡಿಕೊಳ್ಳುತ್ತೀರಿ; ಮತ್ತು ಆ ಕ್ಷಣದಲ್ಲಿ, ಅಪರಿಚಿತವಾದ ಸಾಮ್ರಾಜ್ಯವೊಂದರ ಸಂಪತ್ತನ್ನು ಕೊಂಡೊಯ್ಯುತ್ತಲಿದ್ದ ವಿಚಿತ್ರವಾದ ಚಾವಣಿ ಬಂಡಿಯಂತೆ ನನ್ನ ಮನಸ್ಸಿನ ಮನಸ್ಸಿನ ಅಡ್ಡಲಾಗಿ ಅನಿರೀಕ್ಷಿತವಾದೊಂದು ಆಲೋಚನೆಗಳ ಸರಣಿ ಹೇಗೆ ಧಾವಿಸಿತೆಂದು ನಾನು ಹೇಳಲಾರೆ.

* * * *



# ೫. ಸ್ವಾಮಿ ವಿವೇಕಾನಂದ
## (ಕ್ರಿ.ಶ. ೧೮೬೩–೧೯೦೨)

[ಮೂಲತಃ ನರೇಂದ್ರನಾಥದತ್ತ ಎಂದು ಪರಿಚಿತನಾಗಿದ್ದ ಆತ ಶ್ರೀ ರಾಮಕೃಷ್ಣರ ಶಿಷ್ಯರುಗಳಲ್ಲಿ ಅತ್ಯಂತ ಪ್ರೀತಿಪಾತ್ರನಾದವನಾಗಿದ್ದ. ಓರ್ವ ಸಂದೇಹಕ್ಕೆಡೆಯೇ ಇಲ್ಲದ ಭೌತಿಕವಾದಿ ಮತ್ತು ದೇವರು ಮೊದಲಾದವುಗಳಲ್ಲಿ ನಂಬಿಕೆಯಿಲ್ಲದ ಸಂದೇಹವಾದಿಯಿಂದ ಓರ್ವ ಸಾಕ್ಷಾತ್ಕಾರ ಪಡೆದ ವ್ಯಕ್ತಿ ಮತ್ತು ಕ್ರಿಯಾತ್ಮಕ ಹಿಂದೂಧರ್ಮದ ಧರ್ಮಪ್ರಚಾರಕನವರೆಗೆ ಆತನ ಜೀವನದ ಮುನ್ನಡೆ ಆಧ್ಯಾತ್ಮಿಕತೆಯ ಒಂದು ಸಾಹಸಕಥೆಯಾಗಿದೆ. ತನ್ನ ಗುರುದೇವನ ಮರಣಾನಂತರ ಆತ ತನ್ನದೆಂದು ಕರೆಯಲಾಗುವ ಏನೊಂದೂ ಇಲ್ಲದೆ ಓರ್ವ ಅಲೆಮಾರಿ ಸನ್ಯಾಸಿಯಾಗಿ ಇಡೀ ಭಾರತವನ್ನು ಕಾಲ್ನಡಿಗೆಯಿಂದ ಸಂಚರಿಸಿದರು. ಅವರು ತಮ್ಮ ಶರೀರದಲ್ಲಿ ಸಮುದ್ರದಾಚೆಗೂ 'ವೇದಾಂತದ ಸಿಂಹ'ವನ್ನು ಕೊಂಡೊಯ್ದರು ಮತ್ತು ಆಧ್ಯಾತ್ಮ ವಿಜಯದ ಮಾರ್ಗದರ್ಶನ ಮಾಡುತ್ತ ಚಿಕಾಗೋದಲ್ಲಿನ ಧರ್ಮಸಂಸತ್ತಿನಲ್ಲಿ ಅದನ್ನು ಗರ್ಜಿಸುವಂತೆ ಮಾಡಿದರು. ರಾಮಕೃಷ್ಣಮಠ ಮತ್ತು ಧರ್ಮಪ್ರಚಾರಕ ಸಂಸ್ಥೆಯ ಸ್ಥಾಪಕರಾದ ಅವರು ತ್ಯಾಗ ಮತ್ತು ಸೇವೆಗೆ 'ಒಂದುಗೂಡಿದ್ದ' ಸನ್ಯಾಸಿಗಳ ಹೊಸ ಪಂಥವೊಂದನ್ನು ಪ್ರತಿಷ್ಠಾಪಿಸಿದರು. ಎಂಟು ಸಂಪುಟಗಳಲ್ಲಿ ಸಂಗ್ರಹಿಸಲಾಗಿರುವ ಅವರ ಉಪನ್ಯಾಸಗಳು ಮತ್ತು ಬರವಣಿಗೆಗಳು ಹಿಂದೂಧರ್ಮ ಮತ್ತು ತತ್ತ್ವಶಾಸ್ತ್ರದ ಸಂಗ್ರಹಗಳಾಗಿ ರಚಿತವಾಗಿವೆ.]

**ಗೆಲಿಲಿಯನ್ ಜಯಿಸುತ್ತಾನೆ**

ನರೇಂದ್ರನನ್ನು ಕುರಿತಂತೆ ಆಗಲೇ ಭವಿಷ್ಯಜ್ಞಾನವನ್ನು ಪಡೆದಿದ್ದ ಮತ್ತು ಆ ಕೊನೆಯ ವ್ಯಕ್ತಿಯ ಮುಂದಿದ್ದ ಮಹಾಭವಿಷ್ಯದ ಅರಿವುಳ್ಳವರಾಗಿದ್ದ ಗುರುದೇವರು ಆತನನ್ನು ಮಾತೃಸಹಜವಾದ ಭಾವುಕತೆಯೊಂದಿಗೆ ಬರಮಾಡಿಕೊಂಡರು. ಆದರೆ, ಆತ ಗುರುದೇವನತ್ತ ಆಕರ್ಷಿತಗೊಂಡನಾದರೂ, ನರೇಂದ್ರ ಪ್ರಾರಂಭದಲ್ಲಿ ಗುರುದೇವರ ಬೋಧನೆಗಳ ವಿಷಯದಲ್ಲಿ ಅತೀವ ತಪ್ಪು ಹುಡುಕುವವನಾಗಿದ್ದ.

ಪ್ರತಿಯೊಂದೂ ತನ್ನದೇ ಆದ ಸಮಯವನ್ನು ಹೊಂದಿರುತ್ತದೆ; ಹಾಗಿದ್ದರೂ ಆತನ ತಂದೆಯ ಸಾವು ನರೇಂದ್ರನ ಜೀವನದಲ್ಲಿ ಸಂದಿಗ್ಧ ಸಮಯವನ್ನುಂಟು

ಮಾಡಿತು. ಆತ ಹೆಚ್ಚುಕಡಿಮೆ 'ಸನ್ಯಾಸ'ವನ್ನು ಸ್ವೀಕರಿಸಲು ನಿರ್ಧರಿಸಿದ್ದಾಗ ಶ್ರೀ ರಾಮಕೃಷ್ಣರು ಆತನನ್ನು ಮತ್ತೊಮ್ಮೆ ಸಂಪರ್ಕಿಸಿದರು. ಮುಂದಿನದು ನರೇಂದ್ರನ ಕಣ್ಣುಗಳನ್ನು ತೆರೆಸಿದ ಸ್ವಾರಸ್ಯಕರವಾದ ಘಟನೆಯ ಆತನದೇ ಮಾತುಗಳಲ್ಲಿನ ವಿವರ:

ದೇವರು ಶ್ರೀ ರಾಮಕೃಷ್ಣರ ಪ್ರಾರ್ಥನೆಗಳನ್ನು ಕೇಳುತ್ತಿದ್ದನೆಂಬ ಭಾವನೆ, ಒಂದು ದಿನ ನನಗೆ ಹೊಳೆಯಿತು; ಆದ್ದರಿಂದ ನನ್ನ ಹಣಕಾಸಿನ ಕೊರತೆಗಳ ಪರಿಹಾರಕ್ಕಾಗಿ ನನಗಾಗಿ ಪ್ರಾರ್ಥನೆ ಮಾಡುವಂತೆ– ಗುರುದೇವ ನನಗೆ ಎಂದಿಗೂ ನಿರಾಕರಿಸದಿರುವ ನೆರವು– ನಾನೇಕೆ ಅವರನ್ನು ಕೇಳಬಾರದು? ನಾನು ದಕ್ಷಿಣೇಶ್ವರಕ್ಕೆ ಧಾವಿಸಿದೆ ಮತ್ತು ಹಸಿವಿನಿಂದ ನರಳುತ್ತಲಿರುವ ನನ್ನ ಕುಟುಂಬದ ಪರವಾಗಿ ಬೇಡಿಕೆಯನ್ನು ಸಲ್ಲಿಸುವಂತೆ ಅವರನ್ನು ಒತ್ತಾಯಪಡಿಸಿದೆ.

ಅವರೆಂದರು, 'ನನ್ನ ಮಗು, ನಾನಂತಹ ಬೇಡಿಕೆಯನ್ನು ಸಲ್ಲಿಸಲಾರೆ. ಆದರೆ, ಸ್ವಯಂ ನೀನೇ ಹೋಗಿ ಮಾತೆಯನ್ನು ಕೇಳಬಾರದೇಕೆ? ನಿನ್ನ ಎಲ್ಲ ಯಾತನೆಗಳು ನೀನು ಆಕೆಯನ್ನು ಕಡೆಗಣಿಸಿರುವ ಕಾರಣದಿಂದ ಉಂಟಾಗಿವೆ.'

ನಾನೆಂದೆ, 'ನಾನು ಮಾತೆಯನ್ನರಿತಿಲ್ಲ. ನೀವು ದಯಮಾಡಿ ನನ್ನ ಪರವಾಗಿ ಆಕೆಯೊಡನೆ ಮಾತನಾಡಿ. ನೀವು ಹಾಗೆ ಮಾಡಲೇಬೇಕು.'

ಅವರು ಪ್ರೀತಿಯಿಂದ ಉತ್ತರಿಸಿದರು, 'ನನ್ನ ಪ್ರೀತಿಯ ಮಗು, ನಾನು ಮತ್ತೆ ಮತ್ತೆ ಹಾಗೆ ಮಾಡಿದ್ದೇನೆ. ಆದರೆ, ನೀನು ಆಕೆಯನ್ನು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ, ಆಕೆ ನನ್ನ ಪ್ರಾರ್ಥನೆಯನ್ನು ಸಲ್ಲಿಸುತ್ತಿಲ್ಲ. ಒಳ್ಳೆಯದು, ಈ ದಿನ ಮಂಗಳವಾರ – ಈ ದಿನ ರಾತ್ರಿ ಕಾಳಿ ದೇವಾಲಯಕ್ಕೆ ಹೋಗು, ಮಾತೆಯ ಎದುರಿಗೆ ಸಾಷ್ಟಾಂಗಪ್ರಣಾಮ ಮಾಡು ಮತ್ತು ನೀನು ಇಷ್ಟಪಡುವ ಯಾವುದೇ ವರವನ್ನು ಆಕೆಯನ್ನು ಕೇಳು. ಅದನ್ನು ಸಲ್ಲಿಸಲಾಗುತ್ತದೆ. ಆಕೆಯೇ ಪರಮಜ್ಞಾನ, ಬ್ರಹ್ಮನ ನಿಗೂಢ ಶಕ್ತಿ ಆಕೆಯೇ ಮತ್ತು ಆಕೆಯ ಕೇವಲ ಸಂಕಲ್ಪವೇ ಈ ಪ್ರಪಂಚಕ್ಕೆ ಜನ್ಮ ನೀಡಿದೆ. ಎಲ್ಲವನ್ನೂ ನೀಡುವ ಶಕ್ತಿ ಆಕೆಯಲ್ಲಿದೆ.'

ನಾನು ಪ್ರತಿಯೊಂದು ಮಾತನ್ನೂ ನಂಬಿಕೆ ಮತ್ತು ರಾತ್ರಿಗಾಗಿ ಕಾತರದಿಂದ ಕಾದೆ. ಸುಮಾರು ಒಂಬತ್ತು ಘಂಟೆಯ ವೇಳೆಗೆ ಗುರುದೇವ ದೇವಾಲಯಕ್ಕೆ ಹೋಗುವಂತೆ ನನಗೆ ಅಪ್ಪಣೆ ಮಾಡಿದರು.

ನಾನು ತೆರಳುತ್ತಲಿರುವಂತೆಯೇ ಒಂದು ದೈವೀಪರವಶತೆ ನನ್ನನ್ನು ಆವರಿಸಿಕೊಂಡಿತು. ನನ್ನ ಕಾಲುಗಳು ಅಸ್ಥಿರವಾಗಿದ್ದುವು. ನನ್ನ ಹೃದಯ ಜೀವಂತಳಾದ ದೇವತೆಯನ್ನು ನೋಡುವ ಮತ್ತು ಆಕೆಯ ಮಾತುಗಳನ್ನು ಕೇಳುವ ಆನಂದದ ನಿರೀಕ್ಷೆಯಿಂದ ನೆಗೆದಾಡುತ್ತಲಿತ್ತು. ಭಾವನೆ ನನ್ನನ್ನು ಆವರಿಸಿಕೊಂಡಿತ್ತು.



ದೇವಾಲಯವನ್ನು ತಲುಪಿ ವಿಗ್ರಹದ ಮೇಲೆ ನಾನು ನನ್ನ ಕಣ್ಣುಗಳನ್ನು ಇರಿಸುತ್ತಲಿದ್ದಂತೆಯೇ ದೈವೀಮಾತೆ ವಾಸ್ತವವಾಗಿ ಜೀವಂತಳಾಗಿ ಮತ್ತು ಪ್ರಜ್ಞಾಪೂರ್ಣಳಾಗಿ, ದೈವೀಪ್ರೇಮ ಮತ್ತು ಸೌಂದರ್ಯದ ಚಿರಂತನ ಚಿಲುಮೆಯಾಗಿರುವುದಾಗಿ ನಾನು ಕಂಡೆ, ಭಕ್ತಿ ಮತ್ತು ಪ್ರೇಮದ ಉಕ್ಕಿ ಬರುತ್ತಲಿದ್ದ ಅಲೆಯಲ್ಲಿ ನಾನು ಸಿಲುಕಿಕೊಂಡೆ.

ಆನಂದದ ಭಾವಾವೇಶದಲ್ಲಿ ನಾನು ಮತ್ತೆ ಮತ್ತೆ ಮಾತೆಯ ಎದುರಿನಲ್ಲಿ ಸಾಷ್ಟಾಂಗ ಪ್ರಣಾಮ ಮಾಡಿ ಬೇಡಿಕೊಂಡೆ. 'ಮಾತೆ, ನನಗೆ ವಿವೇಕವನ್ನು ಕೊಡು! ನನಗೆ ಸನ್ಯಾಸವನ್ನು ನೀಡು. ನನಗೆ ಜ್ಞಾನ ಮತ್ತು ಭಕ್ತಿಯನ್ನು ನೀಡು! ನಾನು ನಿನ್ನ ಅವಿಚ್ಛಿನ್ನವಾದ ದರ್ಶನವನ್ನು ಪಡೆಯಲಾಗುವಂತೆ ಅನುಗ್ರಹಿಸು.'

ನನ್ನ ಆತ್ಮದಲ್ಲಿ ಒಂದು ನಿರಾಕುಲವಾದ ಶಾಂತಿ ವ್ಯಾಪಿಸಿತು. ಪ್ರಪಂಚ ಮರೆತುಹೋಯಿತು. ನನ್ನ ಹೃದಯದಲ್ಲಿ ಕೇವಲ ದೈವೀಮಾತೆ ಪ್ರಕಾಶಿಸಿದಳು.

ನಾನು ಹಿಂದಿರುಗುತ್ತಲಿದ್ದಂತೆಯೇ ಶ್ರೀ ರಾಮಕೃಷ್ಣರು ನನ್ನ ಪ್ರಾಪಂಚಿಕ ಅಗತ್ಯಗಳ ಈಡೇರಿಕೆಗಾಗಿ ಮಾತೆಯಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇನೇ ಎಂದು ನನ್ನನ್ನು ಪ್ರಶ್ನಿಸಿದರು.

ಈ ಪ್ರಶ್ನೆಯಿಂದ ಚಕಿತಗೊಂಡು ನಾನು ನುಡಿದೆ, 'ಇಲ್ಲ ಗುರುದೇವ, ಅದೆಲ್ಲದರ ಬಗ್ಗೆ ನಾನು ಮರೆತುಬಿಟ್ಟೆ ಆದರೆ, ಈಗ ಏನಾದರೂ ಪರಿಹಾರವಿದೆಯೆ?'

'ಮತ್ತೊಮ್ಮೆ ಹೋಗು, ನಿನ್ನ ಅಗತ್ಯಗಳ ಬಗೆಗೆ ಆಕೆಗೆ ಹೇಳು' ಎಂದು ಅವರು ನುಡಿದರು.

ಮತ್ತೊಮ್ಮೆ ನಾನು ದೇವಾಲಯಕ್ಕೆ ತೆರಳಿದೆ, ಆದರೆ, ಮಾತೆ ಕಣ್ಣಿಗೆ ಬೀಳುತ್ತಲಿದ್ದಂತೆಯೇ ಮತ್ತೊಮ್ಮೆ ನನ್ನ ಉದ್ದೇಶವನ್ನು ಮರೆತೆ, ಮತ್ತೆ ಮತ್ತೆ ಆಕೆಗೆ ತಲೆಬಾಗಿದೆ ಮತ್ತು ಪ್ರೇಮ ಮತ್ತು ಭಕ್ತಿಗಾಗಿ ಮಾತ್ರವೇ ಪ್ರಾರ್ಥನೆ ಸಲ್ಲಿಸಿದೆ.

ಎರಡನೆಯ ಬಾರಿಯಾದರೂ ಅದನ್ನು ನಾನು ಮಾಡಿದ್ದೇನೇ ಎಂದು ಗುರುದೇವ ನನ್ನನ್ನು ಪ್ರಶ್ನಿಸಿದರು. ಜರುಗಿದ್ದೇನೆಂದು ನಾನವರಿಗೆ ತಿಳಿಸಿದೆ.

ಅವರೆಂದರು, 'ಎಷ್ಟೊಂದು ನಿರ್ಲಕ್ಷ್ಯದವನು ನೀನು! ಆ ಕೆಲವು ಮಾತುಗಳನ್ನು ನುಡಿಯಲಾಗುವಷ್ಟು ಮಟ್ಟಿಗೆ ನಿನ್ನನ್ನು ನಾನು ನಿಯಂತ್ರಿಸಿಕೊಳ್ಳಲಾರದೆ ಹೋದೆಯ? ಹೋಗಲಿ, ಮತ್ತೊಮ್ಮೆ ಪ್ರಯತ್ನಿಸು, ಆಕೆಗೆ ಆ ಪ್ರಾರ್ಥನೆಯನ್ನು ಸಲ್ಲಿಸು, ಬೇಗ!'

ನಾನು ಮೂರನೆಯ ಬಾರಿಗೆ ಹೋದೆ. ಆದರೆ, ದೇವಾಲಯವನ್ನು ಪ್ರವೇಶಿಸುತ್ತಿದ್ದಂತೆ ಒಂದು ಘೋರವಾದ ನಾಚಿಕೆ ನನ್ನನ್ನು ಪರವಶಗೊಳಿಸಿತು. 'ಎಂತಹ ಕ್ಷುಲ್ಲಕವಾದುದನ್ನು ಪ್ರಾರ್ಥಿಸಲು ನಾನು ಮಾತೆಯ ಬಳಿಗೆ ಬಂದಿರುವೆನಲ್ಲ! ನಾನೆಂತಹ ಮೂರ್ಖ!' ಎಂದು ಆಲೋಚಿಸಿದೆ.

ಅವಮಾನ ಮತ್ತು ಪಶ್ಚಾತ್ತಾಪದಲ್ಲಿ ನಾನು ಆಕೆಗೆ ಗೌರವಪುರಸ್ಸರವಾಗಿ ತಲೆಬಾಗಿ ನುಡಿದೆ, 'ಮಾತೆ, ಜ್ಞಾನ ಮತ್ತು ಭಕ್ತಿಯನ್ನು ಬಿಟ್ಟು ನನಗೆ ಬೇರೇನೂ ಬೇಡ.

ದೇವಾಲಯದಿಂದ ಹೊರಬರುತ್ತ ಈ ಎಲ್ಲವೂ ಶ್ರೀರಾಮಕೃಷ್ಣರ ಸಂಕಲ್ಪದಿಂದಲೇ ಜರುಗಿರುವುದಾಗಿ ನಾನು ಅರ್ಥಮಾಡಿಕೊಂಡೆ. ಇಲ್ಲದಿದ್ದಲ್ಲಿ ಮೂರು ಬಾರಿಗೂ ಕಡಿಮೆಯಿಲ್ಲದಂತೆ ನಾನು ವಿಫಲನಾಗುವುದು ಹೇಗೆ?

ನಾನು ಅವರ ಬಳಿಗೆ ಬಂದು ನುಡಿದೆ, 'ಪೂಜ್ಯರೆ, ನನ್ನ ಮನಸ್ಸಿನ ಮೇಲೆ ಮೋಡಿಯನ್ನು ಹಾಕಿ ನನ್ನನ್ನು ಮರೆಯುವಂತೆ ಮಾಡಿರುವವರು ನೀವೆ. ಈಗ ಮನೆಯಲ್ಲಿ ನನ್ನ ಜನರು ಮುಂದೆಂದೂ ಬಡತನದ ಹಿಂಸೆಯನ್ನು ಅನುಭವಿಸದಂತೆ ವರವನ್ನು ದಯಮಾಡಿ ನನಗೆ ಅನುಗ್ರಹಿಸಿ.

ಅವರೆಂದರು, 'ಅಂತಹ ಪ್ರಾರ್ಥನೆ ಎಂದಿಗೂ ನನ್ನ ತುಟಿಗಳಿಂದ ಬರುವುದಿಲ್ಲ. ನಿನಗಾಗಿ ಪ್ರಾರ್ಥಿಸುವಂತೆ ನಾನು ನಿನಗೆ ತಿಳಿಸಿದೆ. ಆದರೆ, ನೀನದನ್ನು ಮಾಡಲಾರದೆ ಹೋದೆ. ನೀನು ಪ್ರಾಪಂಚಿಕ ಸುಖಗಳನ್ನು ಅನುಭವಿಸುವ ಅದೃಷ್ಟವಿಲ್ಲದವನೆಂಬಂತೆ ತೋರುತ್ತಿದೆ. ಸರಿ ಬಿಡು, ನಾನೇನೂ ಮಾಡಲಾರೆ.'

ಆದರೆ, ನಾನವರನ್ನು ಹೋಗಲು ಬಿಡಲಿಲ್ಲ. ಆ ಪ್ರಾರ್ಥನೆಯನ್ನು ಅವರು ಸಲ್ಲಿಸುವಂತೆ ನಾನು ಒತ್ತಾಯಪಡಿಸಿದೆ. ಕೊನೆಗೆ ಅವರು ನುಡಿದರು. 'ಹಾಗೆಯೇ ಆಗಲಿ, ಮನೆಯಲ್ಲಿ ನಿನ್ನ ಜನರು ಸರಳವಾದ ಆಹಾರ ಮತ್ತು ವಸ್ತ್ರದ ಕೊರತೆಯನ್ನು ಎಂದಿಗೂ ಅನುಭವಿಸುವುದಿಲ್ಲ.

ಆ ದಿನದಿಂದ ಮುಂದಕ್ಕೆ ನರೇನ್‌ನಿಗೆ ಹೊಸ ಜೀವನವೊಂದು ಆರಂಭವಾಯಿತು. ಎಲ್ಲ ಮತಧರ್ಮಗಳನ್ನು ಕುರಿತಂತೆ ತನ್ನ ಅತೀವವಾದ ವಿಮರ್ಶಾತ್ಮಕ ಮನೋಭಾವದ ಗುಣದಿಂದ ಆತ ಮುಂದೆ ವಿವೇಕಾನಂದ ಎಂಬ ಹೆಸರನ್ನು ಪಡೆದ. ಆತ ಈಗ ತನ್ನ ಮತಧರ್ಮವನ್ನು ಅರಿತು ನಂಬಿಕೆಯಿರಿಸಿದ. ಅದನ್ನು ಪ್ರಪಂಚಕ್ಕೆ ಘೋಷಿಸಿದೆ.

'ನಾನು ನಂಬಿಕೆಯನ್ನಿರಿಸುವ ಏಕೈಕ ದೇವರು ಎಲ್ಲ ಆತ್ಮಗಳ ಸಾರಾಂಶ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಾನು ದುಷ್ಟತನದ ನನ್ನ ದೇವರಲ್ಲಿ, ದೀನಾರ್ತನಾದ ದೇವರಲ್ಲಿ ಮತ್ತು ಎಲ್ಲ ಜನಾಂಗಗಳ ನಿರ್ಗತಿಕನಾದ ದೇವರಲ್ಲಿ ನಂಬಿಕೆಯಿರಿಸುತ್ತೇನೆ.'

ಗೆಲಿಲಿಯನ್ ವಿಜಯವನ್ನು ಸಾಧಿಸಿದ್ದ.

* * * *



# ೬. ಮಹಾತ್ಮಾ ಗಾಂಧಿ
## (ಕ್ರಿ.ಶ. ೧೮೬೯–೧೯೪೮)

[ಧಾರ್ಮಿಕ ಶಸ್ತ್ರಾಸ್ತ್ರಗಳೊಂದಿಗೆ ಪ್ರಪಂಚದ ಅತ್ಯಂತ ಬೃಹತ್ ಸಾಮ್ರಾಜ್ಯದೊಂದಿಗೆ ತಮ್ಮ ರಾಜಕೀಯ ಯುದ್ಧವನ್ನು ಹೋರಾಡಿದ ರಾಷ್ಟ್ರಪಿತ. ಅಹಿಂಸೆ ಮತ್ತು ಸತ್ಯದ ಪ್ರತಿಪಾದಕರಾದ ಅವರು ಕೆಳವರ್ಗದಲ್ಲಿ, ಉಪೇಕ್ಷಿತರಲ್ಲಿ ಮತ್ತು ಪರಿತ್ಯಕ್ತರಲ್ಲಿ ದೇವರನ್ನು ಕಂಡರು. ಆತ ಬಹಿಷ್ಕೃತರನ್ನು ದೇವರ ಮಗುವೆಂದು, 'ಹರಿಜನ'ನೆಂದು ಪೂಜಿಸಿದರು. ಕಾರಾಗೃಹ ಜೀವನವನ್ನು ಭಾರತಮಾತೆಗೆ ಒಂದು ಅರ್ಪಣೆಯೆಂದು ಪವಿತ್ರಗೊಳಿಸುತ್ತ ಅವರು ದ್ವೇಷವನ್ನು ಪ್ರೀತಿಯಿಂದ ಜಯಿಸಿದರು. ತಮ್ಮ ಅಂತರ್ವಾಣಿಯ ಮೂಲಕ ತಮ್ಮೊಂದಿಗೆ ಮಾತನಾಡಿದ ಸತ್ಯ ಅವರ ದೇವರಾಗಿತ್ತು. ತಮ್ಮ ಸ್ವಂತದ ನ್ಯೂನತೆಗಳನ್ನು ಜಯಿಸುತ್ತ ಮತ್ತು ತಮ್ಮ ಮೇಲೆ ತಾವೇ ಹೊರಿಸಿಕೊಂಡ ಉಪವಾಸಗಳ ಮೂಲಕ ಇತರರ ಪಾಪಗಳಿಗಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತ ಅವರು ಅನನ್ಯವಾಗಿರುವಂತೆಯೇ ಪರಿಣಾಮಕಾರಿಯೂ ಆಗಿದ್ದ ಆತ್ಮಶುದ್ಧೀಕರಣದ ಪ್ರಯೋಗ ವಿಧಾನವನ್ನು ವಿಕಾಸಗೊಳಿಸಿದರು. ತಮ್ಮ ಅಸ್ತಿತ್ವದ ಪ್ರತಿಯೊಂದು ಎಳೆಯುಲ್ಲಿಯೂ ಉನ್ನತವಾದ ಭಕ್ತಿಯ ಮೂಲಕ ಹುರಿದುಂಬಿದವರಾದ ಅವರು ಭ್ರಮೆಯಲ್ಲಿ ಮತ್ತು ತೀವ್ರ ವೇದನೆಯಲ್ಲಿ ಹಿತವಚನ ನುಡಿಯಲು ಮತ್ತು ಸಾಂತ್ವನ ನೀಡಲು ರಾಮನಾಮದ ಪರಿಣಾಮಕಾರಿತ್ವದಲ್ಲಿ ನಂಬಿಕೆ ಹೊಂದಿದ್ದರು. ತಮ್ಮ ಕೊಲೆಗಾರನಿಂದ ಮಾರಕವಾದ ಗುಂಡನ್ನು ಅವರು ಸ್ವೀಕರಿಸಿದುದು ತಮ್ಮ ತುಟಿಗಳ ಮೇಲೆ ಆ ನಾಮದೊಂದಿಗೆ. ಬುದ್ಧ ಮತ್ತು ಏಸುಕ್ರಿಸ್ತನಿಂದೀಚೆಗೆ ಯಾರೊಬ್ಬನೂ ಮಹಾತ್ಮಾಗಾಂಧೀಜಿಯವರಂತೆ ಅಂತಹ ಸಾರ್ವತ್ರಿಕವಾದ ಮೆಚ್ಚುಗೆ ಮತ್ತು ಪೂಜ್ಯತೆಯನ್ನು ಪ್ರೇರೇಪಿಸಿಲ್ಲ.]

**ದೇವವಾಣಿ**

ಅನೇಕರನ್ನು ತಬ್ಬಿಬ್ಬುಗೊಳಿಸುವ ಮೊದಲ ಪ್ರಶ್ನೆಯೆಂದರೆ ದೇವವಾಣಿಯದು, ಅದೇನು? ನಾನೇನನ್ನು ಆಲಿಸಿದೆ? ನಾನು ಕಂಡ ವ್ಯಕ್ತಿ ಯಾವನಾದರೂ ಇದ್ದನೇ? ಇಲ್ಲವಾದರೆ, ವಾಣಿಯನ್ನು ನನಗೆ ತಲುಪಿಸಿದುದು ಹೇಗೆ? ಇವು ಸಮಂಜಸವಾದ ಪ್ರಶ್ನೆಗಳು.

ನನಗೆ ದೇವರವಾಣಿ, ಅಂತಸ್ಸಾಕ್ಷಿಯ, ಸತ್ಯದ ಅಥವಾ ಅಂತರ್ವಾಣಿ ಅಥವಾ 'ಸ್ತಬ್ಧವಾದ ಕಿರುವಾಣಿ' ಎಲ್ಲವೂ ಒಂದೇ ಅರ್ಥ ಹೊಂದಿವೆ ಮತ್ತು ಅದೇ ವಸ್ತುವಾಗಿವೆ. ನಾನು ಯಾವ ಆಕಾರವನ್ನೂ ಕಾಣಲಿಲ್ಲ. ನಾನೆಂದಿಗೂ ಪ್ರಯತ್ನಿಸಿಲ್ಲ, ಏಕೆಂದರೆ ನಾನು ಯಾವಾಗಲೂ ದೇವರು ಆಕಾರವಿಲ್ಲದವನಾಗಿರುವುದಾಗಿ ನಂಬಿದ್ದೇನೆ. ಆದರೆ ನಾನೇನನ್ನು ಆಲಿಸಿದೆನೋ ಅದು ಬಹು ದೂರದಿಂದ, ಆದರೂ ಸಾಕಷ್ಟು ಹತ್ತಿರದಿಂದಲೇ ಬಂದ ವಾಣಿಯಂತಿತ್ತು. ಅದು ಖಚಿತವಾಗಿಯೂ ನನ್ನನ್ನು ಮಾತನಾಡಿಸುತ್ತಲಿದ್ದ ಮತ್ತು ಸಮ್ಮೋಹಕವಾದ ಯಾವುದೋ ಮಾನವ ವಾಣಿಯಂತೆ ಸುಸ್ಪಷ್ಟವಾಗಿತ್ತು. ನಾನು ವಾಣಿಯನ್ನು ಆಲಿಸಿದ ಸಮಯದಲ್ಲಿ ನಾನು ಕನಸು ಕಾಣುತ್ತಿರಲಿಲ್ಲ. ವಾಣಿಯ ಆಲಿಸುವಿಕೆ ನನ್ನೊಳಗೆ ಭೀಕರವಾದೊಂದು ಸಂಘರ್ಷದಿಂದ ಹಿಂಬಾಲಿಸಲ್ಪಟ್ಟಿತ್ತು. ಹಠಾತ್ತನೆ ವಾಣಿ ನನ್ನ ಮೇಲೆ ಎರಗಿತು. ನಾನು ಆಲಿಸಿದೆ. ಅದು ವಾಣಿಯಾಗಿತ್ತೆಂದು ಖಚಿತಪಡಿಸಿಕೊಂಡೆ. ಸಂಘರ್ಷ ಕೊನೆಗೊಂಡಿತು. ನಾನು ಶಾಂತನಾಗಿದ್ದೆ. ಅದಕ್ಕನುಗುಣವಾಗಿಯೇ ನಿರ್ಧಾರವನ್ನು ಮಾಡಲಾಯಿತು, ಉಪವಾಸದ ದಿನಾಂಕ ಮತ್ತು ಸಮಯಗಳನ್ನು ನಿಗದಿಪಡಿಸಲಾಯಿತು. ಆನಂದ ನನ್ನನ್ನಾವರಿಸಿಕೊಂಡಿತು. ಇದು ಮಧ್ಯರಾತ್ರಿ ಹನ್ನೊಂದು ಮತ್ತು ಹನ್ನೆರಡರ ನಡುವೆ ಜರುಗಿತು. ಮತ್ತು ಹೊಸ ಚೈತನ್ಯವನ್ನು ಪಡೆದಂತೆ ಭಾವಿಸಿದೆ. ಮತ್ತು ನನ್ನ ಓದುಗ ಕಂಡಿರಲೇಬಹುದಾದ ಅದನ್ನು ಕುರಿತಾದ ಟಿಪ್ಪಣಿಯನ್ನು ಬರೆಯಲಾರಂಭಿಸಿದೆ.

ನಾನು ಆಲಿಸಿದುದು ನಿಜವಾಗಿಯೂ ದೇವವಾಣಿಯೆಂಬುದಕ್ಕೆ ಮತ್ತು ಅದು ನನ್ನದೇ ಆದ ಉದ್ವೇಗಗೊಂಡ ಕಲ್ಪನೆಯ ಒಂದು ಪ್ರತಿಧ್ವನಿಯಾಗಿರಲಿಲ್ಲ ವೆಂಬುದಕ್ಕೆ ಮತ್ತು ಹೆಚ್ಚಿನ ಸಾಕ್ಷಿಯನ್ನು ನಾನು ಕೊಡಬಲ್ಲೆನೆ? ಸಂದೇಹವಾದಿಯನ್ನು ವಿಶ್ವಾಸಗೊಳಿಸಲು ಹೆಚ್ಚಿನದಾವುದೇ ಸಾಕ್ಷಿಯನ್ನು ನಾನು ಹೊಂದಿಲ್ಲ. ಅದೆಲ್ಲವೂ ಆತ್ಮಭ್ರಮೆ ಅಥವಾ ಭ್ರಾಂತಿಯೆಂದು ನುಡಿಯಲು ಆತ ಸ್ವತಂತ್ರನಾಗಿದ್ದಾನೆ. ನಿಜವಾಗಿಯೂ ಅದು ಹಾಗಿದ್ದಿರಲೂಬಹುದು. ಅದಕ್ಕೆ ವಿರುದ್ಧವಾಗಿ ನಾನು ಯಾವುದೇ ಸಾಕ್ಷಿಯನ್ನು ಒದಗಿಸಲಾರೆ. ಆದರೆ, ನಾನು ಹೇಳಬಹುದಾದುದಿಷ್ಟೆ – ಏನೆಂದರೆ, ನನ್ನ ವಿರುದ್ಧವಾಗಿ ಇಡೀ ಪ್ರಪಂಚದ ಸರ್ವಾನುಮತದ ತೀರ್ಮಾನವೂ ಸಹ ನಾನು ಆಲಿಸಿದುದು ದೇವರ ನಿಜವಾದ ವಾಣಿಯೆಂಬ ನಂಬಿಕೆಯಿಂದ ನನ್ನನ್ನು ಅಲುಗಾಡಿಸಲಾರದು.

ಆದರೆ, ಕೆಲವರು ಸ್ವಯಂ ದೇವರು ನಮ್ಮದೇ ಆದ ಕಲ್ಪನೆಯ ಸೃಷ್ಟಿಯೆಂದು ಭಾವಿಸುತ್ತಾರೆ. ಆ ಅಭಿಪ್ರಾಯ ಸಿಂಧುವಾಗುವುದಾದರೆ ಆಗ ಯಾವುದೊಂದೂ ವಾಸ್ತವವಲ್ಲ, ಪ್ರತಿಯೊಂದೂ ಸಹ ನಮ್ಮದೇ ಆದ ಕಲ್ಪನೆಯಾಗಿರುತ್ತದೆ. ಹಾಗಿದ್ದರೂ ಸಹ, ನನ್ನ ಕಲ್ಪನೆ ನನ್ನ ಮೇಲೆ ಪ್ರಭಾವ ಬೀರುತ್ತಿರುವಾಗ ನಾನು ಅದರ



ಮೋಹಕಶಕ್ತಿಯಲ್ಲಿ ಮಾತ್ರವೇ ಕಾರ್ಯವೆಸಗಬಲ್ಲೆ. ಅತ್ಯಂತ ನೈಜವಾದ ವಸ್ತುಗಳು ಕೇವಲ ತುಲನಾತ್ಮಕವಾಗಿ ಹಾಗಿರುತ್ತವೆ. ನನ್ನ ಮಟ್ಟಿಗೆ ದೇವವಾಣಿ ನನ್ನ ಸ್ವಂತ ಅಸ್ತಿತ್ವಕ್ಕಿಂತಲೂ ಹೆಚ್ಚು ವಾಸ್ತವವಾದುದು. ಅದು ಎಂದಿಗೂ ನನ್ನನ್ನು ವಿಫಲಗೊಳಿಸಿಲ್ಲ ಮತ್ತು ನಿಜವಾಗಿಯೂ ಬೇರಾರನ್ನೂ ವಿಫಲಗೊಳಿಸಿಲ್ಲ.

ಮತ್ತು ಸಂಕಲ್ಪಿಸಬಲ್ಲ ಪ್ರತಿಯೊಬ್ಬನೂ ದೇವವಾಣಿಯನ್ನು ಆಲಿಸಬಲ್ಲ. ಅದು ಪ್ರತಿಯೊಬ್ಬನೊಳಗೂ ಇದೆ. ಆದರೆ, ಮತ್ತೆಲ್ಲದರಂತೆ ಅದು ಪೂರ್ವಭಾವಿಯಾದ ಮತ್ತು ಖಚಿತವಾದ ಸಿದ್ಧತೆಯನ್ನು ಅಪೇಕ್ಷಿಸುತ್ತದೆ.

* * * *

# ೭. ಶ್ರೀ ಅರವಿಂದೂ
## (ಕ್ರಿ.ಶ. ೧೮೭೨–೧೯೫೦)

[ರಾಜಕೀಯದಿಂದ ಪ್ರಾಯಶ್ಚಿತ್ತಕ್ಕೆ, ಉಗ್ರವಾದದಿಂದ ತಪಸ್ಸಿಗೆ ಅದು ಬಹುದೂರವಾಗಿರಬಹುದು. ಆದರೆ, ಆತ ಭಾರತದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ರಾಜದ್ರೋಹಕ್ಕಾಗಿ ವಿಚಾರಣೆಯನ್ನೆದುರಿಸಿದಾಗ ಮತ್ತು ಪಾಂಡಿಚೆರಿಯಲ್ಲಿ ಈಗ ಪ್ರಸಿದ್ಧವಾಗಿರುವ ತಮ್ಮ ಆಶ್ರಮವನ್ನು ಸ್ಥಾಪಿಸಿದಾಗ ಅರಬಿಂದೊ ಘೋಷ್ ಹಠಾತ್ತನೆ ಈ ಪರಿವರ್ತನೆಗೊಳಗಾದರು. ಆ ಆಶ್ರಮದಲ್ಲಿ ತಮ್ಮ ಆಳವಾದ ಅಧ್ಯಯನ ಮತ್ತು ಉತ್ಕಟವಾದ ಧ್ಯಾನದ ಮೂಲಕ ವೇದದ ಸ್ತುತಿಗಳಲ್ಲಿ ಆತ ಹೊಸ ಅರ್ಥವೊಂದನ್ನು ಕಂಡುಹಿಡಿದರು. ಅವರ ಜೀವನವೇ 'ದಿವ್ಯ ಜೀವನ' (*The Life Divine*)ದ ಮೇಲೆ ಒಂದು ದೀರ್ಘ ವ್ಯಾಖ್ಯಾನವಾಗಿತ್ತು ಮತ್ತು ಅವರ 'ಗೀತೆಯನ್ನು ಕುರಿತ ಪ್ರಬಂಧಗಳು' (*Essays on the Gita*) ಹಿಮಾಲಯಗಳಿಗೆ ಆತ್ಮದ ಆರೋಹಣವನ್ನು ನಿರ್ದೇಶಿಸಿತು. ಆತ ಪ್ರತಿಪಾದಿಸಿದ 'ಸಮನ್ವಯ ಯೋಗ' (*Synthetic Yoga*) ಭೌತದ್ರವ್ಯವನ್ನು ಆದರ್ಶೀಕರಿಸುತ್ತ ಮತ್ತು ಚೈತನ್ಯವನ್ನು ಮೂರ್ತೀಕರಿಸುತ್ತ, ಭೌತದ್ರವ್ಯ ಮತ್ತು ಚೈತನ್ಯದ ನಡುವೆ ದ್ವಿಮಾರ್ಗೀಯ ವ್ಯವಹಾರವನ್ನು ಸ್ಥಾಪಿಸಿತು. ತಮ್ಮ ಹೆಚ್ಚಿನ ಸಮಯದಲ್ಲಿ ಅವರು ಮಾಡಿದಂತೆ ಮಾನವಾತೀತ ಪ್ರಜ್ಞೆಯಲ್ಲಿ ಜೀವಿಸುತ್ತ, ವಸ್ತುಗಳು ಮತ್ತು ಮನುಷ್ಯರ ವೈಲಕ್ಷಣ್ಯಗಳು ಮತ್ತು ಭಿನ್ನತೆಗಳು ಅವರ ದೃಷ್ಟಿಯಿಮದ ಕಣ್ಮರೆಯಾದುವು ಮತ್ತು ಅವರು 'ಮಾನವ ಐಕ್ಯದ ಆದರ್ಶ'(*Ideal of Human Unity*)ದ ಧ್ಯಾನದಲ್ಲಿ ಸಂಭ್ರಮಿಸಿದರು. ಶ್ರೀ ಅರಬಿಂದೊ ಓರ್ವ ದೇಶಭಕ್ತರಾಗಿ ಆರಂಭಿಸಿದರು ಮತ್ತು ಓರ್ವ ಸಂತನಾಗಿ ಕೊನೆಮುಟ್ಟಿದರು.]

### ಧರ್ಮದಿಂದ ಮತ್ತು ಧರ್ಮಕ್ಕಾಗಿ ಭಾರತ ತಲೆಯೆತ್ತಿ ನಿಲ್ಲುತ್ತದೆ

ನನ್ನನ್ನು ದಸ್ತಗಿರಿ ಮಾಡಿ ಲಾಲ್ ಬಝಾರ್‌ನ 'ಕಾರಾಗೃಹ'(ಹಜಾತ್)ಕ್ಕೆ ತ್ವರೆಯಿಂದ ಕೊಂಡೊಯ್ದಾಗ ನಾನು ಸ್ವಲ್ಪ ಸಮಯದವರೆಗೆ ನನ್ನ ನಂಬಿಕೆಯಲ್ಲಿ ವಿಚಲಿತಗೊಂಡೆ, ಏಕೆಂದರೆ, ನಾನು ಆತನ ಉದ್ದೇಶದ ಅಂತರಂಗದೊಳಗೆ ಕಾರಣಲಾರದವನಾಗಿದ್ದೆ. ಆದ್ದರಿಂದ ಕ್ಷಣಕಾಲದವರೆಗೆ ನಾನು ಧೈರ್ಯಗುಂದಿದೆ



ಮತ್ತು ನನ್ನ ಹೃದಯದಲ್ಲಿ ಆತನಿಗೆ ಗಟ್ಟಿಯಾಗಿ ಕೂಗಿ ಹೇಳಿದೆ, 'ಇದೇನು ನನಗುಂಟಾಗಿರುವುದು? ನನ್ನ ದೇಶದ ಜನರಿಗಾಗಿ ಕಾರ್ಯವೆಸಗುವ ಉದ್ದೇಶವನ್ನು ನಾನು ಹೊಂದಿದ್ದೆ ಮತ್ತು ಆ ಕೆಲಸವು ಕೈಗೂಡುವವರೆಗೆ ನಾನು ನಿನ್ನ ರಕ್ಷಣೆಯನ್ನು ಹೊಂದಿರಬೇಕೆಂದು ನಾನು ನಂಬಿಕೆ ಹೊಂದಿದ್ದೆ. ಹಾಗಿದ್ದಲ್ಲಿ ನಾನೇಕೆ ಇಲ್ಲಿದ್ದೇನೆ, ಅದೂ ಇಂತಹ ಒಂದು ಆಪಾದನೆಯ ಮೇಲೆ?'

ಒಂದು ದಿನ, ಎರಡು ದಿನ ಮತ್ತು ಮೂರು ದಿನ ಕಳೆದುವು. ಆಗ, ಒಳಗಿನಿಂದ ಧ್ವನಿಯೊಂದು ನನ್ನಲ್ಲಿಗೆ ಬಂದಿತು. 'ಕಾದು ನೋಡು'. ಬಳಿಕ ನಾನು ಶಾಂತನಾದೆ ಮತ್ತು ಕಾಯತೊಡಗಿದೆ.

ನನ್ನನ್ನು ಲಾಲ್‌ಬಝಾರ್‌ನಿಂದ ಆಲಿಪುರಕ್ಕೆ ಕರೆದೊಯ್ಯಲಾಯಿತು ಮತ್ತು ಜನರಿಂದ ಪ್ರತ್ಯೇಕವಾಗಿ ಒಬ್ಬಂಟಿಗನಾಗಿ ಮಾತ್ರ ಅವಕಾಶವಿರುವ ಕಿರುಕೋಣೆಯಲ್ಲಿ ಒಂದು ತಿಂಗಳವರೆಗೆ ಇರಿಸಲಾಯಿತು. ಅಲ್ಲಿ ನಾನು ಹಗಲು–ರಾತ್ರಿ ನನ್ನಲ್ಲಿನ ಅಂತರ್ವಾಣಿಗಾಗಿ, ನನಗೆ ಆತ ಏನನ್ನು ಹೇಳಲಿರುವನೋ ಎಂಬುದನ್ನು ತಿಳಿಯಲು, ನಾನು ಏನು ಮಾಡಬೇಕಾಗಿದೆಯೆಂಬುದನ್ನು ಅರಿಯಲು ಕಾಯತೊಡಗಿದೆ. ಈ ಏಕಾಂತ ಸ್ಥಿತಿಯಲ್ಲಿ ಮೊಟ್ಟಮೊದಲನೆಯ ಸಾಕ್ಷಾತ್ಕಾರ, ಮೊದಲನೆಯ ಪಾಠ ನನಗೊದಗಿತು.

ನನ್ನ ದಸ್ತಗಿರಿಯ ಒಂದು ತಿಂಗಳು ಅಥವಾ ಹೆಚ್ಚಿನ ಸಮಯ ಮುಂಚಿತವಾಗಿ ಎಲ್ಲ ಚಟುವಟಿಕೆಗಳನ್ನು ಬದಿಗಿರಿಸುವಂತೆ, ಏಕಾಂತ ಸ್ಥಳದೊಳಗೆ ತೆರಳುವಂತೆ, ಆತನೊಂದಿಗೆ ಹೆಚ್ಚು ನಿಕಟವಾದ ಸಹಭಾಗಿತ್ವವನ್ನು ನಾನು ಪ್ರವೇಶಿಸುವಂತಾಗಲು ನನ್ನೊಳಗೆ ನಾನು ವೀಕ್ಷಿಸಲು ಕರೆಯೊಂದು ನನಗೆ ಬಂದಿತ್ತೆಂಬುದನ್ನು ನಾನು ನೆನಪಿಸಿಕೊಂಡೆ. ನಾನು ದುರ್ಬಲನಾಗಿದ್ದೆ ಮತ್ತು ಕರೆಯನ್ನು ಒಪ್ಪಿಕೊಳ್ಳಲಾರದವನಾಗಿದ್ದೆ. ನನ್ನ ಕೆಲಸ ನನಗೆ ಅತ್ಯಂತ ಪ್ರಿಯವಾಗಿತ್ತು ಮತ್ತು ನನ್ನ ಹೃದಯದ ಪ್ರತಿಷ್ಠೆಯಲ್ಲಿ ನಾನಲ್ಲಿ ಇರದಿರುವವರೆಗೆ ಅದು ನಷ್ಟವನ್ನನುಭವಿಸುತ್ತದೆ ಅಥವಾ ವಿಫಲವಾಗಬಹುದು ಅಥವಾ ಕೊನೆಗೊಳ್ಳಬಹುದು. ಆದ್ದರಿಂದ ನಾನದನ್ನು ಬಿಡುವುದಿಲ್ಲವೆಂದು ನಾನು ಭಾವಿಸಿದೆ. ಆತ ಮತ್ತೊಮ್ಮೆ ನನ್ನೊಂದಿಗೆ ಮಾತನಾಡಿದನೆಂದು ಮತ್ತು ಹೇಳಿದನೆಂದು ನನಗೆ ತೋರಿತು. 'ನೀನು ಮುರಿಯಲು ಶಕ್ತಿಯನ್ನು ಹೊಂದಿಲ್ಲದಿದ್ದ ಬಂಧನಗಳನ್ನು ನಿನಗಾಗಿ ನಾನು ಮುರಿದಿದ್ದೇನೆ. ಏಕೆಂದರೆ ಅದು ಮುಂದುವರಿಯಬೇಕೆಂಬುದು ನನ್ನ ಸಂಕಲ್ಪವಾಗಿರಲಿಲ್ಲ ಮತ್ತು ಎಂದಿಗೂ ನನ್ನ ಉದ್ದೇಶವಾಗಿರಲಿಲ್ಲ. ನೀನು ಮಾಡುವುದಕ್ಕಾಗಿ ನಾನು ಮತ್ತೊಂದು ಕಾರ್ಯವನ್ನು ಹೊಂದಿದ್ದೆ ಮತ್ತು ಅದಕ್ಕಾಗಿ ನಿನ್ನಷ್ಟಕ್ಕೆ ನೀನು ಯಾವುದನ್ನು ಕಲಿಯಲಾರದೆ ಹೋದೆಯೋ ಅದನ್ನು ಬೋಧಿಸುವುದಕ್ಕಾಗಿ ಮತ್ತು ನನ್ನ ಕಾರ್ಯಕ್ಕಾಗಿ ನಿನ್ನನ್ನು ತರಬೇತು ಮಾಡಲು ನಾನು ನಿನ್ನನ್ನಿಲಿಗೆ ಕರೆತಂದಿದೇನೆ.'

ಬಳಿಕ ಆತ ನನ್ನ ಕೈಗಳಲ್ಲಿ 'ಗೀತೆ'ಯನ್ನು ಇರಿಸಿದ. ಆತನ ಶಕ್ತಿ ನನ್ನೊಳಗೆ ಪ್ರವೇಶಿಸಿತು ಮತ್ತು ನಾನು 'ಗೀತೆ'ಯ 'ಸಾಧನ'ವನ್ನು ಮಾಡಲು ಸಮರ್ಥನಾದೆ. ನಾನು ಕೇವಲ ಬೌದ್ಧಿಕವಾಗಿ ಅರ್ಥಮಾಡಿಕೊಳ್ಳುವುದಷ್ಟೇ ಅಲ್ಲ, ಆದರೆ, ಶ್ರೀಕೃಷ್ಣ ಅರ್ಜುನನ ವಿಷಯದಲ್ಲಿ ಏನನ್ನು ಒತ್ತಾಯಪಡಿಸಿ ಕೇಳಿದನೋ ಮತ್ತು ಆತನ ಕಾರ್ಯವನ್ನು ಮಾಡಲು ಮಹತ್ವಾಕಾಂಕ್ಷೆಪಡುವವರಿಂದ ಏನನ್ನು ಒತ್ತಾಯಪಡಿಸಿ ಕೇಳುವನೋ ಅದನ್ನು– ಜುಗುಪ್ಸೆ ಮತ್ತು ಬಯಕೆಯಿಂದ ಮುಕ್ತರಾಗಿರುವುದು, ಫಲವನ್ನು ಬಯಸದೆ 'ಆತನಿಗಾಗಿ' ಕೆಲಸ ಮಾಡುವುದು ಮತ್ತು 'ಆತನ' ಕೈಗಳಲ್ಲಿ ಒಂದು ಪ್ರತಿಭಟಿಸದ ಮತ್ತು ನಿಷ್ಠಾವಂತ ಸಾಧನವಾಗಿರುವುದು, ಉಚ್ಚ ಮತ್ತು ನೀಚ ವರ್ಗದವರಿಗೆ, ಸ್ನೇಹಿತ ಮತ್ತು ಶತ್ರುವಿಗೆ, ಯಶಸ್ಸು ಮತ್ತು ವೈಫಲ್ಯಗಳಿಗೆ ಸಮಾನವಾದೊಂದು ಹೃದಯವನ್ನು ಹೊಂದಿರುವುದು, ಆದರೂ, 'ಆತನ' ಕಾರ್ಯವನ್ನು ನಿರ್ಲಕ್ಷ್ಯದಿಂದ ಮಾಡದಿರುವುದು – ಅರಿತುಕೊಂಡೆ.

ಆತ ನನಗೆ ಸೂಚಿಸಿದ ಮುಂದಿನ ವಿಷಯವೆಂದರೆ– 'ಆತ' ನನ್ನನ್ನು ಹಿಂದೂ ಧರ್ಮದ ಕೇಂದ್ರ ಸತ್ಯವನ್ನು ಅರಿತುಕೊಳ್ಳುವಂತೆ ಮಾಡಿದ. 'ಆತ' ನನ್ನ ಸೆರೆಮನೆಯ ಅಧಿಕಾರಿಗಳ ಹೃದಯಗಳನ್ನು ನನ್ನತ್ತ ತಿರುಗಿಸಿದ ಮತ್ತು ಅವರು ಕಾರಾಗೃಹದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದ ಆಂಗ್ಲವ್ಯಕ್ತಿಗೆ, 'ಆತ ತನ್ನ ಬಂಧನದಲ್ಲಿ ಯಾತನೆಪಡುತ್ತಿದ್ದಾನೆ; ಹಗಲಿನಲ್ಲಿ ಮತ್ತು ಸಾಯಂಕಾಲದಲ್ಲಿ ಕನಿಷ್ಠ ಪಕ್ಷ ಅರ್ಧ ಘಂಟೆ ಕಾಲ ತನ್ನ ಕಿರುಕೋಣೆಯ ಹೊರಗೆ ನಡೆದಾಡಲು ಬಿಡಿ' ಎಂದು ತಿಳಿಸಿದರು. ಆ ರೀತಿಯಲ್ಲಿ ಅದನ್ನು ವ್ಯವಸ್ಥೆ ಮಾಡಲಾಯಿತು. ಮತ್ತು ಹಾಗೆ ನಾನು ನಡೆದಾಡುತ್ತಲಿರುವಾಗ 'ಆತನ' ಶಕ್ತಿ ಮತ್ತೊಮ್ಮೆ ನನ್ನೊಳಗೆ ಪ್ರವೇಶ ಮಾಡಿತು.

ಜನರಿಂದ ನನ್ನನ್ನು ಪ್ರತ್ಯೇಕಿಸಿದ್ದ ಕಾರಾಗೃಹದತ್ತ ನಾನು ನೋಡಿದೆ ಮತ್ತು ಮುಂದೆಂದೂ ನಾನು ಅದರ ಎತ್ತರವಾದ ಗೋಡೆಗಳಿಂದ ಬಂಧಿತನಾಗಿರಲಿಲ್ಲ; ಇಲ್ಲ, ನನ್ನನ್ನು ಸುತ್ತುವರಿದಿದ್ದವನು ವಾಸುದೇವನೆ. ನನ್ನ ಕಿರುಕೋಣೆಯ ಮುಂಭಾಗದಲ್ಲಿದ್ದ ಮರದ ನೆರಳುಗಳ ಕೆಳಗೆ ನಾನು ನಡೆದಾಡಿದೆ. ಆದರೆ, ಅದು ಮರವಾಗಿರಲಿಲ್ಲ, ಅದು ಅಲ್ಲಿ ನಿಂತಿದ್ದ ಮತ್ತು ನನ್ನ ಮೇಲೆ ತನ್ನ ನೆರಳನ್ನು ಹಿಡಿದಿರುವ ವಾಸುದೇವನಾಗಿದ್ದನೆಂದು, ಶ್ರೀಕೃಷ್ಣನಾಗಿದ್ದನೆಂದು ನಾನು ತಿಳಿದುಕೊಂಡೆ.

ನಾನು ನನ್ನ ಕಿರುಕೋಣೆಯ ಕಂಬಿಗಳತ್ತ, ಬಾಗಿಲಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ವಾಸ್ತವವಾದ ಜಾಲರಿಯತ್ತ ಗಮನ ಹರಿಸಿದೆ ಮತ್ತು ಮತ್ತೊಮ್ಮೆ ನಾನು ವಾಸುದೇವನನ್ನು ನೋಡಿದೆ. ಅದು ನನ್ನ ಮೇಲೆ ಕಾವಲು ಕಾಯುತ್ತಿದ್ದ ಮತ್ತು ಕಾವಲುಗಾರನಾಗಿ ನಿಂತಿದ್ದ ನಾರಾಯಣನಾಗಿದ್ದ. ಅಥವಾ ಹಾಸಿಗೆಯೆಂದು ನನಗೆ ನೀಡಲಾಗಿದ್ದ ಒರಟಾದ ಹಚ್ಚಡಗಳ ಮೇಲೆ ನಾನು ಮಲಗಿದ್ದೆ ಮತ್ತು ನನ್ನ ಸುತ್ತಲೂ ಶ್ರೀಕೃಷ್ಣನ ತೋಳುಗಳನ್ನು, ನನ್ನ ಸ್ನೇಹಿತ ಮತ್ತು ಪ್ರೇಮಿಯ ತೋಳುಗಳನ್ನು ಅನುಭವಿಸಿದೆ. ಇದು ಆತ ನನಗೆ ನೀಡಿದ ಗಂಭೀರವಾದ ದರ್ಶನದ ಮೊದಲ ಪ್ರಯೋಜನವಾಗಿತ್ತು.



ನಾನು ಕಾರಾಗೃಹದಲ್ಲಿದ್ದ ಸೆರೆಯಾಳುಗಳು, ಕಳ್ಳರು, ಕೊಲೆಗಡುಕರು, ಮೋಸಗಾರರತ್ತ ಗಮನ ಹರಿಸಿದೆ ಮತ್ತು ನಾನು ಅವರತ್ತ ನೋಡುತ್ತಲಿದ್ದಂತೆ ನಾನು ವಾಸುದೇವನನ್ನು ನೋಡಿದೆ, ಈ ಮಂಕಾಗಿದ್ದ ವ್ಯಕ್ತಿಗಳು ಮತ್ತು ತಪ್ಪು ಉದ್ದೇಶಕ್ಕೆ ಬಳಸಲಾಗಿದ್ದ ಶರೀರಗಳಲ್ಲಿ ನಾನು ಕಂಡದ್ದು ನಾರಾಯಣನನ್ನು.

ಈ ಕಳ್ಳರು ಮತ್ತು ಡಕಾಯಿತರ ನಡುವೆ ತಮ್ಮ ಸಹಾನುಭೂತಿ ಮತ್ತು ತಮ್ಮ ದಯೆ, ಅಂತಹ ಪ್ರತಿಕೂಲ ಪರಿಸ್ಥಿತಿಗಳ ಮೇಲೆ ವಿಜಯ ಸಾಧಿಸಿದ ಮಾನವೀಯತೆಯ ಮೂಲಕ ನನ್ನನ್ನು ನಾಚಿಕೆ ಪಡುವಂತೆ ಮಾಡಿದ ಅನೇಕರು ಅಲ್ಲಿದ್ದರು.

ಅವರುಗಳ ನಡುವೆ ನನಗೆ ಓರ್ವ ಸಂತನಂತೆ ತೋರಿದ, ಓದುವುದು ಮತ್ತು ಬರೆಯುವುದು ಹೇಗೆಂದು ತಿಳಿಯದಿದ್ದ ನನ್ನ ರಾಷ್ಟ್ರದ ಓರ್ವ ರೈತನಾಗಿದ್ದ, ಹತ್ತು ವರ್ಷಗಳ ಉಗ್ರ ಸೆರೆವಾಸದ ಶಿಕ್ಷೆಗೆ ಗುರಿಯಾಗಿದ್ದ, ಓರ್ವ ಡಕಾಯಿತನೆಂದು ಆರೋಪಕ್ಕೊಳಗಾಗಿದ್ದ, ನಮ್ಮ ಕಪಟ ಧಾರ್ಮಿಕತೆಯ ವರ್ಗದ ಜಂಬದಲ್ಲಿ 'ಕೀಳುದರ್ಜೆಯವರು' (ಛೋಟಾ ಲೋಕ್) ಎಂದು ತಿರಸ್ಕಾರದಿಂದ ಕಾಣುವವರಲ್ಲಿ ಒಬ್ಬನಾಗಿದ್ದ ವ್ಯಕ್ತಿಯೋರ್ವನನ್ನು ನಾನು ವಿಶೇಷವಾಗಿ ಗಮನಿಸಿದೆ.

ಮತ್ತೊಮ್ಮೆ 'ಆತ' ನನ್ನನ್ನುದ್ದೇಶಿಸಿ ಮಾತನಾಡಿ (ಹೀಗೆ) ನುಡಿದ, 'ನನ್ನ ಸಣ್ಣ ಕಾರ್ಯವೊಂದನ್ನು ಮಾಡುವುದಕ್ಕಾಗಿ ನಾನು ನಿನ್ನನ್ನು ಕಳುಸಿರುವ ವ್ಯಕ್ತಿಗಳ ನಡುವೆ ಅವಲೋಕಿಸು. ಇದು ನಾನು ಉನ್ನತಗೊಳಿಸುತ್ತಿರುವ ರಾಷ್ಟ್ರದ ಸ್ವರೂಪ ಮತ್ತು ಏತಕ್ಕಾಗಿ ಅವರನ್ನು ಉನ್ನತಗೊಳಿಸುತ್ತಿರುವೆನೆಂಬುದರ ಕಾರಣ.'

ಕೆಳನ್ಯಾಯಾಲಯದಲ್ಲಿ ಮೊಕದ್ದಮೆ ಪ್ರಾರಂಭವಾದಾಗ ಮತ್ತು ನಮ್ಮನ್ನು ನ್ಯಾಯಾಧೀಶರ ಮುಂದೆ ಕರೆತಂದಾಗ ನನ್ನನ್ನು ಅದೇ ಒಳನೋಟ ಹಿಂಬಾಲಿಸಿತು. 'ಆತ' ನನಗೆ ಹೇಳಿದ. 'ನಿನ್ನನ್ನು ಕಾರಾಗೃಹದೊಳಗೆ ತಳ್ಳಿದಾಗ ನಿನ್ನ ಹೃದಯ ಭಗ್ನಗೊಳ್ಳಲಿಲ್ಲವೆ ಮತ್ತು ನಿನ್ನ ರಕ್ಷಣೆಯೆಲ್ಲಿದೆ ಎಂದು ನೀನು ನನಗೆ ಕೂಗಿ ಹೇಳಲಿಲ್ಲವೆ? ಈಗ ನ್ಯಾಯಾಧೀಶನತ್ತ ನೋಡು, ಈಗ ಕಾನೂನುಕ್ರಮ ಜರುಗಿಸುತ್ತಲಿರುವ ನ್ಯಾಯವಾದಿಗಳ ಮಂಡಳಿಯತ್ತ ನೋಡು.'

ನಾನು ನೋಡಿದೆ ಮತ್ತು ನಾನು ಕಂಡದ್ದು ನ್ಯಾಯಧೀಶನನ್ನಲ್ಲ, ಅದು ವಾಸುದೇವನಾಗಿದ್ದ. ಅಲ್ಲಿ ನ್ಯಾಯಪೀಠದ ಮೇಲೆ ಕುಳಿತಿದ್ದವನು ನಾರಾಯಣನಾಗಿದ್ದ.

ನಾನು ಕಾನೂನು ಕ್ರಮ ಜರುಗಿಸುತ್ತಲಿರುವ ನ್ಯಾಯವಾದಿಗಳ ಮಂಡಳಿಯತ್ತ ನೋಡಿದೆ ಮತ್ತು ನಾನು ಕಂಡದ್ದು ಕಾನೂನು ಕ್ರಮ ಜರುಗಿಸುವುದಕ್ಕಾಗಿರುವ ನ್ಯಾಯವಾದಿ ಮಂಡಳಿಯನ್ನಲ್ಲ. ಅಲ್ಲಿ ಕುಳಿತಿದ್ದವನು ಶ್ರೀಕೃಷ್ಣನಾಗಿದ್ದ, ಅಲ್ಲಿ ಕುಳಿತಿದ್ದು ನಗುತ್ತಿದ್ದವನು ನನ್ನ ಪ್ರೇಮಿ ಮತ್ತು ಸ್ನೇಹಿತನಾಗಿದ್ದ.

'ಈಗ ನೀನು ಹೆದರುವಿಯೇನು?' ಆತ ನುಡಿದ, 'ನಾನು ಎಲ್ಲ ಮನುಷ್ಯರಲ್ಲಿಯೂ ಇದ್ದೇನೆ ಮತ್ತು ನಾನು ಅವರ ಕಾರ್ಯಗಳ ಮತ್ತು ಅವರ ಮಾತುಗಳ ಮೇಲೆ ಪ್ರಭಾವ ಬೀರುತ್ತೇನೆ. ನನ್ನ ರಕ್ಷಣೆ ಈಗಲೂ ನಿನ್ನ ಮೇಲಿದೆ ಮತ್ತು ನೀನು ಹೆದರುವುದಿಲ್ಲ. ನಿನ್ನ ವಿರುದ್ಧವಾಗಿ ತರಲಾಗಿರುವ ಈ ಮೊಕದ್ದಮೆಯನ್ನು ನನ್ನ ಕೈಯ್ಯಲ್ಲಿ ಬಿಡು. ಅದು ನಿನಗಾಗಿರುವುದಲ್ಲ. ನಿನ್ನನ್ನು ನಾನು ಇಲ್ಲಿಗೆ ಕರೆತಂದಿರುವುದು ನ್ಯಾಯಾಂಗ ವಿಚಾರಣೆಗಾಗಿಯಲ್ಲ. ಅದರೆ, ಬೇರಾವುದೋ ಒಂದು ವಿಷಯಕ್ಕಾಗಿ. ಸ್ವಯಂ ಈ ಮೊಕದ್ದಮೆ ನನ್ನ ಕೆಲಸಕ್ಕಾಗಿ ಒಂದು ಸಾಧನ ಮಾತ್ರ ಮತ್ತು ಅದಕ್ಕಿಂತ ಹೆಚ್ಚಿನದೇನಲ್ಲ.'

ಆನಂತರ ಸೆಶನ್ಸ್ ನ್ಯಾಯಾಲಯದಲ್ಲಿ ನ್ಯಾಯಾಂಗ ವಿಚಾರಣೆ ಆರಂಭವಾದಾಗ ನನ್ನ ನ್ಯಾಯವಾದಿ ಮಂಡಳಿಗಾಗಿ, ನನ್ನ ವಿರುದ್ಧದ ಸಾಕ್ಷಿಯಲ್ಲಿ ತಪ್ಪಾಗಿರುವುದೇನು ಮತ್ತು ಯಾವ ಅಂಶಗಳನ್ನು ಕುರಿತಂತೆ ಸಾಕ್ಷಿಗಳನ್ನು ಪಾಟಿಸವಾಲು ಮಾಡ ಬಹುದೆಂಬುದರ ಬಗ್ಗೆ ಹಲವಾರು ಸೂಚನೆಗಳನ್ನು ನಾನು ಬರೆಯಲಾರಂಭಿಸಿದೆ. ಆಗ ನಾನು ನಿರೀಕ್ಷಿಸದೇ ಇದ್ದ ಏನೋ ಒಂದು ಸಂಗತಿ ಜರುಗಿತು. ನನ್ನ ಪ್ರತಿವಾದಕ್ಕಾಗಿ ಮಾಡಲಾಗಿದ್ದ ಎಲ್ಲ ವ್ಯವಸ್ಥೆಗಳನ್ನೂ ಹಠಾತ್ತಾಗಿ ಬದಲಿಸಲಾಯಿತು. ಮತ್ತು ನನ್ನನ್ನು ಸಮರ್ಥಿಸಲು ಮತ್ತೊಬ್ಬ ನ್ಯಾಯವಾದಿ ಅಲ್ಲಿ ಸ್ಥಾನ ಪಡೆದ. ಆತ – ನನ್ನ ಓರ್ವ ಸ್ನೇಹಿತ, ಆದರೆ ಆತ ಬರುತ್ತಲಿರುವನೆಂದು ನನಗೆ ಗೊತ್ತಿರಲಿಲ್ಲ– ಅನಿರೀಕ್ಷಿತವಾಗಿ ಆಗಮಿಸಿದ. ತನ್ನಿಂದ ಇತರ ಎಲ್ಲ ಆಲೋಚನೆಗಳನ್ನೂ ದೂರವಿರಿಸಿದ, ಮತ್ತು ತನ್ನೆಲ್ಲ ವಕೀಲಿ ವೃತ್ತಿಯನ್ನು ತೊರೆದ, ತಿಂಗಳುಗಳವರೆಗೆ ಪ್ರತಿದಿನವೂ ಅರ್ಧರಾತ್ರಿ ಎಚ್ಚರಗೊಂಡಿರುತ್ತ ನನ್ನನ್ನು ರಕ್ಷಿಸುವುದಕ್ಕಾಗಿ ತನ್ನ ಆರೋಗ್ಯವನ್ನು ಹಾಳುಮಾಡಿಕೊಂಡ. ಆ ವ್ಯಕ್ತಿಯ ಹೆಸರನ್ನು ನೀವೆಲ್ಲರೂ ಕೇಳಿದ್ದೀರಿ– ಶ್ರೀಯುತ ಚಿತ್ತರಂಜನದಾಸ್.

ನಾನಾತನನ್ನು ಕಂಡಾಗ ನಾನು ತೃಪ್ತಿಗೊಂಡವನಾದೆ. ಆದರೆ, ಸೂಚನೆಗಳನ್ನು ಬರೆಯುವುದನ್ನು ಆಗಲೂ ಅಗತ್ಯವಾದುದೆಂದು ನಾನು ಭಾವಿಸಿದೆ. ಬಳಿಕ ಅದೆಲ್ಲವನ್ನೂ ಸಹ ನನ್ನಿಂದ ದೂರಗೊಳಿಸಲಾಯಿತು ಮತ್ತು ನನ್ನೊಳಗಿನಿಂದ ನಾನು ಸಂದೇಶವನ್ನು ಪಡೆದೆ, 'ನಿನ್ನ ಕಾಲುಗಳ ಸುತ್ತಲೂ ಇರಿಸಲಾಗಿರುವ ಸರಪಳಿಗಳಿಂದ ನಿನ್ನನ್ನು ಕಾಪಾಡಲಿರುವವನು ಇದೇ ವ್ಯಕ್ತಿ. ಆ ಕಾಗದಪತ್ರಗಳೆಲ್ಲವನ್ನೂ ಬದಿಗಿರಿಸು. ಆತನಿಗೆ ಸೂಚನೆ ನೀಡುವವನು ನೀನಲ್ಲ, ನಾನಾತನಿಗೆ ಸೂಚನೆ ನೀಡುತ್ತೇನೆ.'



ಆ ಸಮಯದಿಂದ ನಾನು ಸ್ವಯಂ ನನ್ನನ್ನು ಕುರಿತಂತೆ ಒಂದೇ ಒಂದು ಮಾತನ್ನು ನನ್ನ ನ್ಯಾಯವಾದಿಗೆ ನುಡಿಯಲಿಲ್ಲ ಅಥವಾ ಒಂದೇ ಒಂದು ಸೂಚನೆಯನ್ನು ನಿಡಲಿಲ್ಲ ಮತ್ತು ಎಂದೇ ಆಗಲಿ ಪ್ರಶ್ನೆಯೊಂದನ್ನು ಕೇಳಿದಾಗ ಯಾವಾಗಲೂ ನನ್ನ ಉತ್ತರ ಮೊಕದ್ದಮೆಗೆ ಯಾವುದೇ ಸಹಾಯ ಮಾಡಲಿಲ್ಲ ಎಂಬುದನ್ನು ನಾನು ಕಂಡುಕೊಂಡೆ. ನಾನು ಅದನ್ನು ಆತನಿಗೆ ಬಿಟ್ಟುಬಿಟ್ಟಿದ್ದೆ. ಮತ್ತು ಆತ ಅದನ್ನು ಸಂಪೂರ್ಣವಾಗಿ ತನ್ನ ಕೈಗಳಿಗೆ ತೆಗೆದುಕೊಂಡ, ಯಾವ ಫಲಿತಾಂಶದೊಂದಿಗೆಂಬುದನ್ನು ನೀವು ಬಲ್ಲಿರಿ.

ಅನುಗಾಲವೂ 'ಆತ' ನನ್ನ ಬಗ್ಗೆ ಯಾವ ಉದ್ದೇಶ ಹೊಂದಿದ್ದನೆಂದು ನಾನು ತಿಳಿದಿದ್ದೆ. ಏಕೆಂದರೆ, ನಾನು ಮತ್ತೆ ಮತ್ತೆ ಅದನ್ನು ಕೇಳಿದೆ. ಯಾವಾಗಲೂ ನಾನು ನನ್ನೊಳಗಿನ ಧ್ವನಿಗೆ ಕಿವಿಗೊಟ್ಟೆ: 'ನಾನು ಮಾರ್ಗದರ್ಶನ ಮಾಡುತ್ತಲಿದ್ದೇನೆ, ಆದ್ದರಿಂದ ಭಯಪಡದಿರು. ನಿನ್ನನ್ನು ನಾನು ಕಾರಾಗೃಹಕ್ಕೆ ಕರೆತಂದಿರುವ ನಿನ್ನದೇ ಕರ್ತವ್ಯದತ್ತ ಗಮನಹರಿಸು ಮತ್ತು ನೀನು ಹೊರಗೆ ಬಂದಾಗ ಎಂದಿಗೂ ಹೆದರಬಾರದೆಂಬುದನ್ನು, ಎಂದಿಗೂ ಹಿಂದೆಮುಂದೆ ನೋಡಬಾರದೆಂಬುದನ್ನು ನೆನಪಿನಲ್ಲಿಟ್ಟುಕೊ. ಇದನ್ನು ಮಾಡುತ್ತಿರುವವನು ನಾನು, ನೀನಲ್ಲ. ಮತ್ತಾವನೂ ಅಲ್ಲವೆಂಬುದನ್ನು ನೆನಪಿನಲ್ಲಿಟ್ಟುಕೊ. ಆದ್ದರಿಂದ, ಯಾವುದೇ ವಿಷಣ್ಣತೆಗಳು, ಯಾವುದೇ ಅಪಾಯಗಳು ಮತ್ತು ಯಾತನೆಗಳು, ಯಾವುದೇ ಕಷ್ಟಗಳು, ಯಾವುದೇ ಅಸಾಧ್ಯತೆಗಳು ಬರಬಹುದು– ಅಸಾಧ್ಯವೆಂಬುದು ಯಾವುದೂ ಇಲ್ಲ, ಕಷ್ಟವೆಂಬುದು ಯಾವುದೂ ಇಲ್ಲ. ನಾನು ರಾಷ್ಟ್ರದಲ್ಲಿ ಮತ್ತು ಅದರ ಉನ್ನತೀಕರಣದಲ್ಲಿದ್ದೇನೆ ಮತ್ತು ನಾನೇ ವಾಸುದೇವ, ನಾನೇ ನಾರಾಯಣ ಮತ್ತು ನಾನೇನನ್ನು ಸಂಕಲ್ಪಿಸುವೆನೋ ಅದು ಜರುಗುತ್ತದೆ, ಇತರರೇನನ್ನು ಸಂಕಲ್ಪಿಸುವರೋ ಅದಲ್ಲ. ನಾನೇನನ್ನು ಆಗುವಂತೆ ಮಾಡಲು ಆಯ್ಕೆ ಮಾಡುವೆನೋ ಅದನ್ನು ಯಾವುದೇ ಮಾನವಶಕ್ತಿ ತಡೆಯಲಾರದು.

ಏತನ್ಮಧ್ಯೆ 'ಆತ' ನನ್ನನ್ನು ಏಕಾಂತಸ್ಥಳದಿಂದ ಹೊರಗೆ ತಂದಿದ್ದ ಮತ್ತು ನನ್ನೊಂದಿಗೆ ಆಪಾದಿತರಾಗಿದ್ದವರ ನಡುವೆ ನನ್ನನ್ನಿರಿಸಿದ. ಸಾಮರ್ಥ್ಯ ಮತ್ತು ವ್ಯಕ್ತಿತ್ವದಲ್ಲಿ ನನಗಿಂತಲೂ ಶ್ರೇಷ್ಠರಾಗಿದ್ದುದು ಮಾತ್ರವೇ ಅಲ್ಲ– ವಾಸ್ತವವಾಗಿ ಅಂತಹವರು ಅನೇಕರಿದ್ದರು– ಆದರೆ, ನಾನೇ ಯಾವುದರ ಬಗ್ಗೆ ಹೆಮ್ಮೆಪಡುತ್ತಿದ್ದೆನೋ ಅಂತಹ ಬೌದ್ಧಿಕ ಸಾಮರ್ಥ್ಯದ ಭರವಸೆಯಲ್ಲಿಯೂ ಶ್ರೇಷ್ಠರಾಗಿದ್ದ ಒಬ್ಬರಿಬ್ಬರನ್ನು ಕಂಡೆ.

'ಆತ' ನನಗೆ ನುಡಿದ, 'ಇದೇ ತರುಣ ತಲೆಮಾರು, ನನ್ನ ಆದೇಶದ ಮೇರೆಗೆ ಮೇಲೇಳುತ್ತಿರುವ ಹೊಸ ಮತ್ತು ಪ್ರಬಲವಾದ ರಾಷ್ಟ್ರ. ಅವರು ನಿನಗಿಂತಲೂ ಶ್ರೇಷ್ಠರಾದವರು. ನೀನು ಭಯಪಡಬೇಕಾದುದೇನಿದೆ? ನೀನು ಪ್ರತ್ಯೇಕವಾಗಿ ನಿಂತರೂ

ಅಥವಾ ನಿಷ್ಕ್ರಿಯನಾಗಿದ್ದರೂ ಕಾರ್ಯ ಆಗಲೂ ಜರುಗುತ್ತದೆ. ನಾಳೆ ಒಂದು ವೇಳೆ ನೀನು ತ್ಯಜಿಸಲ್ಪಟ್ಟರೂ ಸಹ ನಿನ್ನ ಕಾರ್ಯವನ್ನು ಕೈಗೆತ್ತಿಕೊಳ್ಳುವ ಮತ್ತು ನೀನು ಎಂದಿಗೂ ಮಾಡಿರುವುದಕ್ಕಿಂತಲೂ ಹೆಚ್ಚು ಸಮರ್ಥವಾಗಿ ಮಾಡಬಲ್ಲ ತರುಣರಿಲ್ಲಿದ್ದಾರೆ. ನೀನು ಈ ರಾಷ್ಟ್ರವನ್ನು ಉನ್ನತಿಗೊಳಿಸಲು ಸಹಾಯ ಮಾಡುವ ಮಾತೊಂದನ್ನು ನುಡಿಯಲು ನನ್ನಿಂದ ಸ್ವಲ್ಪ ಮಟ್ಟಿನ ಸಾಮರ್ಥ್ಯವನ್ನು ಮಾತ್ರವೇ ಹೊಂದಿದ್ದೀಯೆ.' ಇದೇ 'ಆತ' ನನಗೆ ನುಡಿದ ಮುಂದಿನ ವಿಷಯವಾಗಿತ್ತು.

ಬಳಿಕ ಹಠಾತ್ತಾಗಿ ಸಂಗತಿಯೊಂದು ಜರುಗಿತು ಮತ್ತು ಕ್ಷಣಮಾತ್ರದಲ್ಲಿ ಏಕಾಂಗಿ ಕಿರುಕೋಣೆಯ ಏಕಾಂತವಾಸಕ್ಕೆ ನನ್ನನ್ನು ಅವಸರದಿಂದ ಕರೆದೊಯ್ಯಲಾಯಿತು. ಆ ಕಾಲಾವಧಿಯಲ್ಲಿ ನನಗೇನು ಜರುಗಿತೆಂಬುದನ್ನು ಹೇಳಲು ನನಗಾವ ಒತ್ತಡವೂ ಇಲ್ಲ. ಆದರೆ, ಇಷ್ಟುಮಾತ್ರ ಹೇಳಬಲ್ಲೆ, ದಿನದಿನವೂ 'ಆತ' ತನ್ನ ಅದ್ಭುತಗಳನ್ನು ನನಗೆ ಪ್ರದರ್ಶಿಸಿದ ಮತ್ತು ನನ್ನನ್ನು ಹಿಂದೂ ಧರ್ಮದ ಸತ್ಯವನ್ನು ಅರಿತುಕೊಳ್ಳುವಂತೆ ಮಾಡಿದ. ಮೊದಲಿಗೆ ನಾನು ಹಲವಾರು ಸಂದೇಹಗಳನ್ನು ಹೊಂದಿದ್ದೆ. ನಾನು ಇಂಗ್ಲೆಂಡ್‌ನಲ್ಲಿ ವಿದೇಶೀಯ ಅಭಿಪ್ರಾಯಗಳು ಮತ್ತು ಸಂಪೂರ್ಣವಾಗಿ ವಿದೇಶೀಯವಾದ ಸನ್ನಿವೇಶಗಳಲ್ಲಿ ಬೆಳೆಸಲ್ಪಟ್ಟವನಾಗಿದ್ದೆ. ಹಿಂದೂಧರ್ಮದಲ್ಲಿನ ಅನೇಕ ವಿಷಯಗಳು ಕೇವಲ ಕಲ್ಪನೆಗಳೆಂದು, ಅದರಲ್ಲಿ ಹೆಚ್ಚಿನದು ಕನಸಾಗಿತ್ತೆಂದು, ಹೆಚ್ಚಿನದು ಭ್ರಮೆ ಮತ್ತು ಮಾಯೆಯಾಗಿತ್ತೆಂದು ನಂಬಲು ಒಮ್ಮೆ ನಾನು ಒಲವುಳ್ಳವನಾಗಿದ್ದೆ. ಆದರೆ ಈಗ ದಿನದಿನವೂ ಹಿಂದೂ ಧರ್ಮದ ಸತ್ಯಗಳನ್ನು ಮನಸ್ಸಿನಲ್ಲಿ ನಾನು ಅರಿತುಕೊಂಡೆ, ಹೃದಯದಲ್ಲಿ ನಾನು ಅರಿತುಕೊಂಡೆ, ಶರೀರದಲ್ಲಿ ನಾನು ಅರಿತುಕೊಂಡೆ. ಅವು ನನಗೆ ಜೀವಂತ ಅನುಭವಗಳಾಗಿ ಪರಿಣಮಿಸಿದುವು ಮತ್ತು ಯಾವುದೇ ಭೌತವಿಜ್ಞಾನ ವಿವರಿಸಲಾಗದ ಸಂಗತಿಗಳು ನನಗೆ ಪ್ರಕಟಗೊಂಡುವು. ನಾನು ಮೊದಲ ಬಾರಿಗೆ 'ಆತನನ್ನು' ಸಮೀಪಿಸಿದಾಗ ಅದು ಸಂಪೂರ್ಣವಾಗಿ ಭಕ್ತನ ಹುಮ್ಮಸ್ಸಿನಿಂದಲ್ಲ, ಸಂಪೂರ್ಣವಾಗಿ ಜ್ಞಾನಿಯ ಹುಮ್ಮಸ್ಸಿನಿಂದಲ್ಲ. ಸ್ವದೇಶೀ ಪ್ರಾರಂಭವಾದ ಸ್ವಲ್ಪ ವರ್ಷಗಳಿಗೆ ಮುಂಚಿತವಾಗಿ ಬಹು ಹಿಂದೆಯೇ ಬರೋಡಾದಲ್ಲಿ ನಾನು 'ಆತ'ನಲ್ಲಿಗೆ ಬಂದೆ ಮತ್ತು ಸಾರ್ವಜನಿಕ ಕ್ಷೇತ್ರದೊಳಗೆ ಆಕರ್ಷಿತಗೊಂಡೆ.

ನಾನು ದೇವರನ್ನು ಸಮೀಪಿಸಿದ ಆ ಸಮಯದಲ್ಲಿ ನಾನು 'ಆತ'ನಲ್ಲಿ ಒಂದು ಜೀವಂತಶ್ರದ್ಧೆಯನ್ನು ಹೊಂದಿರಲೇ ಇಲ್ಲ. ನನ್ನಲ್ಲಿ ಆಜ್ಞೇಯವಾದಿಯಿದ್ದ, ನನ್ನಲ್ಲಿ ನಾಸ್ತಿಕವಾದಿಯಿದ್ದ, ನನ್ನಲ್ಲಿ ಸಂದೇಹವಾದಿಯಿದ್ದ, ದೇವನೊಬ್ಬನಿದ್ದನೆಂಬುದರ ಬಗ್ಗೆಯೇ ನಾನು ಸಂಪೂರ್ಣವಾಗಿ ಖಾತ್ರಿಯುಳ್ಳವನಾಗಿರಲಿಲ್ಲ. ನಾನು 'ಆತ'ನ ಇರುವನ್ನು ಅನುಭವಿಸಲಿಲ್ಲ.



ಆದರೂ, ಯಾವುದೋ ಒಂದು ನನ್ನನ್ನು ವೇದಗಳ ಸತ್ಯಕ್ಕೆ, 'ಗೀತೆ'ಯ ಸತ್ಯಕ್ಕೆ, ಹಿಂದೂ ಧರ್ಮದ ಸತ್ಯಕ್ಕೆ ನನ್ನನ್ನು ಸೆಳೆಯಿತು. ಈ ಯೋಗದಲ್ಲಿ ಎಲ್ಲಿಯೋ ಒಂದು ಕಡೆ ಪ್ರಬಲವಾದೊಂದು ಸತ್ಯವಿರಬೇಕೆಂದು, ವೇದಾಂತದ ಮೇಲೆ ಆಧಾರಿತಗೊಂಡ ಈ ಧರ್ಮದಲ್ಲಿ ಪ್ರಬಲವಾದೊಂದು ಸತ್ಯವಿರಬೇಕೆಂದು ನಾನು ಭಾವಿಸಿದೆ.

ಆದ್ದರಿಂದ ನಾನು ಯೋಗದ ಕಡೆಗೆ ತಿರುಗಿದಾಗ ಮತ್ತು ಅದನ್ನು ಆಚರಣೆಗೆ ತರಬೇಕೆಂದು ಮತ್ತು ನನ್ನ ಅಭಿಪ್ರಾಯ ಸರಿಯಾಗಿತ್ತೆ ಎಂದು ಕಂಡುಹಿಡಿಯಲು ದೃಢನಿರ್ಧಾರ ಕೈಗೊಂಡಾಗ ಈ ಹುಮ್ಮಸ್ಸಿನಲ್ಲಿ ಮತ್ತು 'ಆತ'ನಲ್ಲಿ ಈ ಪ್ರಾರ್ಥನೆಯೊಂದಿಗೆ ನಾನು ಅದನ್ನು ಮಾಡಿದೆ. 'ನೀನಿರುವುದಾದರೆ, ಆಗ ನೀನು ನನ್ನ ಹೃದಯವನ್ನು ಅರಿತಿದ್ದೀಯೆ. ನಾನು 'ಮುಕ್ತಿ'ಗಾಗಿ ಕೋರುವುದಿಲ್ಲವೆಂದು, ಇತರರು ಕೋರಿಕೊಳ್ಳುವ ಯವುದನ್ನೇ ಆದರೂ ನಾನು ಕೋರಿಕೊಳ್ಳುವುದಿಲ್ಲವೆಂದು ನೀನು ಅರಿತಿದ್ದೀಯೆ. ನಾನು ಪ್ರೀತಿಸುವ ಮತ್ತು ನನ್ನ ಜೀವನವನ್ನು ಮುಡಿಪಾಗಿಡುವಂತೆ ನಾನು ಪ್ರಾರ್ಥಿಸುವ ಈ ಜನರಿಗಾಗಿ ಬದುಕಲು ಮತ್ತು ಕಾರ್ಯವೆಸಗಲು ಅನುಮತಿಸಲಾಗುವುದನ್ನು ಮಾತ್ರವೇ ನಾನು ಕೋರುತ್ತೇನೆ.'

ದೀರ್ಘಕಾಲದವರೆಗೆ ನಾನು ಯೋಗದ ಸಾಕ್ಷಾತ್ಕಾರಕ್ಕಾಗಿ ಶ್ರಮಿಸಿದೆ ಮತ್ತು ಅಂತಿಮವಾಗಿ ಸ್ವಲ್ಪಮಟ್ಟಿಗೆ ನಾನದನ್ನು ಪಡೆದೆ. ಆದರೆ, ಯಾವುದನ್ನು ನಾನು ಬಹುವಾಗಿ ಬಯಸಿದೆನೋ ಅದರಲ್ಲಿ ನಾನು ತೃಪ್ತನಾಗಲಿಲ್ಲ. ಬಳಿಕ, ಏಕಾಂಗಿ ಕಿರುಕೋಣೆಯ ಕಾರಾಗೃಹದ ಏಕಾಂಗಿತನದಲ್ಲಿ ಮತ್ತೊಮ್ಮೆ ನಾನು ಅದಕ್ಕಾಗಿ ಕೋರಿದೆ. ನಾನು ನುಡಿದೆ, 'ನನಗೆ ನಿನ್ನ "ಆದೇಶ"ವನ್ನು ನೀಡು. ಯಾವ ಕೆಲಸವನ್ನು ಮಾಡಬೇಕೊ ಮತ್ತು ಅದನ್ನು ಹೇಗೆ ಮಾಡಬೇಕೊ ನನಗೆ ಗೊತ್ತಿಲ್ಲ. ನನಗೊಂದು ಸಂದೇಶವನ್ನು ನೀಡು.'

ಯೋಗದ ಸಹಭಾಗಿತ್ವದಲ್ಲಿ ಎರಡು ಸಂದೇಶಗಳು ಬಂದುವು. ಮೊದಲನೆಯ ಸಂದೇಶ (ಹೀಗೆ) ನುಡಿಯಿತು, 'ನಾನು ನಿನಗೊಂದು ಕೆಲಸವನ್ನು ನೀಡಿದ್ದೇನೆ ಮತ್ತು ಅದು ರಾಷ್ಟ್ರವನ್ನು ಉದ್ಧಾರ ಮಾಡಲು ನೆರವಾಗುವುದು. ಕ್ಷಿಪ್ರದಲ್ಲಿಯೇ ನೀನು ಕಾರಾಗೃಹದಿಂದ ಹೊರಗೆ ಹೋಗಬೇಕಾದ ಸಮಯ ಬರುತ್ತದೆ; ಏಕೆಂದರೆ, ಈ ಬಾರಿ ನೀನು ಇಲ್ಲಿಯೇ ಸೆರೆಯಾಳಾಗಿ ಇರಬೇಕೆಂಬುದಾಗಲಿ ಅಥವಾ ಇತರರು ಮಾಡಬೇಕಾಗಿರುವಂತೆ ರಾಷ್ಟ್ರಕ್ಕಾಗಿ ಯಾತನೆಪಡುತ್ತ ಕಾಲವನ್ನು ಕಳೆಯಬೇಕೆಂಬುದಾಗಲಿ ನನ್ನ ಸಂಕಲ್ಪವಾಗಿಲ್ಲ. ನಾನು ನಿನ್ನನ್ನು ಕೆಲಸ ಮಾಡಲು ಕರೆದಿದ್ದೇನೆ ಮತ್ತು ನೀನು ಕೋರಿರುವುದು ಅದೇ 'ಆದೇಶ'ಕ್ಕಾಗಿ. ಮುಂದೆ ಸಾಗಲು ಮತ್ತು ನನ್ನ ಕಾರ್ಯವನ್ನು ಮಾಡಲು ನಾನು ನಿನಗೆ 'ಆದೇಶ'ವನ್ನು ನೀಡುತ್ತೇನೆ.

ಎರಡನೆಯ ಸಂದೇಶ ಬಂದಿತು ಮತ್ತು ಅದು 'ಹೀಗೆ' ಹೇಳಿತು, 'ಏಕಾಂತವಾಸದ ಈ ವರ್ಷದಲ್ಲಿ, ಯಾವುದೋ ಒಂದರ ಬಗ್ಗೆ ನೀನು ಸಂಶಯಗಳನ್ನು ಹೊಂದಿದ್ದ ಏನೋ ಒಂದು ನಿನಗೆ ಪ್ರದರ್ಶಿಸಲ್ಪಟ್ಟಿದೆ ಮತ್ತು ಅದು ಹಿಂದೂಧರ್ಮದ ಸತ್ಯ. ಪ್ರಪಂಚದೆದುರಿನಲ್ಲಿ ನಾನು ಉನ್ನತೀಕರಿಸುತ್ತಲಿರುವುದು ಈ ಧರ್ಮವನ್ನೇ, ಋಷಿಗಳು, ಸಂತರು ಮತ್ತು ಅವತಾರಗಳ ಮೂಲಕ ನಾನು ಪರಿಪೂರ್ಣಗೊಳಿಸಿರುವುದು ಮತ್ತು ವಿಕಾಸಗೊಳಿಸಿರುವುದು ಇದನ್ನೇ ಮತ್ತು ಈಗ ರಾಷ್ಟ್ರಗಳ ನಡುವೆ ನನ್ನ ಕೆಲಸವನ್ನು ಮಾಡಲು ಅದು ಮುಂದೆ ಸಾಗುತ್ತಲಿದೆ.

'ನನ್ನ ಆದೇಶವನ್ನು ಮುಂದಕ್ಕೆ ಕಳುಹಿಸಲು ನಾನು ಈ ರಾಷ್ಟ್ರವನ್ನು ಎತ್ತಿ ಹಿಡಿಯುತ್ತಿದ್ದೇನೆ. ಸನಾತನಧರ್ಮ ಇದೇ, ಮುಂಚೆ ನೀನು ನಿಜವಾಗಿಯೂ ತಿಳಿದಿಲ್ಲದಿದ್ದ, ಆದರೆ, ಈಗ ನಾನು ನಿನಗೆ ತಿಳಿಸುತ್ತಲಿರುವ ಶಾಶ್ವತವಾದ ಧರ್ಮ ಇದೇ. ನಿನ್ನೊಳಗಿರುವ ಅಜ್ಞೇಯತಾವಾದಿ ಮತ್ತು ಸಂದೇಹವಾದಿಗೆ ಉತ್ತರ ನೀಡಲಾಗಿದೆ, ಏಕೆಂದರೆ, ನಿನ್ನೊಳಗೆ ಮತ್ತು ಹೊರಗೆ ನಿನಗೆ ತೃಪ್ತಿಯನ್ನುಂಟುಮಾಡಿರುವ ಭೌತಿಕ ಮತ್ತು ವಸ್ತುನಿಷ್ಠ ಸಾಕ್ಷಿಗಳನ್ನು ನಾನು ನಿಮಗೆ ನೀಡಿದ್ದೇನೆ.

'ನೀನು ಮುಂದೆ ಸಾಗುವಾಗ ಯಾವಾಗಲೂ ಈ ಮಾತನ್ನು ನಿನ್ನ ಜನತೆಗೆ ನುಡಿ, ಅವರು ಜಾಗ್ರತರಾಗುವುದು ಸನಾತನ ಧರ್ಮಕ್ಕಾಗಿ, ಅವರು ಜಾಗ್ರತರಾಗುವುದು ಕೇವಲ ತಮಗಾಗಿಯಲ್ಲ, ಜಗತ್ತಿಗಾಗಿ. ಜಗತ್ತಿನ ಸೇವೆಗಾಗಿ ನಾನು ಅವರಿಗೆ ಸ್ವಾತಂತ್ರ್ಯವನ್ನು ನೀಡುತ್ತಿದ್ದೇನೆ. ಆದ್ದರಿಂದ, ಭಾರತ ಉನ್ನತಿ ಹೊಂದುತ್ತದೆ ಎಂದು ಹೇಳಿದಾಗ ಉನ್ನತಿ ಹೊಂದುವುದು ಸನಾತನಧರ್ಮ. ಭಾರತ ಶ್ರೇಷ್ಠತೆ ಹೊಂದುತ್ತದೆ ಎಂದು ಹೇಳಿದಾಗ ಶ್ರೇಷ್ಠತೆ ಹೊಂದುವುದು ಸನಾತನ ಧರ್ಮ.

'ಭಾರತ ವಿಸ್ತಾರಗೊಳ್ಳುತ್ತದೆ ಮತ್ತು ತನ್ನನ್ನು ವಿಸ್ತರಿಸಿಕೊಳ್ಳುತ್ತದೆ ಎಂದು ನುಡಿದಾಗ ಪ್ರಪಂಚದ ಮೇಲೆ ವಿಸ್ತಾರಗೊಳ್ಳುವುದು ಮತ್ತು ತನ್ನನ್ನೇ ವಿಸ್ತರಿಸಿಕೊಳ್ಳುವುದು ಸನಾತನ ಧರ್ಮ.

'ಭಾರತ ಅಸ್ತಿತ್ವದಲ್ಲಿರುವುದು ಧರ್ಮಕ್ಕಾಗಿ ಮತ್ತು ಧರ್ಮದಿಂದ. ಧರ್ಮವನ್ನು ವರ್ಧಿಸುವುದೆಂದರೆ ದೇಶವನ್ನು ವರ್ಧಿಸುವುದೆಂದು ಅರ್ಥ.

'ನಾನು ಎಲ್ಲೆಡೆಯಲ್ಲಿ ಮತ್ತು ಎಲ್ಲ ಮನುಷ್ಯರಲ್ಲಿ ಮತ್ತು ಎಲ್ಲ ವಸ್ತುಗಳಲ್ಲಿ ಇದ್ದೇನೆಂದು, ನಾನು ಈ ಆಂದೋಳನದಲ್ಲಿ ಇದ್ದೇನೆಂದು ಮತ್ತು ದೇಶಕ್ಕಾಗಿ ಶ್ರಮಿಸುವವರಲ್ಲಿ ಮಾತ್ರವೇ ನಾನು ಕಾರ್ಯಪ್ರವೃತ್ತನಾಗಿಲ್ಲ. ಆದರೆ, ಅವರನ್ನು ವಿರೋಧಿಸುತ್ತಿರುವವರಲ್ಲಿಯೂ ಕಾರ್ಯಪ್ರವೃತ್ತನಾಗಿದ್ದೇನೆ ಮತ್ತು ಅವರ ದಾರಿಯಲ್ಲಿ ನಿಂತಿರುವೆನೆಂದು ನಾನು ನಿನಗೆ ತೋರಿಸಿದ್ದೇನೆ.



'ನಾನು ಪ್ರತಿಯೊಬ್ಬರಲ್ಲಿಯೂ ಕೆಲಸ ಮಾಡುತ್ತಿದ್ದೇನೆ ಮತ್ತು ಮನುಷ್ಯರು ಏನನ್ನೇ ಮಾಡಲಿ ಅಥವಾ ಆಲೋಚಿಸಲಿ ನನ್ನ ಉದ್ದೇಶಕ್ಕೆ ಸಹಾಯ ಮಾಡುವುದಲ್ಲದೆ ಅವರು ಬೇರೇನನ್ನೂ ಮಾಡಲಾರರು. ಅವರೂ ಸಹ ನನ್ನ ಕೆಲಸವನ್ನು ಮಾಡುತ್ತಿದ್ದಾರೆ, ಅವರು ನನ್ನ ಶತ್ರುಗಳಲ್ಲ, ಆದರೆ ನನ್ನ ಸಾಧನಗಳು.

'ನಿನ್ನ ಎಲ್ಲ ಕ್ರಿಯೆಗಳಲ್ಲಿ ಯಾವ ದಾರಿಯಲ್ಲಿ ಚಲಿಸುತ್ತಿರುವೆಯೆಂದು ಅರಿಯದೆಯೇ ನೀನು ಮುಂದಕ್ಕೆ ಚಲಿಸುತ್ತಿದ್ದೀಯೆ. ನೀನು ಕಾರ್ಯವೊಂದನ್ನು ಮಾಡುವ ಉದ್ದೇಶ ಹೊಂದಿದ್ದೀಯೆ ಮತ್ತು ಮತ್ತಾವುದೋ ಒಂದನ್ನು ಮಾಡುತ್ತಿದ್ದೀಯೆ. ನೀನು ಫಲಿತಂಶವೊಂದರತ್ತ ಗುರಿಯಿರಿಸುತ್ತೀಯೆ ಮತ್ತು ನಿನ್ನ ಪ್ರಯತ್ನಗಳು ವಿಭಿನ್ನವಾಗಿರುವ ಅಥವಾ ವಿರುದ್ಧವಾಗಿರುವುದೊಂದಕ್ಕೆ ಸಹಕರಿಸುತ್ತವೆ.

'ಮುಂದೆ ಸಾಗಿರುವುದು ಮತ್ತು ಜನರೊಳಗೆ ಪ್ರವೇಶಿಸಿರುವುದು "ಶಕ್ತಿ". ಬಹಳ ಹಿಂದೆಯೇ ನಾನು ಈ ಬಂಡಾಯವನ್ನು ಸಜ್ಜುಗೊಳಿಸುತ್ತಿದ್ದೇನೆ ಮತ್ತು ಇದೀಗ ಸಮಯ ಒದಗಿಬಂದಿದೆ ಮತ್ತು ಅದರ ಈಡೇರುವಿಕೆಗೆ ಅದನ್ನು ಮುನ್ನಡೆಸುವವನು ನಾನೇ.'

* * * *

# ೮. ಫ್ರಾಂಕ್ ಎನ್. ಡಿ. ಬಕಮನ್
## (ಕ್ರಿ.ಶ. ೧೮೭೮–೧೯೬೧)

[ನೈತಿಕ ಪುನರ್ಯುದ್ಧ ಸನ್ನಾಹದ ಆಂದೋಳನದ ಪ್ರವರ್ತಕ. ಇದಕ್ಕಾಗಿ ಆತ ಪ್ರಪಂಚದ ಹೆಚು ಕಡಿಮೆ ಪ್ರತಿಯೊಂದು ದೇಶವನ್ನೂ ಭೇಟಿ ಮಾಡುತ್ತ ಪ್ರಪಂಚದಾದ್ಯಂತ ಒಂದು ಧರ್ಮಯುದ್ಧವನ್ನು ನಡೆಸಿದ. ಮನುಷ್ಯರ ಸಂಬಂಧಗಳಲ್ಲಿ ಪ್ರಾಮಾಣಿಕತೆ, ಪರಿಶುದ್ಧತೆ, ನಿಃಸ್ವಾರ್ಥತೆ ಮತ್ತು ಪ್ರೀತಿಗಳನ್ನು ಎತ್ತಿಹಿಡಿಯುವುದು ಆತನಿಗೆ 'ದೈವದತ್ತ ಕಲ್ಪನೆ'ಯಾಗಿತ್ತು. 'ಪಶ್ಚಿಮದಿಂದ ಬಂದ ಅತ್ಯಂತ ಶ್ರೇಷ್ಠವಾದ ಸಂಗತಿ' ಎಂದು ಮಹಾತ್ಮಾಗಾಂಧಿ ಆಂದೋಳನವನ್ನು ಕುರಿತಂತೆ ನುಡಿದರು. ಮನುಷ್ಯನ ಸಹಜಸಿದ್ಧವಾದ ಒಳ್ಳೆಯತನದಲ್ಲಿ ಆತನ ಪರಮೋಚ್ಚ ನಂಬಿಕೆ ಮತ್ತು ಆ ಒಳ್ಳೆಯತನವನ್ನು ಅಭಿವ್ಯಕ್ತಿ ಮತ್ತು ಕ್ರಿಯಾಶೀಲತೆಯಲ್ಲಿ ಜಾಗ್ರತಗೊಳಿಸಲು ಆತನ ಹುರುಪು ಆ ಆಂದೋಳನಕ್ಕೆ ಜೀವಾಳವನ್ನು ಒದಗಿಸಿತು. ಜರ್ಮನಿಯಲ್ಲಿನ ಫ್ರ್ಯೂಡೆನ್‌ಸ್ಟ್ಯಾಟ್‌ನ ನಗರದ ಹೊರಗಡೆಯ ಕಪ್ಪು ಅರಣ್ಯದ ಬಳಿಯಲ್ಲಿ ಸಂಚರಿಸುತ್ತಿದ್ದ ವೇಳೆಯಲ್ಲಿ ಸ್ಫುರಣೆಯನ್ನು ಪಡೆಯುತ್ತ ಆತ ಸ್ವಯಂ ತನ್ನನ್ನೇ ಪ್ರಪಂಚದ ಪ್ರಜ್ಞೆಯನ್ನಾಗಿ ಮತ್ತು ಒಂದು ಸಮಂಜಸವಾದ ನೈತಿಕ ವ್ಯವಸ್ಥೆಯ ಪ್ರಚಾರಕನನ್ನಾಗಿ ನಿಯೋಜಿಸಿಕೊಂಡ.]

**ನನ್ನ ಸಂಕಲ್ಪವನ್ನು ತೊಡೆದುಹಾಕು**

ಪ್ರಾಮಾಣಿಕವಾಗಿ ಆಲಿಸಲು ಮತ್ತು ತೀವ್ರವಾಗಿ ಆಜ್ಞೆ ಪಾಲಿಸಲು ಸಿದ್ಧನಾಗಿರುವ ಯಾವನೇ ವ್ಯಕ್ತಿಯೊಂದಿಗೆ ದೇವರು ಮಾನತಾಡುತ್ತಾನೆ.

ಓರ್ವ ಯುವಕನಾಗಿ ನಾನು ಮನಃಪೂರ್ವಕವಾಗಿ ನನ್ನ ಕಾರ್ಯದಲ್ಲಿ ಯಶಸ್ಸನ್ನು ಬಯಸಿದೆ. ನನ್ನ ಕೆಲಸ ಮತ್ತು ನನ್ನ ಯಶಸ್ಸು ನನ್ನ ಆರಾಧ್ಯ ವಸ್ತುವಾಗಿತ್ತು. ನಾನು ನನ್ನ ಸಹೋದ್ಯೋಗಿಗಳೊಂದಿಗೆ ಸಂಘರ್ಷಕ್ಕಿಳಿದೆ ಮತ್ತು ಅವರು ತಪ್ಪು ಮಾಡುತ್ತಿರುವರೆಂದು ನಾನು ಭಾವಿಸಿದೆ. ನಾನು ಬದ್ಧದ್ವೇಷವನ್ನು ಇರಿಸಿಕೊಂಡೆ. ನನ್ನ ಆರೋಗ್ಯ ಹಾನಿಗೀಡಾಯಿತು. ನಾನು ಅಮೆರಿಕದಲ್ಲಿ ನನ್ನ ಕೆಲಸವನ್ನು ತೊರೆದೆ ಮತ್ತು ಯೂರೋಪ್‌ನುದ್ದಕ್ಕೂ ಪ್ರವಾಸ ಮಾಡಿದೆ.



ಇಂಗ್ಲೆಂಡ್‌ನ ಉತ್ತರದಲ್ಲಿ ನನ್ನ ಜೀವನದ ಗತಿಯನ್ನೇ ಬದಲಿಸಿದ ಯಾವುದೋ ಸಂಗತಿ ಜರುಗಿತು. ದಾರಿಯ ಪಕ್ಕದ ಚರ್ಚ್‌ವೊಂದರಲ್ಲಿ ಸರಳವಾದ ಮಾತನ್ನು ನಾನು ಆಲಿಸಿದೆ. ಯಾವ ಸಿಡಿಲೂ ಇಲ್ಲ, ಯಾವ ಮಿಂಚೂ ಇಲ್ಲ, ಯಾವ ಮೋಡವೂ ಇಲ್ಲ, ಯಾವ ಅಲೌಕಿಕವಾಣಿಯೂ ಇಲ್ಲ. ಆದರೆ, ಸುಮಾರು ಹದಿನೇಳು ವ್ಯಕ್ತಿಗಳ ಒಂದು ಗುಂಪಿಗೆ ಸರಳವಾದ, ಮುಚ್ಚುಮರೆಯಿಲ್ಲದ ಮಾತು.

ಓರ್ವ ಕ್ರೈಸ್ತಮತೀಯನಾಗಿ ಕಾರ್ಯವನ್ನೆಸಗಲು ನನಗೆ ತಡೆಯುಂಟು ಮಾಡಿದ ಒಣಜಂಬ ಮತ್ತು ಸ್ವಾರ್ಥಪರತೆ, ಬದ್ಧದ್ವೇಷವನ್ನು ಪೋಷಿಸುತ್ತ, ಭಿನ್ನಾಭಿಪ್ರಾಯದ ಸಂಕಲ್ಪದೊಂದಿಗೆ ನಾನು ಸಣ್ಣ ಚರ್ಚನ್ನು ಪ್ರವೇಶಿಸಿದೆ. ದೇವರು ನನ್ನನ್ನು ಬಳಸಿಕೊಳ್ಳಬೇಕೆಂದಾದರೆ ನನ್ನ ಸಂಕಲ್ಪವನನು ತೊಡೆದುಹಾಕಬೇಕಿತ್ತೆಂದು ನಾನು ಯಾವಾಗಲೂ ನಂಬಿದ್ದ ಸತ್ಯವನ್ನು ಕುರಿತಂತೆ ಸಾರ್ವಜನಿಕ ಭಾಷಣಕಾರ ಮಾತನಾಡಿದ. ಆ ದಿನ ಈ ಸತ್ಯ ನನಗೆ ವಾಸ್ತವ ಸಂಗತಿಯಾಗಿ ಪರಿಣಮಿಸಿತು. ನನ್ನ ಮತ್ತು 'ಆತನ' ನಡುವೆ ಇದ್ದ ಕಂದರವನ್ನು ಮುಚ್ಚಿದ ಕ್ರಿಸ್ತನಲ್ಲಿನ ದೇವರ ಪ್ರೀತಿಯನ್ನು ನಾನು ಅನುಭವಿಸಿದೆ. ನನ್ನ ಹೊಸ ಅನುಭವವನ್ನು ಹಂಚಿಕೊಳ್ಳಲು ಪ್ರಬಲವಾದೊಂದು ಪ್ರೇರಣೆಯೊಂದಿಗೆ ನಾನು ಹಿಂದಿರುಗಿದೆ.

ತತ್ಪರಿಣಾಮವಾಗಿ, ಯಾರ ವಿರುದ್ಧವಾಗಿ ನಾನು ಬದ್ಧದ್ವೇಷವನ್ನು ಪೋಷಿಸಿಕೊಂಡು ಬಂದಿದ್ದೆನೋ ಆ ಅಮೆರಿಕದಲ್ಲಿನ ನನ್ನ ಆರು ಜನ ಸಹೋದ್ಯೋಗಿಗಳಿಗೆ ಪತ್ರ ಬರೆದೆ ಮತ್ತು ನನಗೇನು ಜರುಗಿತ್ತೆಂಬುದನ್ನು ಅವರಿಗೆ ತಿಳಿಸಿದೆ. ಗಾಂಧೀಜಿಯವರ ಮಗ ದೇವದಾಸ್ ತನ್ನ ತಂದೆಗೆ ಅತ್ಯಂತ ಪ್ರಿಯವಾದವುಗಳಲ್ಲಿ ಒಂದೆಂದು ನನಗೆ ತಿಳಿಸಿದ್ದ ಪ್ರಾರ್ಥನೆಯಿಂದ ಸಾಲುಗಳನ್ನು ಉಲ್ಲೇಖಿಸಿದೆ.

'ಧವಳ ಕೀರ್ತಿಯ ರಾಜಕುಮಾರ ಮರಣ ಹೊಂದಿದ
ಅದ್ಭುತ ಶಿಲುಬೆಯನ್ನು ನಾನು ಅವಲೋಕಿಸಿದಾಗ
ನಾನು ನನ್ನ ಅತ್ಯಂತ ಶ್ರೀಮಂತ ಗಳಿಕೆಯನ್ನೆಣಿಸುತ್ತೇನೆ, ನಷ್ಟವನ್ನಲ್ಲ
ಮತ್ತು ನನ್ನೆಲ್ಲ ಪ್ರತಿಷ್ಠೆಯ ಮೇಲೆ ಸುರಿಸುತ್ತೇನೆ ಧಿಕ್ಕಾರ.'

ಬಳಿಕ ನಾನು ನುಡಿದೆ,

'ನನ್ನ ಪ್ರಿಯ ಮಿತ್ರ,

ನಾನು ನಿನ್ನ ವಿರುದ್ಧ ಬದ್ಧದ್ವೇಷವನ್ನು ಪೋಷಿಸಿದ್ದೇನೆ. ನಾನು ವಿಷಾದಿಸುತ್ತೇನೆ. ನನ್ನನ್ನು ಕ್ಷಮಿಸು.

ನಿನ್ನ ವಿಶ್ವಾಸಿ,
ಫ್ರಾಂಕ್

ಅದೇ ದಿನ ಓರ್ವ ವ್ಯಕ್ತಿ ತನ್ನ ಜೀವನದಲ್ಲಿನ ಗಂಭೀರವಾದೊಂದು ಸಮಸ್ಯೆಯೊಂದಿಗೆ ನನ್ನ ಬಳಿಗೆ ಬಂದ. ನಾನು ಆಗಷ್ಟೇ ಮಾಡಿದ್ದ ತೀರ್ಮಾನದ ಬಗ್ಗೆ ಆತನಿಗೆ ತಿಳಿಸಲು ಸಮರ್ಥನಾದೆ. ಆಗ ಆತ ಅದೇ ಅನುಭವವನ್ನು ಕಂಡುಕೊಂಡ.

ನಾನು ಯಾವುದನ್ನು ತಿದ್ದಿ ಸರಿಪಡಿಸಬಲ್ಲೆನೋ ಅದನ್ನು ಸರಿಪಡಿಸಿದಾಗ ಮತ್ತು ನನ್ನ ಹೃದಯದಲ್ಲಿ ದೇವರ ವಾಣಿಯನ್ನು ಪಾಲಿಸಿದಾಗ ನಾನು ಸ್ವಾತಂತ್ರ್ಯವನ್ನು ಮತ್ತು ಇತರ ವ್ಯಕ್ತಿಗಳಿಗೆ ಉತ್ತರವನ್ನು ನೀಡಲು ಸಾಮರ್ಥ್ಯವನ್ನು ಕಂಡುಕೊಂಡೆನೆಂಬುದನ್ನು ಅದು ನನಗೆ ಕಲಿಸಿತು.

ನಾನು ಭಾರತಕ್ಕೆ ಒಂಬತ್ತು ಬಾರಿ ಭೇಟಿಗಳನ್ನು ನೀಡಿದ್ದೆ. ಅವುಗಳಲ್ಲಿ ಒಂದು ಗಾಂಧೀಜಿಯವರೊಂದಿಗೆ ಮತ್ತು ಅವರ ಪ್ರಾರಂಭದ ಹಲವಾರು ಜನ ಸಹ ಹೋರಾಟಗಾರರೊಂದಿಗೆ ನನ್ನ ಮೊದಲ ಭೇಟಿಯಿಂದ ಎದ್ದುಕಾಣುವಂತಿತ್ತು. ಅದು ಜರುಗಿದುದು ೧೯೧೫ರಲ್ಲಿ.

ಹತ್ತು ವರ್ಷಗಳ ನಂತರ ನಾನು ಶ್ರೀನಗರದಿಂದ ಕೊಡೈಕೆನಾಲ್‌ಗೆ ಪ್ರಯಾಣ ಮಾಡುತ್ತಿದ್ದೆ. ನಿಲ್ದಾಣಗಳಲ್ಲೊಂದರಲ್ಲಿ ನನ್ನ ತಾಯಿ ಅಮೆರಿಕಾದಲ್ಲಿ ಮರಣ ಹೊಂದಿದ್ದಳೆಂದು ತಿಳಿಸಲು ತಂತಿ ಸಮಾಚಾರವೊಂದನ್ನು ನನಗೆ ನೀಡಲಾಯಿತು. ಆಕೆಯ ಕ್ರಿಯಾಶೀಲ ಮತ್ತು ಶಿಸ್ತುಬದ್ಧವಾದ ಶ್ರದ್ಧೆ, ಆಕೆಯ ಹಾಸ್ಯಪ್ರಜ್ಞೆ ಮತ್ತು ಆಕೆಯ ಅತಿಥಿಸತ್ಕಾರದ ವಿಶಾಲಹೃದಯದ ಪ್ರಜ್ಞೆಯೊಂದಿಗೆ ಆಕೆ ನನ್ನ ಬಾಳಿನ ಮೇಲೆ ಒಂದು ಮಹತ್ತಾದ ಪ್ರಭಾವವಾಗಿದ್ದಳು. 'ಆತ' ಎಲ್ಲಿಗೇ ನನ್ನನ್ನು ಮುನ್ನಡೆಸಲಿ ಭಗವಂತನ ಆದೇಶವನ್ನು ಪಾಲಿಸುವಂತೆ ಆಕೆ ನನ್ನನ್ನು ಸ್ವತಂತ್ರಗೊಳಿಸಿದ್ದಳು. ಆಕೆ ತನ್ನ ಕೊನೆಯುಸಿರನ್ನೆಳೆದಾಗ ನಾನು ಆಕೆಯೊಂದಿಗೆ ಇರಲಾಗದಿದ್ದುದಕ್ಕಾಗಿ ವಿಷಾದಗೊಂಡೆ.

ರಾತ್ರಿ ಕತ್ತಲಿನ ಮೂಲಕ ರೈಲುಗಾಡಿಯಲ್ಲಿ ನಾನು ಪ್ರಯಾಣಿಸುತ್ತಿದ್ದಂತೆ ರೈಲುಡಬ್ಬಿ ಹಗಲಿನಷ್ಟೇ ಪ್ರಕಾಶಮಾನವಾಗಿತ್ತು. ಬೆಳಗಿನ ಜಾವದವರೆಗೆ ನನ್ನ ತಾಯಿಯ ಸಾನ್ನಿಧ್ಯ ನನ್ನೊಂದಿಗಿತ್ತು ಮತ್ತು ಶ್ರದ್ಧೆಯಲ್ಲಿ ಮತ್ತು ದೇವರ ಇರುವಿಕೆಯಲ್ಲಿ ಒಂದಾಗಿರುವವರನ್ನು ಸಾವು ಬೇರ್ಪಡಿಸುವುದಿಲ್ಲವೆಂದು ನಾವು ಅರಿತಿದ್ದೆ.

ಇವುಗಳು ನನ್ನ ಜೀವನದ ಅತ್ಯಂತ ಪ್ರೀತಿಯಿಂದ ಕಂಡ ಅನುಭವಗಳ ನಡುವೆ ಸೇರಿವೆ. ಆದರೆ, ದೇವರ ಸನ್ನಿಧಿಯ ಪ್ರತಿನಿತ್ಯದ ಆಚರಣೆ ಯಾವನೇ ವ್ಯಕ್ತಿಗೆ, ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಲ್ಲಿರುತ್ತದೆ.

ಇದೀಗ ನನ್ನ ಎಂಬತ್ತೊಂದನೆಯ ವಯಸ್ಸಿನಲ್ಲಿ ಕಳೆದ ಕೆಲವೊಂದು ತಿಂಗಳನ್ನು ನಾನು ಹಾಸಿಗೆಯಲ್ಲಿ ಕಳೆಯಬೇಕಾಗಿ ಬಂತು. ಆದರೂ, ಹಾಸಿಗೆಯಲ್ಲಿ ಮಲಗಿರುವ ಓರ್ವ ಮುದಿವ್ಯಕ್ತಿಗೆ ದಿನದಿನವೂ ಪ್ರಪಂಚದೆಲ್ಲೆಡೆಯಿಂದ ಸಹಸ್ರಾರು ಜನರ



ಸಮ್ಮೇಳನಗಳಿಗೆ ನಿರ್ದೇಶನ ನೀಡಿರುವ ಮತ್ತು ಅವರ ದೇಶಗಳ ರಾಜ್ಯನೀತಿಗಳನ್ನು ಪ್ರಭಾವಿತಗೊಳಿಸಿರುವ ದೈವಪ್ರೇರಿತವಾದ ಆಲೋಚನೆಗಳು ಬಂದಿವೆ.

'ಅಲ್ಲಿನ ಗೊಂದಲಕ್ಕೆ ಬೆಳಕನ್ನು ತರುವುದಕ್ಕಾಗಿ ವಾಷಿಂಗ್‌ಟನ್‌ಗೆ ಮುನ್ನೂರು ಜನರನ್ನು ಕಳುಹಿಸು' ಎಂಬ ಆಲೋಚನೆ ಜೂನ್‌ನ ಪ್ರಾರಂಭದಲ್ಲಿ ಬಂದಿತು. ಎರಡು ತಿಂಗಳವರೆಗೆ ಈ ಕಾರ್ಯವನ್ನು ಮಾಡಲಾಯಿತು, ಮತ್ತು ಒಂದು ವಿಷಮ ಸಮಯದಲ್ಲಿ ರಾಜ್ಯದ ಮುಂದಾಳುಗಳನ್ನು ಸಂಪರ್ಕಿಸಲಾಯಿತು.

ಬಳಿಕ ಮಧ್ಯಪೂರ್ವಕ್ಕಾಗಿ– 'ಮಧ್ಯಪೂರ್ವ ಪಶ್ಚಿಮದ ಸೌಹಾರ್ದ ಮತ್ತು ನೆರವನ್ನು ಕಾಯುತ್ತಲಿದೆ' ಎಂಬ ಆಲೋಚನೆ ಬಂದಿತು. ಅದು, ಒಂದು ರೀತಿಯಲ್ಲಿ ಮುಂದಾಳುಗಳನ್ನು ಒಂದುಗೂಡಿಸಿದುದರ ಪರಿಣಾಮ ಪರಿಹಾರವನ್ನು ತರಲು ಅಲ್ಲಿ ನೆರವಾದ ವಿಶ್ವಸಂಸ್ಥೆಯ ಸರ್ವಾನುಮತದ ಮತದಾನಕ್ಕೆ ಕಾರಣವಾಯಿತು.

ಬಳಿಕ, ಪ್ರಸಿದ್ಧವಾದ ಆ ನಾಟಕ 'ಅತ್ಯುತ್ಕೃಷ್ಟ ಅನುಭವ' (The Crowning Experience)ದ ಚಲನಚಿತ್ರಕ್ಕೆ ಪ್ರಪಂಚ ಪ್ರತಿಸ್ಪಂದಿಸಲಿದೆಯೆಂಬ ನಿಶ್ಚಿತಾಭಿಪ್ರಾಯ ಬಂದಿತು. ಅಗತ್ಯವಾಗಿದ್ದ ಸಹಾಯ, ನೈಪುಣ್ಯತೆಗಳು, ಪಾತ್ರಗಳಿಗಾಗಿ ನಿಷ್ಠಾವಂತರಾದ ಜನರು– ಇವು ಪ್ರಪಮಚದೆಲ್ಲೆಡೆಯಿಂದ ಬಂದಿವೆ. ಸರಿಯಾಗಿ ಒಂದು ರಾತ್ರಿ 'ಸ್ವಾತಂತ್ರ್ಯ' (Freedom) ಚಲನಚಿತ್ರವನ್ನು ನಿರ್ಮಿಸುವಂತೆ ಆಲೋಚನೆಯೊಂದು ನನಗೆ ಮೂಡಿತು ಮತ್ತು ಇಂದು ಆ ಚಲನಚಿತ್ರದ ಮೂಲಕ ನಿಜವಾದ ಆಫ್ರಿಕಾ ಪ್ರಪಂಚದೊಂದಿಗೆ ಮಾತನಾಡುತ್ತಲಿದೆ.

ಜಪಾನ್‌ನಂತಹ ದೇಶದ ಭವಿಷ್ಯ ಆ ದೇಶದಲ್ಲಿ 'ಎಡಕ್ಕೂ ಅಲ್ಲ, ಬಲಕ್ಕೂ ಅಲ್ಲ, ಆದರೆ, ನೇರವಾಗಿ' ಹೋಗಲು ತಾವು ಬಯಸುವುದಾಗಿ ಹೇಳುತ್ತಿರುವ ಜನರಿಂದ ತೀರ್ಮಾನಿಸಲಾಗುತ್ತಿದೆ. ಕಳೆದ ವರ್ಷ ನನಗೆ ಟೆಲಿಫೋನ್ ಮಾಡಿದಾಗ ನಾನು ಪ್ರಧಾನಮಂತ್ರಿ ಕಿಶಿಯೊಂದಿಗೆ ಬಿಟ್ಟುದು ಅದೇ ದೈವದತ್ತವಾದ ಆಲೋಚನೆಯನ್ನು. ಇದೀಗ ಉತ್ತರ ಕೊರಿಯಾ, ಫಿಲಿಪೀನ್ಸ್, ಇಂಡೋನೇಶಿಯಾ, ಲಾವೋಸ್, ಬರ್ಮ ಮತ್ತು ಥೈಲಾಂಡ್ ಅದೇ ಆಲೋಚನೆಯನ್ನೇ ಕೈಗೆತ್ತಿಕೊಳ್ಳುತ್ತಿವೆ ಮತ್ತು ಅದನ್ನು ತಮ್ಮ ರಾಷ್ಟ್ರೀಯ ಜೀವನದ ರಚನೆಯ ಭಾಗವಾಗಿ ಮಾಡಿಕೊಳ್ಳುತ್ತಿವೆ.

ಅದು ಫ್ರಾಂಕ್ ಬಕ್‌ಮನ್‌ನ ಚಿಂತನೆಯಲ್ಲ. ನಾನು ಅಂತಹ ಅಂತರ್ದೃಷ್ಟಿಯ ಸಾಮರ್ಥ್ಯವುಳ್ಳವನಲ್ಲ. ಆತ ಪಾಲಿಸಲು ಸಿದ್ಧನಾಗಿರುವಾಗ ಯಾವನೇ ಮನುಷ್ಯನ ಮನಸ್ಸಿನೊಳಗೆ ದೇವರು ಇರಿಸಬಹುದಾದ ಆಲೋಚನೆ, ಅದು. ದೇವರು ಪ್ರಪಂಚವನ್ನು ಮುನ್ನಡೆಸಲು ಬಯಸುವ ಮಾರ್ಗ ಅದು. ಅದು ಯಾವನೇ ಮನುಷ್ಯನನ್ನು 'ಆತ' ಮುನ್ನಡೆಸಬಲ್ಲ ಮತ್ತು ಮುನ್ನಡೆಸುವ ಮಾರ್ಗ.

ಮನುಷ್ಯನೋರ್ವನ ಜೀವನದಲ್ಲಿ ದೇವರು ಕಾರ್ಯನಿರತನಾಗಿರುವ ಈ ದೈನಂದಿನ ಸಾಕ್ಷಿಗಳು, ಅದನ್ನು ಅನುಭವಿಸಿದವನಾಗಿದ್ದ ವ್ಯಕ್ತಿಯೋರ್ವನು, 'ಮನುಷ್ಯ ಜೀವನವೊಂದರ ಜ್ಞಾನ ಮತ್ತು ಬುದ್ಧಿಶಕ್ತಿ ಒಂದು ಕ್ಷಣಮಾತ್ರದಲ್ಲಿ ಪರಿವರ್ತನೆಗೊಳ್ಳುತ್ತದೆ' ಎಂದು ನುಡಿದಾಗಿನಂತೆಯೇ ನನಗೆ ಮಹತ್ವಪೂರ್ಣವೂ ಮತ್ತು ಅಗತ್ಯವೂ ಆಗಿದೆ.

* * * *



## ೯. ಅಪ್ಟನ್ ಸಿಂಕ್ಲೇರ್
**(ಜನನ ೧೮೭೮)**

[ಪಲಿಟ್ಜರ್ ಬಹುಮಾನವನ್ನು ಗಳಿಸಿದ ಮತ್ತು ಮಾನವೀಯ ವ್ಯವಹಾರಗಳಲ್ಲಿ ಸ್ವಾತಂತ್ರ್ಯ, ನ್ಯಾಯ ಮತ್ತು ಸಭ್ಯತೆಯ ಸಮರ್ಥಕನಾಗಿದ್ದ, ಯಥೇಚ್ಛವಾಗಿ ಕೃತಿಗಳನ್ನು ರಚಿಸಿದ ಅಮೆರಿಕಾದ ಓರ್ವ ಬರಹಗಾರ. ಆತನ ಕಾದಂಬರಿಗಳು ಸಾಮಾಜಿಕ ಕೇಡುಗಳ ಪ್ರಕಟಪಡಿಸುವಿಕೆಗೆ ಮೀಸಲಾಗಿವೆ. ಅಸಾಧಾರಣವಾದೊಂದು ಸೂಕ್ಷ್ಮ ಬೌದ್ಧಿಕತೆಯೊಂದಿಗೆ ಆತ ಮಾನವೀಯ ಸಮಸ್ಯೆಗಳ ಒಳಹೊಕ್ಕು ನೋಡುವ ಒಂದು ತಿಳುವಳಿಕೆಯೊಂದಿಗೆ ಮನುಷ್ಯನಿಗಾಗಿ ಸಹಾನುಭೂತಿಯನ್ನು ಸಂಯೋಜಿಸುತ್ತಾನೆ.]

**ದೇವರು ನನಗೆ ಧೈರ್ಯ, ಮನೋದಾರ್ಢ್ಯ, ಭರವಸೆ ಮತ್ತು ಪ್ರೀತಿಯನ್ನು ನೀಡಿದ**

ಇದೊಂದು ಆಧ್ಯಾತ್ಮಿಕ ವಿಶ್ವವೆಂಬುದನ್ನು ನಾನೆಂದಿಗೂ ಅನುಮಾನಿಸಿಲ್ಲ; ಮತ್ತು ಅದು ಹೇಗೆ ಹಾಗಿದೆಯೆಂಬುದನ್ನು ಮತ್ತು ದೇವರು ಹೇಗೆ ಕಾರ್ಯವೆಸಗುವನೆಂಬುದನ್ನು ನಾನು ಖಚಿತವಾಗಿ ಅರ್ಥಮಾಡಿಕೊಳ್ಳಲಾಗದಿರುವುದೇಕೆಂದರೆ ದೇವರು ಅದು ಆ ರೀತಿಯಲ್ಲಿಯೇ ಇರಬೇಕೆಂದು ಆಯ್ಕೆ ಮಾಡಿಕೊಂಡಿರಲೇಬೇಕು.

ನನ್ನ ತಾರುಣ್ಯದಲ್ಲಿ ನಾನವುಗಳನ್ನು ಸ್ಫೂರ್ತಿಯಾಗಿರಬೇಕೆಂದು ಗ್ರಹಿಸಿದ ಪ್ರಚೋದನೆಗಳನ್ನು ಅನುಭವಿಸಿದೆ. ಹೇಗೆ ಮತ್ತು ಏತಕ್ಕಾಗಿ ಅವು ಬಂದುವೆಂಬುದನ್ನು ನನಗೆ ತಿಳಿಯಲಾಗಲಿಲ್ಲ. ಆದರೆ, ಕೈಯ್ಯೊಂದು ನನ್ನನ್ನು ಮೇಲಕ್ಕೆತ್ತುತ್ತಲಿದೆ ಮತ್ತು ಮಾರ್ಗದರ್ಶನ ನೀಡುತ್ತಲಿದೆಯೇನೋ ಎಂಬಂತೆ ತೋರಿತು.

ಈಗಲೂ ಸಹ ನನ್ನ ಇಳಿವಯಸ್ಸಿನಲ್ಲಿ ನನ್ನ ತೋಟದೊಳಗೆ ಹೋಗಿ ಅಡ್ಡಾಡುತ್ತೇನೆ ಮತ್ತು ನಾನು ಬರೆಯುತ್ತಿಲಿರುವ ಹೊಸ ಪುಸ್ತಕದ ಅಧ್ಯಾಯವೊಂದು ನನ್ನ ಮನಸ್ಸಿನಲ್ಲಿ ತಾನಾಗಿಯೇ ಸುರುಳಿಬಿಚ್ಚಿಕೊಳ್ಳುತ್ತದೆ. ಅದು ಹೇಗೆ ಜರುಗುತ್ತದೆ ಎಂಬುದನ್ನು ನಾನು ಹೇಳಲಾರೆ. ಆದರೆ, ಅದರ ಬಗ್ಗೆ ಏನೂ ಮಾಡುವಂತಿಲ್ಲ; ಮತ್ತು ಅದು ಯಾವಾಗಲೂ ನನಗೊಂದು ಅದ್ಭುತವಾದ ಸಂಗತಿಯಾಗಿದೆ. ರಚನೆಯ ಎಲ್ಲ ಸಮಸ್ಯೆಗಳು ಉತ್ತರಿಸಲ್ಪಡುತ್ತವೆ. ಮತ್ತು ನಾನು ಮಾಡ

ಬೇಕಾದುದೆಲ್ಲವೂ ಕೇವಲ ಅವುಗಳನ್ನು ನಾನು ಬರೆದ ಮುಗಿಸುವವರೆಗೆ ಪದಗಳನ್ನು ನೆನಪಿಟ್ಟುಕೊಳ್ಳುವುದು ಮಾತ್ರ. ಬಾಳಿನ ನಿಜವಾದ ಸಾರಾಂಶವಾಗಿರುವ ಸೃಷ್ಟಿಯ ಕಾರ್ಯವೊಂದನ್ನು ನಾನು ನೆರವೇರಿಸುತ್ತಿದ್ದೇನೆ ಎಂಬುದಷ್ಟನ್ನು ಮಾತ್ರ ನಾನು ಹೇಳಬಲ್ಲೆ ಮತ್ತು ಖಾತ್ರಿಯಾಗಿರಬಲ್ಲೆ.

ನಾನು ಕ್ಯಾಲಿಫೋರ್ನಿಯಾದ ಗೌರ್ನರ್ ಪದವಿಗಾಗಿ ೧೯೩೪ರಲ್ಲಿ ಸ್ಪರ್ಧಿಸುತ್ತಿದ್ದಾಗ ನನ್ನ ಕೆಲವರು ವಿರೋಧಿಗಳು ನನ್ನನ್ನು 'ನಾಸ್ತಿಕ'ನೆಂದು ಕರೆಯುವುದನ್ನು ರಾಜಕೀಯವಾಗಿ ಉಪಯುಕ್ತವಾದುದೆಂದು ಭಾವಿಸಿದರು. ಈ ಆರೋಪಗಳಿಂದ ಓರ್ವ ಮುದಿವಯಸ್ಸಿನ ಸಭ್ಯವ್ಯಕ್ತಿ ನಾನದನ್ನು ಭರ್ತಿ ಮಾಡಬೇಕೆಂದು ಒತ್ತಾಯಿಸುತ್ತ ದೀರ್ಘವಾದ ಪ್ರಶ್ನಾವಳಿಯೊಂದನ್ನು ನನಗೆ ಕಳುಹಿಸಲು ಪ್ರೇರಿತನಾದ. ನಾನು ಆತನನ್ನು ತೃಪ್ತಿಪಡಿಸಲು ಸಂತೋಷಪಟ್ಟೆ.

'ನೀನು ದೇವರಲ್ಲಿ ನಂಬಿಕೆ ಹೊಂದಿರುವೆಯಾ?' ಎಂಬುದು ಆತನ ಮೊದಲ ಪ್ರಶ್ನೆಯಾಗಿತ್ತು.

'ಹೌದು' ಎಂಬುದು ನನ್ನ ಉತ್ತರವಾಗಿತ್ತು.

'ದೇವರನ್ನು ವಿವರಿಸು' ಎಂದು ಮುಂದೆ ಆತ ಪ್ರಶ್ನಿಸಿದ.

'ಅನಂತವನ್ನು ವಿವರಿಸಲಾಗುವುದಿಲ್ಲ' ಎಂದು ನಾನು ಉತ್ತರ ನೀಡಿದೆ.

ಈ ಉತ್ತರ ನನ್ನ ಪತ್ರವ್ಯವಹಾರಿಗೆ ತೃಪ್ತಿದಾಯಕವಾಗಿಲ್ಲದಿರಬಹುದೆಂದು ನಾನು ತಿಳಿದಿದ್ದೆ. ಆದರೆ, ದೇವರು ಚೈತನ್ಯ ಮತ್ತು ಅನಂತನಾಗಿರುವುದರಿಂದ ಆತ ಪ್ರಶ್ನಾವಳಿಯೊಂದರಲ್ಲಿ ಸಂಕ್ಷಿಪ್ತವಾಗಿ ವಿವರಿಸಬಹುದಾದ ಆಯಾಮಗಳನ್ನು ಹೊಂದಿರುವುದಿಲ್ಲವೆಂಬುದು ನನಗೆ ಸ್ಪಷ್ಟವಾಗಿ ಗೋಚರಿಸಿತು. ಈ ಭೂಮಿಯ ಮೇಲೆ ನನ್ನನ್ನಿರಿಸಿರುವ ಮತ್ತು ಅರ್ಥಮಾಡಿಕೊಳ್ಳಲು ಮತ್ತು ತಿಳುವಳಿಕೆಗಾಗಿ ಅನ್ವೇಷಿಸಲು ಶಕ್ತಿಯನ್ನು ನೀಡಿರುವ ದೇವರು ಅವನ್ನು ನಾನು ಬಳಸಿಕೊಳ್ಳಬೇಕೆಂಬ ಉದ್ದೇಶ ಹೊಂದಿರುವನೆಂದು ನಾನು ಗ್ರಹಿಸಿದೆ.

ನಾನು ನಂಬಿದ್ದಂತೆ ಬಡತನ ಮತ್ತು ಯುದ್ಧ, ದೇವರಮಕ್ಕಳ ವಿನಾಶಕಾರಿಗಳಲ್ಲದ ಪ್ರಪಂಚವೊಂದರ ದೈವದತ್ತ ಕಲ್ಪನೆಯನ್ನು ನಾನು ಹೊಂದಿದ್ದೆ ಮತ್ತು ನನ್ನ ಸಹಮಾನವರಿಗೆ ಆ ಕಲ್ಪನೆಯನ್ನು ನಿಜವಾದದ್ದನ್ನಾಗಿ ಮಾಡಲು ನಾನು ಶ್ರಮಿಸುತ್ತಿದ್ದೆ. ಅನೇಕ ಬಾರಿ ನನ್ನ ಪ್ರಯತ್ನಗಳಲ್ಲಿ ನಾನು ಶೋಚನೀಯವಾಗಿ ವಿಫಲನಾದೆ. ಬಡತನ, ಸಾಲ, ಅನಾರೋಗ್ಯ, ದುಃಖ ಬಂದೇ ಬಂದುವು. ಕೆಲವೊಮ್ಮೆ ನನ್ನನ್ನು ಹಾಸ್ಯಾಸ್ಪದಗೊಳಿಸಿಕೊಂಡಿರುವೆನೆಂದು ನಾನು ಭಾವಿಸಿದೆ, ಕೆಲವೊಮ್ಮೆ ನಾನು ಜೋಬ್‌ನ ಅಸಹಿಷ್ಣು ಸಲಹೆಗಾರರನ್ನು ಅನುಕರಣೆ ಮಾಡಲು ಮತ್ತು 'ಆತ' ನನ್ನನ್ನು ನಡೆಸಿಕೊಂಡ ರೀತಿಗಾಗಿ ದೇವರನ್ನು ದೂಷಿಸಲು ನಾನು ಪ್ರಲೋಭನಗೊಂಡೆ. ಈ ಮನಃಸ್ಥಿತಿಯಲ್ಲಿ ಇದು ಆಧ್ಯಾತ್ಮಿಕವಾಗಿರುವುದಾಗಿ ನಾನು



ನಂಬಿರುವೆನೆಂದು ಹೇಳಲು ಮುಂದೆಂದೂ ಸಾಕಷ್ಟು ಸಾಮರ್ಥ್ಯವಿರಲಿಲ್ಲ; ನನ್ನಷ್ಟಕ್ಕೆ ಮಾತುಗಳನ್ನು ವಾಸ್ತವವಾದುವುಗಳನ್ನಾಗಿ ನಾನು ಮಾಡಿಕೊಳ್ಳಬೇಕಾಗಿತ್ತು, ನನ್ನದೇ ಆದ ಕಳವಳಗೊಂಡ ಜೀವನದಲ್ಲಿ ನಾನವುಗಳನ್ನು ಪರಿಗಣನೆಗೆ ಬರುವುವುಗಳನ್ನಾಗಿ ಮಾಡಿಕೊಳ್ಳಬೇಕಿತ್ತು, ಪ್ರಾರ್ಥನೆಯ ಬಗೆಗೆ ನಾನೇನನ್ನು ನಂಬಿದ್ದೆನೋ ಅದನ್ನು ನಾನು ಪುನಃ ಪರೀಕ್ಷಿಸಬೇಕಾಗಿತ್ತು. 'ಕೆಲಸ ಮಾಡುವುದೇ ಪ್ರಾರ್ಥನೆ ಮಾಡಿದಂತೆ' ಎಂಬ ಡಾಮಿನಿಕ್ ಪಂಥದ ಪ್ರಾರ್ಥನೆಯನ್ನು ನಾನು ಕಲಿತಿದ್ದೆ ಮತ್ತು ನಾನು ಕೆಲಸ ಮಾಡಿದೆ; ಆದರೆ, ಅದು ಅಗತ್ಯವಾದಷ್ಟಿರಲಿಲ್ಲ. ಇದೀಗ ನಾನು ದೇವರನ್ನು ನನಗೆ ಧೈರ್ಯ, ದೃಢನಿರ್ಧಾರ ಮತ್ತು ಭರವಸೆಯನ್ನು ನೀಡುವಂತೆ ಕೇಳಿದೆ– ಮತ್ತು ಗಮನಿಸಿ, ಯಾವುದಿಲ್ಲದಿದ್ದಲ್ಲಿ ಮನುಷ್ಯರು ಮೂಕ, ಹೊಡೆದುಕೊಂಡು ಹೋಗಲಾದ ಜಾನುವಾರುಗಳಂತೆ ಇರುವರೋ ಅಂತಹ ಈ ವಿಷಯಗಳನ್ನು, ಮನಸ್ಸು ಮತ್ತು ಚೈತನ್ಯದ ಅದ್ಭುತವಾದ ಕೊಡುಗೆಗಳನ್ನು ಹೊಂದಿದ್ದೆ.

ಮತ್ತು ನನ್ನ ಪತ್ನಿಯ ವಿಷಯದಲ್ಲಿಯೂ ಅದು ಹಾಗೆಯೇ ಇತ್ತು. ನನಗಾಗಿ ಮನೆಯೊಂದನ್ನು ನಿರ್ಮಿಸಿ ಅದನ್ನು ಕಾಪಾಡುತ್ತ, ನನ್ನ ಹಸ್ತಪ್ರತಿಗಳನ್ನು ಪರಿಷ್ಕರಿಸುತ್ತ ಮತ್ತು ಅಷ್ಟೊಂದು ಅವಸರವಾಗಿ ಬರೆಯದಿರುವಂತೆ ಒತ್ತಾಯಿಸುತ್ತ, ನನ್ನನ್ನು ಸಾಲದಿಂದ ರಕ್ಷಿಸುತ್ತ ಅಥವಾ ಹಾಗೆ ಮಾಡಲು ಪ್ರಯತ್ನಿಸುತ್ತ, ಪ್ರತಿಯೋರ್ವ ಸುಧಾರಕ ಮತ್ತು ಸಾರ್ವಜನಿಕ ವ್ಯಕ್ತಿಯ ವಿಷಯದಲ್ಲಿ ಮುತ್ತಿಗೆ ಹಾಕುವ ಬಂದಳಿಕೆಗಳು ಮತ್ತು ವಂಚಕರನ್ನು ದೂರವಿರಿಸುತ್ತ ಎರಡು ದಶಕಗಳವರೆಗೆ ಹಲವಾರು ವ್ಯಕ್ತಿಗಳ ಕಾರ್ಯವನ್ನು ಮಾಡುತ್ತ ಆಕೆ ನನ್ನ ಮಗ್ಗುಲಲ್ಲಿ ಸ್ಥಿರವಾಗಿ ನಿಂತಳು.

ಬಳಿಕ ಆಕೆಯ ಆರೋಗ್ಯ ಮಿತಿಮೀರಿದ ಕೆಲಸದ ಪರಿಣಾಮವಾಗಿ ಏರುಪೇರಾಗಲಾರಂಭಿಸಿತು ಮತ್ತು ಆಕೆ ನನ್ನನ್ನು ಅಡಗುದಾಣವೊಂದಕ್ಕೆ ಕರೆದೊಯ್ದಳು ಮತ್ತು ತನ್ನದೇ ಆದ ಆತ್ಮದ ಅನ್ವೇಷಣೆಯಲ್ಲಿ ತೊಡಗಿದಳು. ಆಕೆ ನಮ್ಮ ಕಾಲದ ಪ್ರಮುಖ ವಿಜ್ಞಾನಿಗಳನ್ನು ಅಧ್ಯಯನ ಮಾಡಿದಳು: ಜೀನ್ಸ್ ಮತ್ತು ಎಡ್ಡಿಂಗ್‌ಟನ್, ವೈಟ್‌ಹೆಡ್ ಮತ್ತು ಕ್ಯಾರೆಲ್, ಅವರೆಲ್ಲರೂ ಧಾರ್ಮಿಕ ವ್ಯಕ್ತಿಗಳಾಗಿದ್ದರು. ಮಾನವ ಆತ್ಮದ ರಹಸ್ಯಗಳನ್ನು ಕುರಿತಂತೆ ಬೆಳಕನ್ನು ಚೆಲ್ಲಬಲ್ಲ ಗೆರಾಲ್ಡ್ ಹೆರಾಲ್ಡ್‌ನಿಂದ ಶ್ರೀಮತಿ ಎಡ್ಡಿಯವರೆಗೆ ಪ್ರತಿಯೋರ್ವರನ್ನೂ ಓದಿದಳು. ಆಕೆ ವಿಲಿಯಂ ಮೆಕ್ಡೂಗಲ್ ಮತ್ತು ಜೆ. ಬಿ. ರ್‍ಹೈನ್ ಮತ್ತು ಆಲ್ಬರ್ಟ್ ಐನ್‌ಸ್ಟೀನ್‌ರನ್ನು ಭೇಟಿ ಮಾಡಿದಳು. ಇವರಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ದೇವರಲ್ಲಿ ಆಳವಾದ ನಂಬಿಕೆಯನ್ನು ಹೊಂದಿರುವರೆಂದು ಅರಿತಿದ್ದು, ಅವರೊಂದಿಗೆ ಈ ಪ್ರಶ್ನೆಗಳನ್ನು ಚರ್ಚಿಸಿದಳು.

ಆಕೆ ಪ್ರಾರ್ಥನೆಯ ಉತ್ತಮವಾದ ವಿಧಾನವೊಂದನ್ನು ಕಲಿತಳು; ಮತ್ತು ಆಕೆ ಹಲವಾರು ಉಪಯುಕ್ತವಾದ ರೀತಿಗಳಲ್ಲಿ ತನ್ನದೇ ಮನಸ್ಸನ್ನು ನಿಯಂತ್ರಿಸಲು ಕಲಿತಳು; ಆಕೆ ತನ್ನ ಆರೋಗ್ಯವನ್ನು ಮತ್ತೆ ಗಳಿಸಿದಳು ಮತ್ತು ಅದನ್ನು ಕಾಪಾಡಿಕೊಳ್ಳ ಬಲ್ಲವಳಾಗಿದ್ದಳು. ಆದರೆ, ಆಕೆ ಮತ್ತೆ ಮತ್ತೆ ಯಾವಳೇ ಓರ್ವ ಮಹಿಳೆ ಮಾಡಬಹು ದಾದುದಕ್ಕಿಂತಲೂ ಹೆಚ್ಚಾಗಿ ಕೆಲಸವನ್ನು ಮಾಡಲು ಪ್ರಯತ್ನಿಸಿದಳು.

ಒಂದು ವರ್ಷ ಅಥವಾ ಹೆಚ್ಚು ಸಮಯದ ಹಿಂದೆ ಆಕೆ, ವೈದ್ಯರು 'ರಕ್ತಸಂಚಯದಿಂದಾದುದೆಂದು' ಕರೆಯುವ ಹೃದಯಾಘಾತಕ್ಕೊಳಗಾದಳು. ಆಕೆ ಸಹಿಸಲಸಾಧ್ಯವಾದ ನೋವನ್ನನುಭವಿಸಿದಳು ಮತ್ತು ಆಕೆ ಸಾಯುತ್ತಲಿರುವಳೆಂದು ನಾನು ಭಾವಿಸಿದೆ. ಆಕೆಯೂ ಹಾಗೆಯೇ ಭಾವಿಸಿದಳು ಮತ್ತು ಆಕೆ ಏಕಾಂಗಿಯಾಗಿ ನನ್ನನ್ನು ಯಾವ ಗತಿಗೆ ಬಿಟ್ಟುಹೋಗಲಿರುವಳೋ ಎಂಬುದನ್ನು ಆಲೋಚಿಸಲು ಸಹಿಸದಾದಳು.

ಆ ವಿಷಮಸ್ಥಿತಿಯಲ್ಲಿ ನಾನು ಯಾವುದೇ ದೇವತಾಶಾಸ್ತ್ರಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ವಾದ ಮಾಡಲು ತೊಡಗಲಿಲ್ಲ. ನಾನು ದೇವತಾಶಾಸ್ತ್ರಜ್ಞರೊಂದಿಗೆ ದೇವರ ಕರಾರುವಾಕ್ಕಾದ ಸ್ವರೂಪ ಮತ್ತು ಅರ್ಥವಿವರಣೆಯನ್ನು ಚರ್ಚಿಸಲಿಲ್ಲ.

ನಾನು ಪ್ರಾರ್ಥನೆ ಮಾಡಿದೆ. ಮತ್ತೆ, ಮತ್ತೆ, ಮತ್ತೆ ನಾನು ಕೇವಲ ಒಂದೇ ವಿಷಯವನ್ನು ಪ್ರಾರ್ಥಿಸಿದೆ. 'ಪ್ರಿಯದೇವರೆ, ಆಕೆಗೆ ಸಹಾಯ ಮಾಡು! ಪ್ರಿಯ ದೇವರೆ! ಆಕೆಯನ್ನು ಕಾಪಾಡು!'

ಆ ಭಯಾನಕವಾದ ರಾತ್ರಿಯಿಡೀ ನಾನು ಏಕಾಂಗಿಯಾಗಿ ಮತ್ತು ನಿರಂತರವಾಗಿ ಪ್ರಾರ್ಥಿಸಿದೆ. ನಾವೊಂದು ದೂರವಾದ ಸ್ಥಳದಲ್ಲಿದ್ದೆವು ಮತ್ತು ಅಲ್ಲಿ ಯಾವನೇ ವೈದ್ಯನಿರಲಿಲ್ಲ, ನಮಗೆ ಸಹಾಯ ಮಾಡಲು ಯಾರೂ ಇರಲಿಲ್ಲ. ತಿಳಿಯುವವರಾರೂ ಇರಲಿಲ್ಲ. ಇದ್ದವನು ದೇವರೊಬ್ಬನೇ. ಪ್ರಾರ್ಥನೆ ಮಾಡಿದ ಫ್ರೆಂಚ್ ಜನಾಂಗದವನು ಕಥೆಯನ್ನು ಪ್ರಾಯಶಃ ನೀವು ಬಲ್ಲಿರಿ, 'ಪ್ರಿಯ ದೇವರೆ, ದೇವರೊಬ್ಬನಿರುವುದಾದರೆ, ನನ್ನ ಆತ್ಮವನ್ನು ಕಾಪಾಡು, ನಾನು ಆತ್ಮವನ್ನು ಹೊಂದಿರುವುದಾದರೆ.' ನಾನು ಆತನ ಉದಾಹರಣೆಯನ್ನು ಅನುಸರಿಸಲಿಲ್ಲ. ನಾನು ಯಾವುದೇ 'ರೇ'ಗಳನ್ನು ಮುಂದಿರಿಸಲಿಲ್ಲ.

ಈ ಪ್ರಾರ್ಥನೆಗಳು ಆಕೆಯ ಪ್ರಾಣವನ್ನು ಕಾಪಾಡಿದುವೆಂದು ನನ್ನ ಪತ್ನಿ ಘೋಷಿಸಿದಳು. ಸಹಜವಾಗಿಯೇ, ಆಕೆ ನನ್ನ ಪ್ರಾರ್ಥನೆಗಳನ್ನು ಆಲಿಸಿದಳೆಂದು ಮತ್ತು ನನ್ನ ಪ್ರೀತಿ ಮತ್ತು ಅಗತ್ಯದ ಸಾಫಲ್ಯ ಬದುಕಬೇಕೆಂಬ ಆಕೆಯ ನಿರ್ಧಾರವನ್ನು ಪುನರುಜ್ಜೀವಿತಗೊಳಿಸಿತೆಂದು ಮತ್ತು ನೋವನ್ನು ಸಹಿಸಲು ಆಕೆಯ ಸಾಮರ್ಥ್ಯವನ್ನು ಅಧಿಕಗೊಳಿಸಿತೆಂದು ಸಂದೇಹವಾದಿಗಳು ನುಡಿಯುತ್ತಾರೆ. ನಾನು ಸಂದೇಹವಾದಿ



ಗಳೊಂದಿಗೆ ವಾದಮಾಡುವುದಿಲ್ಲ. 'ಆತ' ಇತರ ಎಲ್ಲ ವಸ್ತುಗಳನ್ನೂ– ಮಾನವ ಮನಸ್ಸು ಅಷ್ಟೇ ಅಲ್ಲದೆ, ಮಾನವ ದೇಹವನ್ನು– ಮಾಡಿದಂತೆಯೇ ದೇವರು ಮನೋವಿಜ್ಞಾನವನ್ನೂ ಮಾಡಿದನೆಂದು ನಾನು ಖಚಿತವಾಗಿ ನುಡಿಯುತ್ತೇನೆ ಮತ್ತು 'ಆತ' ಕೆಲಸ ಮಾಡುವ ವಿಧಾನ ಅವು ಕೆಲಸ ಮಾಡುವ ವಿಧಾನವೇ ಆಗಿದೆ. ಪ್ರಾರ್ಥನೆ ನಿಮಗೆ ಧೈರ್ಯ, ಭರವಸೆ ಮತ್ತು ಪ್ರೀತಿಯನ್ನು ನೀಡುವುದಾದರೆ, ಆಗ ನಾನು ಹೇಳುವುದೇನೆಂದರೆ 'ದೇವರ ದಯೆ!'

* * * *

# ೧೦. ಶ್ರೀ ರಮಣ ಮಹರ್ಷಿ
## (ಕ್ರಿ.ಶ. ೧೮೭೯–೧೯೫೦)

[ಹದಿಮೂರು ವರ್ಷದ ಬಾಲಕ ವೆಂಕಟರಮಣ ವೈಯಕ್ತಿಕ ಅನುಭವದ ಮೂಲಕ ಸಾಯುವುದೆಂದರೇನೆಂಬುದನ್ನು ತಿಳಿಯಬಯಸಿದ. ದೇಹ ಸೆಡೆಯುವುದನ್ನು ಕಲ್ಪಿಸಿಕೊಳ್ಳುತ್ತ ತನ್ನದಾದುದೆಲ್ಲವೂ 'ಸತ್ತು' ಹೋದಾಗಲೂ ತನ್ನಲ್ಲಿ ಯಾವುದೋ ಒಂದು ಜೀವಂತವಾಗಿತ್ತೆಂದು ಆತ ಭಾವಿಸಿದ ಮತ್ತು ಆ ಯಾವುದೋ ಒಂದು ತನ್ನ 'ಅಹಂ' ಎಂದು ಆತ ಕಂಡುಕೊಂಡ. ಅದರೊಂದಿಗೆ ಮುಖಾಮುಖಿಯಾಗುವುದಕ್ಕಾಗಿ ಆತ ಮನೆಯಿಂದ ಪಲಾಯನಮಾಡಿದ ಮತ್ತು ಅರುಣಾಚಲದ ಗುಹೆಗಳಲ್ಲಿ ಆಶ್ರಯವನ್ನು ಕಂಡುಕೊಂಡ. ದೇಹದ ಬೇಡಿಕೆಗಳು ಮತ್ತು ಅದರ ಯಾತನೆಗಳ ಗಮನವಿಲ್ಲದೆ ವರ್ಷಗಳ ಜಾಗರಣೆಯ ಬಳಿಕ ಆತ ತನ್ನ 'ಅಹಂ' ಅನ್ನು ಸ್ವಾಧೀನಪಡಿಸಿಕೊಳ್ಳಲು ಸಮರ್ಥನಾದ. 'ಜೀವನ್ಮುಕ್ತ'ನಾಗಿ ಹೊರಬಂದ ಆತ ಅಲ್ಲಿಂದ ಮುಂದೆ ಎಂದೆಂದಿಗೂ 'ಅದ್ವೈತದ ಅನುಭವ'ದ ಆಳುಗಳಲ್ಲಿ ಮುಳುಗಿದವನಾದರೂ ತನ್ನ ಮೌನನಗೆಯ ವಾಗ್ಝರಿಯ ಮೂಲಕ ಪ್ರಾಮಾಣಿಕನಾದ ಸಾಧಕನಿಗೆ ಉಪದೇಶ ನೀಡುತ್ತ 'ಸಹಜಸಮಾಧಿ'ಯಲ್ಲಿ ನೆಲೆಸಿದ. ಪ್ರಜ್ವಲಿಸುವ ಮುಖದಲ್ಲಿ ಮೂರ್ತಿಮತ್ತಾಗಿರುವ ವೇದಾಂತದ ಜ್ಞಾನದ ರಹಸ್ಯಗಳನ್ನು ಮತ್ತು ಅತ್ಯಂತ ಉಚಿತವಾದ ರೀತಿಯಲ್ಲಿ 'ಭಗವಾನ್' ಎಂದು ಆರಾಧಿಸಲಾಗುವ ಮಹರ್ಷಿಯ ಸರಳವಾದ ವಿಧಾನಗಳನ್ನು ಅರಿಯಲು ಆತನಲ್ಲಿಗೆ ತೆರಳಿದವರಿಗೆ ಜ್ಞಾನೋದಯವನ್ನುಂಟುಮಾಡುವ ಒಂದು ಆಧ್ಯಾತ್ಮಿಕ ಅಸಾಧಾರಣ ಶಕ್ತಿಯಾಗಿ ಕಾರ್ಯ ನಿರ್ವಹಿಸುತ್ತ ತಿರುವಣ್ಣಾಮಲೈಯಲ್ಲಿನ ಆತನ ನಿವಾಸ ಒಂದು ಆಶ್ರಮವಾಗಿ ಪರಿಣಮಿಸಿತು.]

### ಮಹಾ ಜ್ಞಾನೋದಯ

ಆತ ಕೇವಲ ಹದಿನೇಳು ವರ್ಷದವನಾಗಿರುವಾಗ ಅರುಣಾಚಲದ ಋಷಿ ತನ್ನ ತಂದೆ ಪ್ರಭು ಅರುಣಾಚಲನನ್ನು ಹುಡುಕುವುದಕ್ಕಾಗಿ ತನ್ನ ಮನೆಯನ್ನು ತೊರೆದ. ೧೮೯೬ರ ಸೆಪ್ಟೆಂಬರ್ ೧ರಂದು (ಹೀಗೆ) ಪ್ರಾರ್ಥಿಸುತ್ತ ಆತ 'ಆತ'ನಿಗೆ ವರದಿ ಮಾಡಿಕೊಂಡ:



**ಓ ಪ್ರಭು ನಿನ್ನ ಕರೆಗೆ ವಿಧೇಯನಾಗಿ**
**ತೊರೆದೆಲ್ಲವನ್ನೂ ಇದೋ ಬಂದಿರುವೆನಿಲ್ಲಿಗೆ ನಾನು,**
**ವರವಾವುದನೂ ಕೇಳುವುದಿಲ್ಲ ನಾನು, ಕೊರಗುವುದಿಲ್ಲ ನಷ್ಟವಾವುದಕೂ,**
**ತೆಗೆದುಕೊ ನನ್ನ ಮಾಡಿಕೊ ನನ್ನ ನಿನ್ನವನನ್ನ.**

ಆ ದಿನದಿಂದ ೧೯೫೦ರಲ್ಲಿ ತಮ್ಮ 'ವಿದೇಹಮುಕ್ತಿ'ಯವರೆಗೆ ಭಗವಾನ್ ಶ್ರೀರಮಣ 'ನಿರ್ವಿಕಲ್ಪ ಸಮಾಧಿ'ಯಲ್ಲಿದ್ದು ದುಃಖಕ್ಕೀಡಾದ ಮಾನವ ಜನಾಂಗಕ್ಕೆ ಒಂದು ಮಾರ್ಗದರ್ಶಿ ದೀಪವಾಗಿದ್ದರು.

೧೮೯೬ರಲ್ಲಿ ಮನೆಯಲ್ಲಿ ಬಿಟ್ಟುಹೋದ ಒಂದು ಚೀಟಿಯಲ್ಲಿ ಅವರು ಹೀಗೆ ಬರೆದರು: ಆತನ ಆದೇಶಕ್ಕನುಗುಣವಾಗಿ ನಾನು ನನ್ನ ತಂದೆಯನ್ನು ಹುಡುಕುವುದಕ್ಕಾಗಿ ಹೊರಟಿದ್ದೇನೆ. ನಾನು ಈ ದಿನ ವಾಸ್ತವವಾಗಿ ಒಂದು ಪುಣ್ಯಕರವಾದ ಸಾಹಸದಲ್ಲಿ ತೊಡಗಿದ್ದೇನೆ. ಆದ್ದರಿಂದ ಈ ಕಾರ್ಯಕ್ಕಾಗಿ ಯಾರೊಬ್ಬರೂ ವ್ಯಸನಪಡುವ ಮತ್ತು ಈ ನನ್ನನ್ನು ಹುಡುಕುವ ಅಗತ್ಯವಿಲ್ಲ. ನನ್ನ ಹುಡುಕಾಟಕ್ಕಾಗಿ ಯಾವುದೇ ಹಣವನ್ನು ಖರ್ಚು ಮಾಡುವ ಅಗತ್ಯವಿಲ್ಲ.

ಅನಂತರ ಅವರ ಭಕ್ತರು ಮಹಾಪರಿವರ್ತನೆ ಅವರಿಗೆ ಬಂದುದು ಹೇಗೆಂದು ಪ್ರಶ್ನಿಸಿದಾಗ ಭಗವಾನ್ (ಹೀಗೆ) ಉತ್ತರ ನೀಡಿದರು:

"೧೮೯೬ರ ಮಧ್ಯಭಾಗದಲ್ಲಿ ನಾನು ಮಧುರೆಯನ್ನು ಶಾಶ್ವತವಾಗಿ ತೊರೆಯುವುದಕ್ಕೆ ಮುಂಚಿತವಾಗಿ ನನ್ನ ಜೀವನದಲ್ಲಿ ಮಹಾಬದಲಾವಣೆ ಜರುಗಿತು. ಅದು ತೀರ ಅನಿರೀಕ್ಷಿತವಾಗಿತ್ತು.

"ಒಂದು ದಿನ ನನ್ನ ದೊಡ್ಡಪ್ಪನ ಮನೆಯ ಮೊದಲ ಮಹಡಿಯಲ್ಲಿ ನಾನು ಏಕಾಂಗಿಯಾಗಿ ಕುಳಿತಿದ್ದೆ. ನಾನು ನನ್ನ ಮಾಮೂಲಿನ ಒಳ್ಳೆಯ ಆರೋಗ್ಯದಲ್ಲಿದ್ದೆ.

"ಆದರೆ ಒಂದು ಅನಿರೀಕ್ಷಿತವಾದ ಮತ್ತು ಸಂದೇಹಾಸ್ಪದವಲ್ಲದ ಸಾವಿನ ಭಯ ನನ್ನನ್ನು ವಶಪಡಿಸಿಕೊಂಡಿತು. ನಾನು ಸಾಯಲಿರುವೆನೆಂದು ಭಾವಿಸಿದೆ ಮತ್ತು ಕೂಡಲೇ ನಾನೇನು ಮಾಡಬೇಕೆಂದು ಆಲೋಚಿಸತೊಡಗಿದೆ.

"ನಾನು ಯಾರೊಬ್ಬರನ್ನೂ, ವೈದ್ಯ, ಸ್ನೇಹಿತ ಅಥವಾ ಹಿರಿಯನನ್ನು, ಸಲಹೆ ಕೇಳಲಿಲ್ಲ. ಸಮಸ್ಯೆಯನ್ನು ಆಗ ಮತ್ತು ಅಲ್ಲಿಯೇ ನಾನೇ ಪರಿಹರಿಸಿಕೊಳ್ಳ ಬೇಕಾಗಿತ್ತೆಂದು ನಾನು ಭಾವಿಸಿದೆ.

"ಸಾವಿನ ಭಯದ ಆಘಾತ ಆಕ್ಷಣವೇ ನನ್ನನ್ನು ಅಂತರ್ವೀಕ್ಷಕನನ್ನಾಗಿ ಅಥವಾ ಅಂತರ್ಮುಖಿಯನ್ನಾಗಿ ಮಾಡಿತು. ಮನಸ್ಸಿನಲ್ಲಿ ಅಂದರೆ ಮಾತುಗಳನ್ನು ಉಚ್ಚರಿಸದೆ ನನಗೆ ನಾನೇ ಹೇಳಿಕೊಂಡೆ: ಇದೀಗ ಮರಣ ಸಮೀಪಿಸಿದೆ. ಅದರ ಅರ್ಥವೇನು? ಸಾಯುತ್ತಲಿರುವವನು ಯಾರು?

“ಈ ದೇಹ ಸಾಯುತ್ತದೆ. ಆಕ್ಷಣವೇ ನಾನು ಸನ್ನಿವೇಶವನ್ನು ನಾಟಕೀಯವಾಗಿ ಪರಿವರ್ತಿಸಿದೆ. ನಾನು ನನ್ನ ಅಂಗಗಳನ್ನು ಚಾಚಿದೆ ಮತ್ತು ದೇಹದ ಸೆಡೆತವು ಬಂದೊದಗಿದೆಯೆಂಬಂತೆ ಅವುಗಳನ್ನು ಹಿಡಿದಿರಿಸಿದೆ.

“ನಾನು ನನ್ನ ಉಸಿರನ್ನು ತಡೆಹಿಡಿದೆ ಮತ್ತು ಯಾವುದೇ ಶಬ್ದವು ಹೊರಬರದಂತಿರುವುದಕ್ಕಾಗಿ ತುಟಿಗಳನ್ನು ಒಟ್ಟಿಗೆ ಬಿಗಿಯಾಗಿ ಅದುಮುತ್ತ ನನ್ನ ಬಾಯನ್ನು ಮುಚ್ಚಿಕೊಂಡೆ.

“ ‘ಸರಿ ಹಾಗಿದ್ದರೆ’ ನನಗೆ ನಾನೇ ಹೇಳಿಕೊಂಡೆ. ‘ಈ ದೇಹ ಸತ್ತಿದೆ. ಅದನ್ನು ಜಡವಾಗಿ ಸ್ಮಶಾನಕ್ಕೆ ಕೊಂಡೊಯ್ಯಲಾಗುತ್ತದೆ ಮತ್ತು ಅಲ್ಲಿ ಸುಟ್ಟು ಬೂದಿ ಮಾಡಲಾಗುತ್ತದೆ. ಆದರೆ, ದೇಹದ ವಿನಾಶದೊಂದಿಗೆ ನಾನು ಸತ್ತಿರುವೆನೆ?’

‘ದೇಹ’ ‘ನಾನೆ?’ ಈ ದೇಹ ಮೌನವಾಗಿದೆ ಮತ್ತು ಜಡವಾಗಿದೆ. ಆದರೆ, ನಾನು ಈಗಲೂ ನನ್ನ ವ್ಯಕ್ತಿತ್ವದ ಪೂರ್ಣ ಶಕ್ತಿಯ ಮತ್ತು ದೇಹದಿಂದ ಪ್ರತ್ಯೇಕವಾಗಿರುವಂತೆ ನನ್ನೊಳಗೆ ‘ನಾನು’ ಎಂಬ ಧ್ವನಿಯ ಅರಿವುಳ್ಳವನಾಗಿದ್ದೇನೆ.

‘ಭೌತಿಕ ದೇಹ ಸಾಯುತ್ತದೆ, ಆದರೆ, ಅದನ್ನು ಮೀರಿರುವ ಚೈತನ್ಯವನ್ನು ಸಾವು ಮುಟ್ಟಲಾರದು. ಆದ್ದರಿಂದ ನಾನು ಸಾವಿಲ್ಲದ ಚೈತನ್ಯ!’

“ಇದೆಲ್ಲವೂ ಸಹ ಬೌದ್ಧಿಕ ಕಸರತ್ತುಗಳ ಒಂದು ಚಮತ್ಕಾರವಾಗಿರಲಿಲ್ಲ. ಆದರೆ, ಜೀವಂತ ಸತ್ಯದಂತೆ ಸುಸ್ಪಷ್ಟವಾಗಿ ನನ್ನ ಮುಂದೆ ಮಿಂಚಿನಂತೆ ಬಂದಿತು. ಅದನ್ನು ಹೆಚ್ಚುಕಡಿಮೆ ಯಾವುದೇ ವಾದವಿಲ್ಲದೆ ತಕ್ಷಣವೇ ನಾನು ಗಮನಿಸಿದೆ.

“ ‘ನಾನು’ ಏನೋ ಒಂದು ಅತ್ಯಂತ ವಾಸ್ತವವಾಗಿತ್ತು, ಆ ಸ್ಥಿತಿಯಲ್ಲಿ ಏಕೈಕ ವಾಸ್ತವವಸ್ತುವಾಗಿತ್ತು ಮತ್ತು ನನ್ನ ದೇಹದೊಂದಿಗೆ ಸಂಬಂಧ ಹೊಂದಿದ್ದ ಎಲ್ಲ ಪ್ರಜ್ಞಾಪೂರ್ಣ ಚಟುವಟಿಕೆ ಅದರ ಮೇಲೆ ಕೇಂದ್ರಿತವಾಗಿತ್ತು.”

“ ‘ಅಹಂ’ ಅಥವಾ ನಾನೇ ಒಂದು ಪ್ರಬಲವಾದ ಆಕರ್ಷಣೆಯೊಂದಿಗೆ ಗಮನದ ಕೇಂದ್ರವಾಗಿ ಹಿಡಿದುಕೊಂಡಿತ್ತು.

“ಸಾವಿನ ಹೆದರಿಕೆ ಕ್ಷಣಮಾತ್ರದಲ್ಲಿ ಮತ್ತು ಎಂದೆಂದಿಗೂ ಕಣ್ಮರೆಯಾಯಿತು.

“ಆ ಕ್ಷಣದಿಂದ ಸರಿಯಾಗಿ ಇಲ್ಲಿಯವರೆಗೆ ಆತ್ಮದಲ್ಲಿ ಲೀನವಾಗುವಿಕೆ ಮುಂದುವರಿದಿದೆ.”

* * * *



# ೧೧. ಸ್ವಾಮಿ ರಾಮದಾಸ್
## (ಕ್ರಿ.ಶ. ೧೮೮೪–೧೯೬೩)

[ನಲವತ್ತೆರಡು ವರ್ಷಗಳ ಹಿಂದೆ ಆತ ಒಂದೇ ಪೆಟ್ಟಿಗೆ ತನ್ನ ವ್ಯವಹಾರ, ತನ್ನ ಮನೆ ಮತ್ತು ಕುಟುಂಬ ಮತ್ತು ತನ್ನ ಸ್ವಂತದ್ದೆಂದು ಆತ ಕರೆದುಕೊಂಡ ಎಲ್ಲವನ್ನೂ ತಿರಸ್ಕರಿಸಿದರು. ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವ ಒಂದು ಆಳವಾದ ಹಂಬಲ ಅವರನ್ನು ಒಂದೆಡೆ ನಿಲ್ಲಲಾಗದಂತೆ ಹೊರದೂಡಿತು ಮತ್ತು ಅವರನ್ನು ‘ರಾಮನಾಮ’ದ ಏಕೈಕ ಸಾಮಗ್ರಿಯೊಂದಿಗೆ ಎಲ್ಲೆಡೆಯಲ್ಲಿಯೂ ಅಲೆದಾಡುವಂತೆ ಮಾಡಿತು. ‘ರಾಮನಾಮ’ದ ಅದ್ಭುತ ಶಕ್ತಿಯ ಮೂಲಕ ಮತ್ತು ರಾಮನ ಸಂಕಲ್ಪಕ್ಕೆ ಪರಿಪೂರ್ಣ ಶರಣಾಗತಿಯ ಮೂಲಕ ಎಷ್ಟು ಕ್ಷಿಪ್ರವಾಗಿ ಮತ್ತು ಖಚಿತವಾಗಿ ವ್ಯಕ್ತಿಯೋರ್ವನು ಪರಮಾತ್ಮನನ್ನು ಹೇಗೆ ಸಾಕ್ಷಾತ್ಕರಿಸಿಕೊಳ್ಳಬಹುದೆಂಬುದನ್ನು ಆತ ಪ್ರದರ್ಶಿಸಿದರು. ಎಲ್ಲ ಸನ್ನಿವೇಶವನ್ನು ಪರಿಪೂರ್ಣ ಸಂತೋಷದೊಂದಿಗೆ ಅಂಗೀಕರಿಸುತ್ತ, ಎಲ್ಲ ಅವಮಾನವನ್ನು ಜಿತೇಂದ್ರಿಯನ ಔದಾಸೀನ್ಯದೊಂದಿಗೆ ಸಹಿಸುತ್ತ ಅವರು ಎಲ್ಲೆಡೆಯಲ್ಲಿಯೂ ಮತ್ತು ಪ್ರತಿಯೊಂದರಲ್ಲಿಯೂ ರಾಮನನ್ನು ಕಂಡರು. ತಮ್ಮ ದೃಷ್ಟಿಕೋನದಲ್ಲಿ ವಿಶಾಲಹೃದಯದವರಾದ ಅವರು ಎಲ್ಲ ಧರ್ಮಗಳ ಪ್ರವಾದಿಗಳನ್ನೂ ಒಂದೇ ವಿಶ್ವವ್ಯಾಪಿ ಸತ್ಯದ ಬೋಧಕರೆಂದು ಗೌರವಿಸಿದರು.

ತಮ್ಮ ಅಲೆದಾಟಗಳಿಂದ ಹಿಂದಿರುಗಿದ ಅವರು ದಕ್ಷಿಣ ಕನ್ನಡದಲ್ಲಿನ ಕಾಂಜಂಗಾಡ್‌ನಲ್ಲಿದ್ದ ತಮ್ಮ ‘ಆನಂದಾಶ್ರಮ’ಕ್ಕೆ ಹಿಂದಿರುಗಿದರು. ಆಶ್ರಮದ ಪಾಕ್ಷಿಕ ಪತ್ರಿಕೆ ‘ದರ್ಶನ’(The Vision)ದಲ್ಲಿನ ತಮ್ಮ ಲೇಖನಗಳ ಮೂಲಕ ತಮ್ಮ ಶಿಷ್ಯರ ಒಂದು ವ್ಯಾಪಕ ವಲಯಕ್ಕೆ ಅವರ ಬೋಧನೆಗಳನ್ನು ತಲುಪಿಸುತ್ತ ಅದು ಪವಿತ್ರತೆ ಮತ್ತು ಶಾಂತಿಯ ಒಂದು ಆಶ್ರಮವಾಗಿತ್ತು. ಅವರ ಮುಖವನ್ನು ವ್ಯಾಪಿಸಿಕೊಂಡಿದ್ದ ಮತ್ತು ಅವರು ದಿವಂಗತರಾಗುವವರೆಗೆ ಅವರ ಮುಖದಲ್ಲಿ ಉಳಿದಿದ್ದ ಮಗುವಿನ ಮಾಧುರ್ಯ ಸಾಕ್ಷಾತ್ಕಾರಗೊಂಡ ಚೈತನ್ಯದ ‘ಶಾಂತಿ’ ಮತ್ತು ‘ಆನಂದ’ವನ್ನು ಸೂಚಿಸಿತು.]

**ಗುರುವಿನ ಅನುಗ್ರಹ ನನ್ನ ಅಜ್ಞಾನವನ್ನು ಬಯಲು ಮಾಡಿತು**

ಮಾನವ ಜೀವಿ ವಿವೇಚನೆಯ ಸಹಜ ಕೌಶಲವುಳ್ಳವನಾಗಿದ್ದಾನೆ. ಇಂದ್ರಿಯ ಸುಖಗಳಿಗೆ ತೀವ್ರವಾದ ವಿರಕ್ತಿಯೊಂದಿಗೆ ಆಧಾರಿತಗೊಂಡ ಭಗವಂತನನ್ನು ಕುರಿತ ಉತ್ಕಟವಾದ ಹಂಬಲವನ್ನು ಬೆಳೆಸಿಕೊಳ್ಳಲು ಆತ ಅದನ್ನು ಅತ್ಯುತ್ತಮವಾಗಿ ಬಳಸಿಕೊಳ್ಳಬಹುದು. ಇದೀಗ, ಜೀವನದ ಗುರಿಯೇನು? ಅದು ಸಂತೋಷ. ಶಾಶ್ವತ ಸಂತೋಷವಾಗಿರುವ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವುದರ ಮೂಲಕ ಹೃದಯದಲ್ಲಿರಿಸಿಕೊಂಡಿರುವ ಈ ಗುರಿಯನ್ನು ಈಡೇರಿಸಿಕೊಳ್ಳಬಹುದು.

ಇಂದ್ರಿಯಗಳ ಭೌತವಸ್ತುಗಳಿಂದ ನಾನು ಪಡೆದುಕೊಂಡ ಭೋಗಗಳು ಕೇವಲ ಕ್ಷಣಿಕವಾದುವುಗಳು ಮಾತ್ರವೇ ಆಗಿರಲಿಲ್ಲ. ಆದರೆ, ಅವು ನೋವು ಮತ್ತು ವಿಷಾದದಿಂದೊಡಗೂಡಿದ್ದುವು. ಈ ವಾಸ್ತವವನ್ನು ನಾನು ಬಹು ಚೆನ್ನಾಗಿಯೇ ಅರಿತುಕೊಂಡೆ. ಆದ್ದರಿಂದಲೇ ನನ್ನ ಮನಸ್ಸನ್ನು ನಶ್ವರವಾದ ಭೌತವಸ್ತುಗಳಿಂದ ಚಿರಂತನವಾದ ಜೀವನದ ಮೂಲಕ್ಕೆ – ದೇವರೆಡೆಗೆ – ತಿರುಗಿಸಲು ಸಮಗ್ರವಾದ ಪ್ರಯತ್ನದಲ್ಲಿ ನನ್ನನ್ನು ತೊಡಗಿಸಿಕೊಂಡೆ. ಪರಿಪೂರ್ಣ ಅಸ್ತಿತ್ವ, ಪ್ರಜ್ಞೆ ಮತ್ತು ಆನಂದವಾಗಿರುವ ದೇವರು ನನ್ನೊಳಗಿದ್ದಾನೆ. ಮನಸ್ಸನ್ನು ಅವಾಸ್ತವಿಕದಿಂದ– ಜೀವನದ ಬಾಹ್ಯ ವಸ್ತುಗಳು – ಹಿಂತೆಗೆದುಕೊಳ್ಳುತ್ತ, ಆತನ ಪವಿತ್ರವಾದ ನಾಮದ ನಿರಂತರವಾದ ಪಠನದ ಮೂಲಕ ತರಲಾದ ನಿಶ್ಚಲವಾದ ನೆನಪಿನ ಮೂಲಕ ಅದನ್ನು ಸತತವಾಗಿ ಪ್ರವಹಿಸಲು ನಾನು ಆಸ್ಪದ ನೀಡಿದೆ. ಅಚಲವಾದ ಸ್ಮರಣೆ ನನ್ನ ಮನಸ್ಸನ್ನು ಪವಿತ್ರಗೊಳಿಸಿ ನಿಯಂತ್ರಿಸಿತು.

ಇದೀಗ ರಹಸ್ಯಮಯವಾದ ಗುರುವಿನ ಅನುಗ್ರಹ– ಮೊದಲನೆಯದಾಗಿ ಭಗವಂತನನ್ನು ಅನ್ವೇಷಿಸಲು ನನ್ನನ್ನು ಜಾಗ್ರತಗೊಳಿಸಿದುದು– ನನ್ನ ಆತ್ಮವನ್ನು ಯುಗಗಳವರೆಗೆ ಆವರಿಸಿಕೊಂಡಿದ್ದ ಅಜ್ಞಾನದ ಮುಖಪರದೆಯನ್ನು ತೆರೆಯುವುದರ ಮೂಲಕ ತನ್ನ ಕಾರ್ಯವನ್ನು ಮುಕ್ತಾಯಗೊಳಿಸಿತು. ಪರಿಣಾಮವೇನೆಂದರೆ ನನ್ನ ದೇಹ, ಇಂದ್ರಿಯಗಳು ಮತ್ತು ಎಲ್ಲ ಪ್ರಪಂಚಗಳನ್ನೂ ಒಳಹೊಕ್ಕು ಹರಡುತ್ತ ಜ್ಞಾನೋದಯದ ಪ್ರವಾಹವೊಂದು ಹರಿಯಿತು. ವಿಶ್ವಪ್ರಜ್ಞೆ ಮತ್ತು ನನ್ನ ಸ್ತಬ್ಧವಾದ ಮತ್ತು ಸರ್ವವ್ಯಾಪಿಯಾದ ಆತ್ಮದ ಜ್ಞಾನದ ಮೂಡುವಿಕೆಯಿಂದ ಹಿಂಬಾಲಿಸಲಾದ ಈ ಉಜ್ವಲಕಾಂತಿಯಲ್ಲಿ ನನ್ನ ಚೈತನ್ಯ ಕಳೆದುಹೋಯಿತು. ಹೆಚ್ಚು ಶ್ಲಾಘನೀಯವಾದ, ಹೆಚ್ಚು ಪರಿಪೂರ್ಣವಾದ ಮತ್ತು ಹೆಚ್ಚು ಆನಂದಮಯವಾದ ಮತ್ತು ಒಂದು ದರ್ಶನ ನನ್ನ ಜ್ಞಾನೋದಯಗೊಂಡ ಆತ್ಮವನ್ನು ಕಾಯುತ್ತಿತ್ತು ಮತ್ತು ಇದು ವಿಶ್ವವ್ಯಾಪಿ ಅಭಿವ್ಯಕ್ತಿಯೊಂದಿಗೆ ಆತ್ಮದ ಐಕ್ಯ; ಬೇರೆ ಮಾತುಗಳಲ್ಲಿ ಹೇಳುವುದಾದರೆ ಆತ್ಮ ಮತ್ತು ವಿಶ್ವ ಒಂದು ಎಂಬುದನ್ನು ನಾನು ಅರ್ಥಮಾಡಿಕೊಂಡೆ. ಈ ಪರಿಪೂರ್ಣ



ಆತ್ಮದ ಸಾಕ್ಷಾತ್ಕಾರದ ಮೇಲೆ ಆಧಾರಿತಗೊಂಡ ಈ ಭವ್ಯವಾದ ದರ್ಶನ ಮತ್ತು ಅನುಭವ, ಮಾನವಜೀವಿಯಾದ ನನ್ನನ್ನು ಆತನ ಎಲ್ಲ ಮುಖಗಳಲ್ಲಿಯೂ ದೇವರ ನಿಜವಾದ ಮೂರ್ತರೂಪದಲ್ಲಿ ಪರಿವರ್ತನೆಗೊಳಿಸಿತು.

ನನ್ನ ಆತ್ಮ ಪ್ರಾಣಿಯಿಂದ ಮಾನವನ ಹಂತಕ್ಕೆ ಏರತೊಡಗಿದಂತೆ, ಅದು ಈಗ ಮಾನವನಿಂದ ದೈವಕ್ಕೆ– ಆಧ್ಯಾತ್ಮಿಕ ಜೊತೆಗೆ ಭೌತಿಕ ವಿಕಾಸವಾದ ಪುರುಷೋತ್ತಮ– ಅತ್ಯಂತ ಮಹೋನ್ನತ ಸಮಾಪ್ತಿ– ಈ ಮಾನವಜೀವಿಯಲ್ಲಿ ತನ್ನ ಎಲ್ಲ ಭವ್ಯತೆಯಲ್ಲಿ ತನ್ನನ್ನು ಪ್ರಕಟಗೊಳಿಸಿಕೊಳ್ಳಲು ಭಗವಂತನ ಸಂಕಲ್ಪದ ಸರ್ವೋತ್ಕೃಷ್ಟ ಈಡೇರಿಕೆ– ಏರಿತು.

ನಿಜವಾಗಿಯೂ ದೇವರು ಅನ್ವೇಷಕ ಮತ್ತು ದೇವರು ಅನ್ವೇಷಿಸಬೇಕಾದವನು. ಇದು ಆತನ ನಿಗೂಢವಾದ ಲೀಲೆ. ಸತ್ಯವಾಗಿಯೂ, ನನ್ನ ಆತ್ಮ ಮತ್ತು ದೇವರು– ಜೀವ ಮತ್ತು ಬ್ರಹ್ಮ – ಒಬ್ಬರೇ ಆಗಿದ್ದಾರೆ. 'ಆತನಿಗೆ' ಎಲ್ಲ ಜಯವಾಗಲಿ.

ಆದರೂ, ಭಗವಂತ ನನ್ನನ್ನು ತನ್ನೆಡೆಗೆ ಸೆಳೆದುಕೊಂಡ ಅತ್ಯುನ್ನತ ಆಧ್ಯಾತ್ಮಿಕ ಸಾಧನೆಗಳು ಮುಗಿದುಹೋಗಿಲ್ಲ. 'ಆತ'ನೊಂದಿಗಿನ ಅತ್ಯಂತ ಮಧುರವಾದ ಮತ್ತು ಅತ್ಯಂತ ಆತ್ಮೀಯವಾದ, ಪ್ರಾರಂಭದ ಹೋರಾಟ ಮತ್ತು ಮಹತ್ವಾಕಾಂಕ್ಷೆಯುದ್ದಕ್ಕೂ ನಾನು ಕಾಪಾಡಿಕೊಂಡು ಬಂದ– ನಿಕಟ ಮತ್ತು ವೈಯಕ್ತಿಕ– ಸಂಬಂಧ ಇದೀಗ ನಿಜವಾಗಿ, ಆತ್ಮೀಯವಾಗಿ ಮತ್ತು ಶಾಶ್ವತವಾಗಿ ಪರಿಣಮಿಸಿದೆ. 'ಆ' ಈಗ ಓರ್ವ ಕಾತರವುಳ್ಳ ತಾಯಿ ಮತ್ತು ಉಪಕಾರಿಯಾದ ಗುರುವಿನಂತೆ ನನ್ನ ನೆಚ್ಚಿನ ಸಂಗಾತಿಯಾಗಿದ್ದಾನೆ. ಮನುಷ್ಯ, ಪ್ರಾಣಿ ಮತ್ತು ಪಕ್ಷಿಯ ಮುಖದಲ್ಲಿ– ಇಲ್ಲ, ಎಲ್ಲ ಜೀವಿಗಳು ಮತ್ತು ವಸ್ತುಗಳಲ್ಲಿಯೂ ಸಹ– ನನ್ನ ಪ್ರೀತಿಪಾತ್ರನಾದ 'ಆತ'ನನ್ನು ನಾನು ಕಾಣುತ್ತೇನೆ. ಮತ್ತೊಮ್ಮೆ 'ಆತನಿಗೆ' ಎಲ್ಲ ಜಯವಾಗಲಿ.

* * * *

# ೧೨. ಸ್ವಾಮಿ ಶಿವಾನಂದ
## (ಕ್ರಿ.ಶ. ೧೮೮೭–೧೯೬೩)

[ಸೇವೆಯ ಮೂಲಕ ಸಂತ ಪದವಿ ಎಂಬುದು ಶಿವಾನಂದರ ಕಥೆ. ರಿಷಿಕೇಶದ ಈ ಸಂತನಂತೆ, ದೇಹದ ಖಾಯಿಲೆಗಳನ್ನು ಗುಣಪಡಿಸುವುದಕ್ಕೆ ಸಂಬಂಧಪಡದ ಓರ್ವ ವೈದ್ಯ ಮನಸ್ಸಿನ ಯಾತನೆಗಳ ಓರ್ವ ಚಿಕಿತ್ಸಕ ಮತ್ತು ಗೊತ್ತುಗುರಿಯಿಲ್ಲದ ಆತ್ಮದ ಉದ್ಧಾರಕನಾಗಿ ಪರಿಣಮಿಸಿರುವುದು ತೀರ ಅಪರೂಪದ ಸಂಗತಿಯಾಗಿದೆ. ತಮ್ಮ ಹಿಮಾಲಯದ ನಿವಾಸದಲ್ಲಿ ನೊಂದ ಅನೇಕ ಹೃದಯಗಳನ್ನು ಅವುಗಳಿಗೆ ಸಾಂತ್ವನ ನೀಡಲು ಮತ್ತು ಅವುಗಳನ್ನು ಆಧ್ಯಾತ್ಮಿಕತೆಯ ಉನ್ನತ ಪಥದಲ್ಲಿ ಇರಿಸಲು ತಮ್ಮತ್ತ ಅವರು ಆಕರ್ಷಿಸಿದ್ದಾರೆ. ವಿಶ್ವಕೋಶದಂತಹ ಆಯಾಮದ ಪಾಂಡಿತ್ಯದೊಂದಿಗೆ ಆತ ಶಿಶುಸದೃಶವಾದ ಸರಳತೆಯನ್ನು ಪಡೆದಿದ್ದರು ಮತ್ತು ಪ್ರಪಂಚದ ಎಲ್ಲ ಭಾಗಗಳಲ್ಲಿ ಅಸಂಖ್ಯಾತ ಪುರುಷರು ಮತ್ತು ಮಹಿಳೆಯರು, ವೃದ್ಧರು ಮತ್ತು ತರುಣರ ಆರಾಧನೀಯ ಗೌರವವನ್ನು ಅವರು ಗಳಿಸಿದ್ದರು. ರಿಷಿಕೇಶದಲ್ಲಿ ಅವರು ಸ್ಥಾಪಿಸಿದ 'ವನ ವಿಶ್ವವಿದ್ಯಾನಿಲಯ'(Forest University)ದಿಂದ ಹಿಂದೂ ತತ್ತ್ವಸಾಸ್ತ್ರ ಮತ್ತು ಧರ್ಮದ ಎಲ್ಲ ಅಂಶಗಳನ್ನೂ ವಿವರಿಸುವ ಲೆಕ್ಕವಿಲ್ಲದಷ್ಟು ಗ್ರಂಥಗಳು ಮತ್ತು ಕಿರುಹೊತ್ತಿಗೆಗಳನ್ನು ಅವರು ಪ್ರಕಟಿಸಿದ್ದಾರೆ. ಅವರ ನೇತೃತ್ವದಲ್ಲಿ ಪ್ರಾರಂಭಿಸಲಾಗಿರುವ 'ದಿವ್ಯ ಜೀವನ ಸಂಘ' (The Divine Life Society) ಅವರ ಸಂದೇಶವನ್ನು ದೇಶದ ಮತ್ತು ದೇಶದಾಚೆಯ ಎಲ್ಲ ಮೂಲೆಗಳಿಗೆ ಕೊಂಡೊಯ್ಯುತ್ತಲಿದೆ.]

**ಭಗವಂತ ಕೃಷ್ಣನಾಗಿ ಗೋಚರಿಸಿದ**

"ನಾನು ಸ್ವರ್ಗ ಆಶ್ರಮದಲ್ಲಿ ವಾಸ ಮಾಡುತ್ತಲಿದ್ದ ಅವಧಿಯಲ್ಲಿ ಒಂದು ಸುದೀರ್ಘ ಕಾಲದ ತಪಶ್ಚರ್ಯೆಗಳು ಮತ್ತು ಧ್ಯಾನದನಂತರ ಅಸಂಖ್ಯಾತ ಮಹರ್ಷಿಗಳ ದರ್ಶನವನ್ನು ಮತ್ತು ಅವರ ಆಶೀರ್ವಾದಗಳನ್ನು ನಾನು ಪಡೆದ ಸಂದರ್ಭದಲ್ಲಿ ಭಗವಂತ ಶ್ರೀಕೃಷ್ಣನ ರೂಪಿನಲ್ಲಿ ನನ್ನೆದುರಿನಲ್ಲಿ ಕಾಣಿಸಿಕೊಂಡ" ಎಂದು ನುಡಿಯುವುದರ ಮೂಲಕ ಪ್ರಶ್ನೆಯನ್ನು ತಳ್ಳಿಹಾಕುವುದು ಬಹಳ ಸುಲಭವಾಯಿತು.



ಆದರೆ, ಅದು ಅಖಂಡವಾದ ಸತ್ಯವಾಗಿರಲು ಅಥವಾ ಅನಂತವಾದ, ಅಪರಿಮಿತನಾದ ಮತ್ತು ಮಾತು ಮತ್ತು ಮನಸ್ಸಿನ ಎಟುಕಿಗೆ ಮೀರಿದ ಭಗವಂತನಿಗೆ ಸಂಬಂಧಿಸಿದ ಪ್ರಶ್ನೆಯೊಂದಕ್ಕೆ ಸಮರ್ಪಕವಾದ ಉತ್ತರವಾಗಿರಲು ಸಾಧ್ಯವಿಲ್ಲ.

ವಿಶ್ವಪ್ರಜ್ಞೆ ಒಂದು ಆಕಸ್ಮಿಕವಲ್ಲ ಅಥವಾ ಅನಿರೀಕ್ಷಿತವಾದ ಘಟನೆಯಲ್ಲ. ಅದು ಕಡಿದಾದ, ಜಾರಿಕೆಯುಳ್ಳ ಮೆಟ್ಟಿಲುಗಳನ್ನುಳ್ಳ ಮುಳ್ಳಿನ ಹಾದಿಯ ಮೂಲಕ ಪ್ರವೇಶಿಸಲು ಸಾಧ್ಯವಾದ ಶಿಖರ. ನಾನು ಅವುಗಳನ್ನು, ಕಠಿಣವಾದ ರೀತಿಯಲ್ಲಿ ಮೆಟ್ಟಿಲಿನಿಂದ ಮೆಟ್ಟಿಲಿಗೆ ಏರಿದ್ದೇನೆ; ಆದರೆ, ಪ್ರತಿಯೊಂದು ಮೆಟ್ಟಲಿನಲ್ಲಿಯೂ ಭಗವಂತ ನನ್ನ ಬಾಳಿನೊಳಗೆ ಬರುತ್ತಿರುವುದನ್ನು ಮತ್ತು ಮುಂದಿನ ಮೆಟ್ಟಿಲಿಗೆ ನನ್ನನ್ನು ಸುಲಭವಾಗಿ ಕೊಂಡೊಯ್ಯುತ್ತಿರುವುದನ್ನು ನಾನು ಅನುಭವಿಸಿದ್ದೇನೆ.

ನನ್ನ ತಂದೆ ಕರ್ಮಾಚರಣೆಗಳ ಪೂಜೆಯಲ್ಲಿ ಹೆಚ್ಚು ಒಲವುಳ್ಳವರಾಗಿದ್ದರು. ಅದನ್ನು ಅವರು ಅತ್ಯಂತ ನಿಯತವಾಗಿ ಆಚರಿಸುತ್ತಿದ್ದರು. ನನ್ನ ಶಿಶುಮನಸ್ಸಿಗೆ ಅವರು ಪೂಜಿಸುತ್ತಿದ್ದ ವಿಗ್ರಹ ದೇವರಾಗಿತ್ತು, ಮತ್ತು ಅವರಿಗೆ ಹೂವುಗಳು ಮತ್ತು ಪೂಜೆಯ ಇತರ ವಸ್ತುಗಳನ್ನು ತಂದುಕೊಡುವುದರ ಮೂಲಕ ತಂದೆಯವರಿಗೆ ಪೂಜೆಯಲ್ಲಿ ಸಹಾಯ ಮಾಡುವುದರಲ್ಲಿ ನಾನು ಮಹದಾನಂದಪಡುತ್ತಿದ್ದೆ. ಅಂತಹ ಪೂಜೆಯಿಂದ ನಾನು ಮತ್ತು ಆತ ಪಡೆಯುತ್ತಲಿದ್ದ ಆಳವಾದ ಆಂತರಿಕ ತೃಪ್ತಿ, 'ಆತನ' ಭಕ್ತರಿಂದ ಶ್ರದ್ಧಾಪೂರ್ವಕವಾಗಿ ಪೂಜಿಸಲ್ಪಡುತ್ತಿದ್ದ ಅಂತಹ ವಿಗ್ರಹಗಳಲ್ಲಿ ದೇವರು 'ಇದ್ದಾನೆ' ಎಂಬ ಮನವರಿಕೆಯನ್ನು ನನ್ನ ಹೃದಯದಲ್ಲಿ ನೆಲೆಗೊಳಿಸಿತು. ಹೀಗೆ ಮೊದಲಿಗೆ ದೇವರು ನನ್ನ ಬಾಳಿನೊಳಗೆ ಆಗಮಿಸಿದ ಮತ್ತು ಏಣಿಯ ಮೊದಲ ಮೆಟ್ಟಲಿನ ಮೇಲೆ ನನ್ನ ಕಾಲನ್ನಿರಿಸಿದ.

ಓರ್ವ ಪ್ರಾಯಕ್ಕೆ ಬಂದವನಾಗಿ ನಾನು ಅಂಗಸಾಧನೆಗಳು ಮತ್ತು ಇತರ ಶಕ್ತಿಯುತವಾದ ವ್ಯಾಯಾಮಗಳಲ್ಲಿ ಅತಿಯಾದ ಒಲವುಳ್ಳವನಾಗಿದ್ದೆ. ಕೆಳಜಾತಿಗೆ ಸೇರಿದ ಓರ್ವ ಗುರುವಿನಿಂದ ನಾನು ಕತ್ತಿವರಸೆಯನ್ನು ಕಲಿತೆ; ಆತ ಓರ್ವ ಹರಿಜನನಾಗಿದ್ದ. ಅಸ್ಪೃಶ್ಯನಾದವನೊಬ್ಬನಿಗೆ ವಿದ್ಯಾರ್ಥಿಯಾಗಿ ನಡೆದುಕೊಳ್ಳುವುದು ಬ್ರಾಹ್ಮಣಜಾತಿಯವನಿಗೆ ಅನುಚಿತವಾದುದೆಂದು ನಾನು ಅರ್ಥಮಾಡಿಕೊಳ್ಳುವಂತೆ ಮಾಡುವುದಕ್ಕೆ ಮುಂಚಿತವಾಗಿ ನಾನು ಕೆಲವು ದಿನಗಳವರೆಗೆ ಮಾತ್ರವೇ ಆತನಲ್ಲಿಗೆ ಹೋಗಬಲ್ಲವನಾಗಿದ್ದೆ. ಈ ವಿಷಯವನ್ನು ಕುರಿತಂತೆ ನಾನು ಆಳವಾಗಿ ಯೋಚನೆ ಮಾಡಿದೆ. ಒಂದು ಕ್ಷಣ, ನಮ್ಮ ತಂದೆಯ ಪೂಜಾಕೋಣೆಯಲ್ಲಿ ನಾವೆಲ್ಲರೂ ಪೂಜಿಸುತ್ತಿದ್ದ ವಿಗ್ರಹದಲ್ಲಿನ ದೇವರು ಈ ಅಸ್ಪೃಶ್ಯನ ಹೃದಯಕ್ಕೆ ನೆಗೆದಿದ್ದನೆಂದು ನಾನು ಭಾವಿಸಿದೆ. ಆತ ನನ್ನ ಗುರುವಾಗಿದ್ದ, ಓಹೋ ಸರಿ! ಹೀಗಾಗಿ ನಾನು ಕೂಡಲೆ ಹೂವುಗಳು, ಸಿಹಿತಿಂಡಿಗಳು ಮತ್ತು ವಸ್ತ್ರದೊಂದಿಗೆ ಆತನಲ್ಲಿಗೆ ಹೋದೆ, ಆತನಿಗೆ ಹಾರವನ್ನು ಹಾಕಿದೆ, ಆತನ ಪಾದಗಳ ಬಳಿ ಹೂಗಳನ್ನಿರಿಸಿ ಆತನೆದುರಿಗೆ

ನಾನು ಸಾಷ್ಟಾಂಗ ಪ್ರಣಾಮ ಮಾಡಿದೆ. ಹೀಗೆ ಜಾತಿಯ ಭಿನ್ನತೆಗಳ ತೆರೆಯನ್ನು ತೊಲಗಿಸಲು ದೇವರು ನನ್ನ ಬಾಳಿನೊಳಗೆ ಬಂದ.

ಈ ಹೆಜ್ಜೆ ಎಷ್ಟೊಂದು ಅತ್ಯಂತ ಅಮೂಲ್ಯವಾದುದೆಂಬುದನ್ನು ಇದರ ನಂತರ ಬಹು ಕ್ಷಿಪ್ರದಲ್ಲಿಯೇ ನಾನು ಅರಿತುಕೊಂಡೆ; ಏಕೆಂದರೆ, ನಾನು ವೈದ್ಯಕೀಯ ವೃತ್ತಿಯನ್ನು ಪ್ರವೇಶಿಸಬೇಕಾಗಿತ್ತು ಮತ್ತು ಎಲ್ಲರ ಸೇವೆ ಮಾಡಬೇಕಾಗಿತ್ತು ಮತ್ತು ಜಾತಿಭಿನ್ನತೆಯ ದೃಢನಿರ್ಧಾರ ಈ ಸೇವೆಯನ್ನು ಹಾಸ್ಯಾಸ್ಪದಗೊಳಿಸುತ್ತಿತ್ತು. ಭಗವಂತನ ಬೆಳಕಿನ ಮೂಲಕ ಈ ಮಬ್ಬು ಕರಗಿಹೋಗಿರಲಾಗಿ ಪ್ರತಿಯೋರ್ವರ ಸೇವೆ ಮಾಡುವುದು ನನಗೆ ಸುಲಭವೂ ಮತ್ತು ಸಹಜವೂ ಆಯಿತು. ಕಾಯಿಲೆಯನ್ನು ಗುಣಪಡಿಸುವ ಮತ್ತು ಮಾನವಯಾತನೆಯನ್ನು ಪರಿಹರಿಸುವುದಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಬಗೆಯ ಸೇವೆಯಲ್ಲಿಯೂ ನಾನು ಅತ್ಯಂತ ಉತ್ಸಾಹಭರಿತ ಆನಂದವನ್ನನುಭವಿಸಿದೆ. ಮಲೇರಿಯಾಕ್ಕೆ ಒಳ್ಳೆಯ ಸೂಚಿತ ಔಷಧಿಯಿದ್ದಲ್ಲಿ ಮರುಕ್ಷಣದಲ್ಲಿ ಇಡೀ ಪ್ರಪಂಚವೇ ಅದನ್ನು ತಿಳಿಯಬೇಕೆಂದು ನಾನು ಭಾವಿಸಿದೆ. ರೋಗಗಳ ತಡೆಯುವಿಕೆ, ಆರೋಗ್ಯದ ಪ್ರಗತಿ ಮತ್ತು ರೋಗಗಳ ಗುಣಪಡಿಸುವಿಕೆಗೆ ಸಂಬಂಧಿಸಿದಂತೆ ಯಾವುದೇ ಜ್ಞಾನವನ್ನು– ನಾನು ಪಡೆದುಕೊಳ್ಳಲು ಮತ್ತು ಎಲ್ಲರೊಂದಿಗೆ ಹಂಚಿಕೊಳ್ಳಲು ಕಾತರನಾಗಿದ್ದೆ.

ಬಳಿಕ, ಮಲಯಾದಲ್ಲಿನ ರೋಗಿಗಳ ರೂಪದಲ್ಲಿ ದೇವರು ನನ್ನ ಬಾಳಿನೊಳಗೆ ಆಗಮಿಸಿದ. ಯಾವುದೇ ಒಂದು ನಿರ್ದಿಷ್ಟ ಪ್ರಸಂಗವನ್ನು ಎತ್ತಿತೋರಿಸಲು ಇದೀಗ ನನಗೆ ಕಷ್ಟವಾಗುತ್ತಿದೆ; ಮತ್ತು ಪ್ರಾಯಶಃ ಅದು ಅನಗತ್ಯವಾದುದು. ಕಾಲ ಮತ್ತು ದೇಶ ಮನಸ್ಸಿನ ಕಲ್ಪನೆಗಳು ಮತ್ತು ಅವು ಭಗವಂತನಲ್ಲಿ ಯಾವುದೇ ಅರ್ಥವನ್ನು ಹೊಂದಿಲ್ಲ. ಮಲಯಾದಲ್ಲಿನ ನನ್ನ ವಾಸದ ಇಡೀ ಅವಧಿಯನ್ನು ಕುರಿತಂತೆ ರೋಗಿಗಳು ಮತ್ತು ವೇದನೆಯ ರೂಪದಲ್ಲಿ ದೇವರು ನನ್ನಲ್ಲಿಗೆ ಬಂದ ಒಂದು ವಿಶಿಷ್ಟ ಘಟನೆಯನ್ನಾಗಿ ಜರುಗಿರುವುದನ್ನು ಕುರಿತು ನಾನು ಯೋಚಿಸುತ್ತೇನೆ. ಜನರು ದೈಹಿಕವಾಗಿ ಮತ್ತು ಮಾನಸಿಕವಾಗಿ ವ್ಯಾಧಿಗ್ರಸ್ತರಾಗಿರುತ್ತಾರೆ; ಕೆಲವರಿಗೆ ಜೀವನ ದೀರ್ಘಕಾಲ ಎಳೆಯುವ ಸಾವು; ಮತ್ತು ಕೆಲವರಿಗೆ ಜೀವನಕ್ಕಿಂತ ಮರಣ ಹೆಚ್ಚು ಸ್ವಾಗತಾರ್ಹವಾಗಿರುತ್ತದೆ. ಕೆಲವರು ಸಾವನ್ನೆದುರಿಸಲು ಅಸಮರ್ಥರಾಗಿ ಬಾಳನ್ನು ದೂಡುತ್ತಾರೆ; ಕೆಲವರು ಬಾಳನ್ನೆದುರಿಸಲು ಅಸಮರ್ಥರಾಗಿ ಸಾವನ್ನಾಹ್ವಾನಿಸುತ್ತಾರೆ ಮತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ದೇವರು ಈ ಪ್ರಪಂಚವನ್ನು ಕೇವಲ ದುಷ್ಟಜನರನ್ನು ಯಾತನೆಯನ್ನನುಭವಿಸುವುದಕ್ಕಾಗಿ ಎಸೆಯುವ ನರಕವನ್ನಾಗಿ ನಿರ್ಮಿಸಿಲ್ಲದಿದ್ದಲ್ಲಿ ಮತ್ತು ಈ ಯಾತನೆಗಿಂತಲೂ ಮತ್ತು ಈ ಅಸಹಾಯಕ ಅಸ್ತಿತ್ವಕ್ಕಿಂತಲೂ ಭಿನ್ನವಾದುದೇನೋ ಒಂದು, ನಾನು ಒಳಗಣ್ಣಿನಿಂದ ಇರಲೇಬೇಕೆಂದು



ಭಾವಿಸಿದಂತೆ ಇರುವುದಾದಲ್ಲಿ ಅದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಅನುಭವಿಸಬೇಕೆಂದು ನನ್ನೊಳಗೆ ಒಂದು ಹೆಬ್ಬಯಕೆ ಹೆಚ್ಚಾಗತೊಡಗಿತು.

ನನಗೆ ವೇದಾಂತದಲ್ಲಿ ಪ್ರಥಮ ಪಾಠಗಳನ್ನು ನೀಡಿದ ಓರ್ವ ಧಾರ್ಮಿಕ ಬೈರಾಗಿಯಾಗಿ ದೇವರು ನನ್ನಲ್ಲಿಗೆ ಬಂದುದು ನನ್ನ ಜೀವನದ ಈ ನಿರ್ಣಾಯಕ ಹಂತದಲ್ಲಿಯೇ. ಇಹಜೀವನದ ವಾಸ್ತವ ಅಂಶಗಳು ಮತ್ತು ಮಾನವ ಜೀವನದ ನಿಜವಾದ ಪ್ರಯೋಜನ ಮತ್ತು ಉದ್ದೇಶ ಸುಸ್ಪಷ್ಟಗೊಂಡುವು. ಇದು ನನ್ನನ್ನು ಮಲಯಾದಿಂದ ಹಿಮಾಲಯಕ್ಕೆ ಎಳೆದೊಯ್ದಿತು. 'ಆತ'ನನ್ನು ಎಲ್ಲರ ಆತ್ಮವೆಂದು ಅರಿತುಕೊಳ್ಳಲು ಎಲ್ಲವನ್ನೂ ತನ್ನಲ್ಲೇ ಮಗ್ನಗೊಳಿಸುವ ಮಹತ್ವಾಕಾಂಕ್ಷೆಯ ರೂಪದಲ್ಲಿ ದೇವರು ನನ್ನಲ್ಲಿಗೆ ಬಂದ.

ಧ್ಯಾನ ಮತ್ತು ಸೇವೆ ತ್ವರೆಯಿಂದ ಸಾಗಿದುವು; ಮತ್ತು ಅವುಗಳೊಂದಿಗೆ ನಾನಾ ಬಗೆಯ ಆಧ್ಯಾತ್ಮಿಕ ಅನುಭವಗಳು ಬಂದುವು; ಮಿತಿಯುಂಟುಮಾಡುವ ಆನುಷಂಗಿಕ ಲಕ್ಷಣಗಳಾಗಿ ದೇಹ, ಮನಸ್ಸು ಮತ್ತು ಬುದ್ಧಿ ಕಣ್ಮರೆಯಾದುವು; ಮತ್ತು ಇಡೀ ವಿಶ್ವ 'ಆತ'ನ ಬೆಳಕಿನಲ್ಲಿ ಪ್ರಕಾಶಿಸಿತು. ಬಳಿಕ ಪ್ರತಿಯೊಂದೂ ಒಂದು ದೈವಿಕ ಆಕಾರವನ್ನು ತಳೆದ ಈ ಬೆಳಕಿನ ರೂಪದಲ್ಲಿ ಭಗವಂತ ನನ್ನಲ್ಲಿಗೆ ಬಂದ; ಮತ್ತು ಪ್ರತಿಯೋರ್ವರನ್ನು ಕಾಡುವಂತೆ ತೋರುವ ನೋವು ಮತ್ತು ಯಾತನೆ, ಮನುಷ್ಯನಲ್ಲಿ ಹುದುಗಿಕೊಂಡಿರುವ ಕೆಳಮಟ್ಟದ ಲೈಂಗಿಕ ಅಭಿರುಚಿಗಳ ಕಾರಣದಿಂದಲಾಗಿ ಅಜ್ಞಾನ ನಿರ್ಮಿಸುವುದೆಂಬ ಮಾಯೆ ಒಂದು ಬಿಸಿಲ್ಗುದುರೆಯಾಗಿ ಗೋಚರಿಸಿತು.

'ಸರ್ವಂ ಖಲ್ವಿದಂ ಬ್ರಹ್ಮ' ಎಂಬುದನ್ನು ಅರಿಯುವ ಉದ್ದೇಶಕ್ಕಾಗಿ ಮತ್ತೊಂದು ಮಹತ್ವಪೂರ್ಣವಾದ ಘಟ್ಟವನ್ನು ದಾಟಬೇಕಾಗಿತ್ತು. ೧೯೫೦ರ ಮೊದಲಲ್ಲಿ (ಜನವರಿ ೮ರಂದು) ಆಶ್ರಮದಲ್ಲಿನ ರಾತ್ರಿಯ ಸತ್ಸಂಗಕ್ಕೆ ಅಡ್ಡಿಯನ್ನುಂಟು ಮಾಡಿದ ಅರೆಹುಚ್ಚಿನ ಆಕ್ರಮಣಕಾರನ ರೂಪದಲ್ಲಿ ಭಗವಂತ ನನ್ನ ಬಳಿಗೆ ಬಂದ. ಆತನ ಪ್ರಯತ್ನ ವಿಫಲವಾಯಿತು. ಆತನಿಗೆ ನಾನು ನಮಸ್ಕರಿಸಿದೆ, ಆತನನ್ನು ಪೂಜಿಸಿದೆ ಮತ್ತು ಆತನನ್ನು ಮನೆಗೆ ಕಳುಹಿಸಿದೆ. ಒಳಿತನ್ನು ವೈಭವೀಕರಿಸಲು ಕೆಡುಕು ಅಸ್ತಿತ್ವದಲ್ಲಿರುತ್ತದೆ. ಕೆಡುಕು ಒಂದು ಹೊರಗಣ ತೋರ್ಕೆ; ಅದರ ಮುಸುಕಿನ ಹಿಂದೆ ಎಲ್ಲರಲ್ಲಿಯೂ ಒಂದೇ ಆತ್ಮ ಬೆಳಗುತ್ತದೆ.

ಒಂದು ಗಮನಾರ್ಹ ವಾಸ್ತವವನ್ನು ಇಲ್ಲಿ ಹೇಳಲೇಬೇಕು. ಈ ವಿಕಾಸದಲ್ಲಿ ಪೂರ್ವದಲ್ಲಿ ಗಳಿಸಿದ ಯಾವುದೇ ಒಂದು ಮುಂದಿನ ಯಾವುದೇ ಹಂತದಲ್ಲಿ ಎಂದಿಗೂ ತಿರಸ್ಕೃತಗೊಳ್ಳುವುದಿಲ್ಲ. ಒಂದು ಮುಂದಿನದರೊಳಗೆ ಕಲೆತು ಏಕವಾಗಿದೆ ಮತ್ತು ಯೋಗದ ಸಮನ್ವಯವೇ ಫಲ. ಮೂರ್ತಿಪೂಜೆ, ರೋಗಿಗಳ ನಿಸ್ವಾರ್ಥಸೇವೆ, ವಿಶ್ವಪ್ರಜ್ಞೆಯನ್ನು ಪಡೆಯುವ ಅಂತಿಮ ಗುರಿಯೊಂದಿಗೆ ಜಾತಿ, ಮತ ಮತ್ತು

ಧರ್ಮದ ಎಲ್ಲೆಗಳನ್ನು ಮೀರಿದ ವಿಶ್ವಪ್ರೇಮದ ಪೋಷಿಸುವಿಕೆ ಪ್ರಕಟಗೊಂಡಿತು. ಈ ಜ್ಞಾನವನ್ನು ಕೂಡಲೇ ಹಂಚಿಕೊಳ್ಳಬೇಕಿತ್ತು. ಇದೆಲ್ಲವೂ ಸಹ ನನ್ನ ಅಸ್ತಿತ್ವದ ಸಮಗ್ರ ಭಾಗಗಳಾಗಿದ್ದುವು.

ಜೀವನದ ಧ್ಯೇಯ ಶಕ್ತಿಯನ್ನು ಪಡೆದುಕೊಳ್ಳುತ್ತಲಿತ್ತು ಮತ್ತು ವ್ಯಾಪಿಸುತ್ತಲಿತ್ತು. ನಾನು ಅಖಿಲ ಭಾರತ ಪ್ರವಾಸವನ್ನು ಕೈಗೊಂಡುದು ೧೯೫೦ರಲ್ಲಿ. ಬಳಿಕ, ದಿವ್ಯ ಜೀವನದ ತತ್ತ್ವಗಳನ್ನಾಲಿಸಲು ಕಾತರರಾಗಿದ್ದ ಭಕ್ತರ ಜನಸ್ತೋಮದ ತನ್ನ ವಿರಾಟ್–ಸ್ವರೂಪದಲ್ಲಿ ಭಗವಂತ ನನ್ನ ಬಳಿಗೆ ಬಂದ. ಪ್ರತಿಯೊಂದು ಕೇಂದ್ರದಲ್ಲಿಯೂ ಭಗವಂತ ನನ್ನ ಮೂಲಕ ಮಾತನಾಡಿದನೆಂದು ನಾನು ಭಾವಿಸಿದೆ ಮತ್ತು ಸ್ವಯಂ ಅಪಾರವಾದ ಜನಸ್ತೋಮ ಅದನ್ನು ಆಲಿಸುತ್ತಿದ್ದಂತೆ ಆತನೇ ತನ್ನ ವಿರಾಟ್ ರೂಪದಲ್ಲಿ ನನ್ನೆದುರಿನಲ್ಲಿ ವ್ಯಾಪಿಸಿಕೊಂಡ. ಆತ ನನ್ನೊಂದಿಗೆ ಹಾಡಿದ, ನನ್ನೊಂದಿಗೆ ಆತ ಪ್ರಾರ್ಥನೆ ಮಾಡಿದ. ಆತ ಮಾತನಾಡಿದ ಮತ್ತು ಆತ ಆಲಿಸಿದ. 'ಸರ್ವಂ ಖಲ್ವಿದಂ ಬ್ರಹ್ಮ.'

* * * *



# ಕೃತಿಯನ್ನು ಕುರಿತಂತೆ

ತಲೆಮಾರುಗಳುದ್ದಕ್ಕೂ ದೇವರನ್ನು ಮುಖಾಮುಖಿಯಾಗಿ ಕಂಡಿರುವ ಮತ್ತು ತಮ್ಮ ಜೀವಿತಾವಧಿಯಲ್ಲಿ 'ಆತ'ನೊಂದಿಗೆ ನಡೆದಾಡಿರುವ ಶ್ರೇಷ್ಠರಾದ ವ್ಯಕ್ತಿಗಳು ಕಾಣಿಸಿಕೊಂಡಿದ್ದಾರೆ. ಅವರು ವಿಭಿನ್ನವಾದ ಕಾಲಗಳಿಗೆ ಸೇರಿದವರಾಗಿರಬಹುದು ಮತ್ತು ವಿಭಿನ್ನ ದೇಶಗಳಲ್ಲಿ ಜನ್ಮತಳೆದವರಾಗಿರಬಹುದು. ಆದರೆ, ಅವರೆಲ್ಲರೂ ಬಾಳಿ ಬದುಕಿದ, ಓಡಾಡಿದ ಮತ್ತು ತಮ್ಮ ಸಂಪೂರ್ಣ ಅಸ್ತಿತ್ವವನ್ನು ಭಗವಂತನಲ್ಲಿ ಇರಿಸಿದ್ದ, ಅನಂತದತ್ತ ಪಯಣಿಸಿದ ಯಾತ್ರಿಕರಾಗಿದ್ದರು. ಅವರಲ್ಲಿ ಕೆಲವರು ಹುಟ್ಟಿನಿಂದಲೇ ತಮ್ಮ ಹೃದಯಗಳಲ್ಲಿ ಭಗವಂತನಿಗಾಗಿ ಈ ಸಹಜ ಒಲವು ಅಂತರ್ನಿವೇಶಗೊಂಡವರಾಗಿದ್ದರು. ಅಜ್ಞಾನದಿಂದಲಾಗಿ ಪ್ರಪಂಚದ ಪ್ರಲೋಭನೆಗಳಿಗೆ ಒತ್ತೆಯಿರಿಸಿದ್ದ ಮತ್ತೆ ಕೆಲವರ ಆತ್ಮಗಳು ಭಗವಂತನ ಮೂಲಕ ಪವಾಡಸದೃಶವಾಗಿ ವಿಮೋಚಿತಗೊಂಡುವು ಮತ್ತು ಅವರು ತಮ್ಮ ಜೀವನಗಳಲ್ಲಿ ಸನ್ಮಾರ್ಗದಲ್ಲಿ ತೊಡಗಿದರು. ಮತ್ತೂ ಕೆಲವರು ತಮ್ಮ ಭಕ್ತಿಗುಂಟಾದ ಅಡಚಣೆಗಳ ವಿರುದ್ಧ ಸ್ವಪ್ರಯತ್ನದಿಂದಲೇ ಹೋರಾಡಬೇಕಾಗಿತ್ತು ಮತ್ತು ಅಭಾವ, ಬಡತನ ಮತ್ತು ಕಿರುಕುಳವನ್ನು ಸಹ ಎದುರಿಸಬೇಕಾಗಿತ್ತು. ನಿಜವಾದ ಭಕ್ತರುಗಳೇ ಆಗಿದ್ದ ಅವರು, ತಮ್ಮ ಭಗವಂತನ ಅನ್ವೇಷಣೆಯಿಂದ ವಿಚಲಿತರಾಗದಿರುವಂತೆ ತಮ್ಮ ದೃಢನಿರ್ಧಾರಗಳನ್ನು ಬಲಪಡಿಸಿಕೊಳ್ಳಲು ಈ ಅಡಚಣೆಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಿಕೊಂಡರು. ಇವರಲ್ಲಿ ಭಗವತ್ಪರವಶರಾದ ಕೆಲವರು ಸಂತರು, ಪ್ರತಿಯೊಂದು ಯಾವುದರಿಂದ ಒಡಮೂಡಿದೆಯೋ ಅಂತಹ ಮಹಾಮೂಲದ ವೈಭವವನ್ನು ಸಾರಿಹೇಳುವ ಭಕ್ತಿಕಾವ್ಯದ ಸಂಗೀತದ ಮೊಳಗುಗಳಲ್ಲಿ ಬಹುವೇಳೆ ತಮ್ಮನ್ನು ತೊಡಗಿಸಿಕೊಂಡರು.

ದೇವರು ಈ ಪವಿತ್ರರಾದ ವ್ಯಕ್ತಿಗಳಿಗೆ ಅಭಿಮುಖವಾದ ಮತ್ತು ಅವರನ್ನು ತನ್ನೊಳಗೆ ಸೇರಿಸಿಕೊಂಡ ವಿಧಾನದ ಮಿನುಗುನೋಟವನ್ನು ನೋಡಲು ಈ ಕೃತಿ ಪ್ರಯತ್ನಿಸುತ್ತಿದೆ. ಏಕೈಕ ವಿಶ್ವವ್ಯಾಪಿ ಭಗವಂತನ ಈ ಭಕ್ತರುಗಳೊಂದಿಗೆ ಹೆಚ್ಚಿನ ಪರಿಚಯಕ್ಕೆ ಓದುಗನನ್ನು ಅವು ಆಹ್ವಾನಿಸುತ್ತೇವೆ ಎಂಬ ಭರವಸೆಯೊಂದಿಗೆ ಇವುಗಳನ್ನು ಪ್ರಕಟಿಸಲಾಗಿದೆ.

* * * *